

ದ್ವಿಲೋಹಶಿಲ್ಪ ರಚನಾ ಆದ್ಯಪ್ರವರ್ತಕ

ಎನ್.ಪಿ. ಶ್ರೀನಿವಾಸಾಚಾರ್ಯ

ಸಂ.: ಕವಿತ ಡಿ.ಕೆ.



ಕರ್ನಾಟಕ
ಕಲಾ ಅಕಾಡೆಮಿ

ದ್ವಿಲೋಹಶಿಲ್ಪ ರಚನಾ ಆದ್ಯಪ್ರವರ್ತಕ

ಎನ್.ಪಿ. ಶ್ರೀನಿವಾಸಾಚಾರ್ಯ

ದ್ವಿಲೋಹಶಿಲ್ಪ ರಚನಾ ಆದ್ಯಪ್ರವರ್ತಕ

ಎನ್.ಪಿ. ಶ್ರೀನಿವಾಸಾಚಾರ್ಯ

(1913 - 1992)

ಶ್ರೀಮತಿ ಶಾರದಮ್ಮನವರ ಬರಹ ಆಧಾರಿತ
ಸಂಗ್ರಹ ಮತ್ತು ಸಂಪಾದನೆ

ಕವಿತ ಡಿ.ಕೆ.

ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಕನ್ನಡ ಭವನ, ಮೇಲ್ಮನೆ, ಚಾಲುಕ್ಯ ವಿಭಾಗ, ಜೆ.ಸಿ.ರಸ್ತೆ,
ಬೆಂಗಳೂರು-೫೬೦೦೦೨

DwilohaShilpa Rachana AadyPravarthaka
N.P. Srinivasacharya
Book in Kannada compiled & edited by Kavitha D.K.,
Published by Smt. Indramma H.V., Registrar,
Karnataka Shilpakala Academy, Kannada Bhavana,
J.C. Road, Bangalore 560 002.

ಮೊದಲ ಮುದ್ರಣ : 2017

ಪುಟಗಳು: 88 + 16 = 96
ಆಕಾರ: 1/8 ಡೆಮಿ
ಕಾಗದ: 70 ಜಿ.ಎಸ್.ಎಂ. ಮ್ಯಾಪ್ಲಿಥೋ
ಪ್ರತಿಗಳು: 500

ಬೆಲೆ: ರೂ. 90

ಪ್ರಕಾಶಕರು: **ಶ್ರೀಮತಿ ಹೆಚ್.ವಿ. ಇಂದ್ರಮ್ಮ**
ರಿಜಿಸ್ಟ್ರಾರ್, ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಕನ್ನಡ ಭವನ, ಮೇಲ್ಮನೆ, ಚಾಲುಕ್ಯ ವಿಭಾಗ
ಜೆ.ಸಿ. ರಸ್ತೆ, ಬೆಂಗಳೂರು-560002

ವಿನ್ಯಾಸ: ಬಿ.ಎಸ್. ವಿದ್ಯಾರಣ್ಯ

ಮುದ್ರಣ: **ಸತ್ಯಾನಂದ ಪ್ರಿಂಟರ್ಸ್**
ಬೆಂಗಳೂರು 560 024

ಅಧ್ಯಕ್ಷರ ನುಡಿ

ಕರ್ನಾಟಕವು ಶಿಲ್ಪಕಲೆಯ ತವರೂರು ಎಂದು ಇಂದಿಗೂ ಕರೆಯಲ್ಪಟ್ಟಿದೆ. ಈ ನಾಡಿನಲ್ಲಿ ಅನೇಕ ಶಿಲ್ಪ ಶೈಲಿಗಳು ಹುಟ್ಟಿ, ಅವು ತಮ್ಮದೇ ಆದ ವಿಶಿಷ್ಟ ಸ್ಥಾನವನ್ನು ಪಡೆದಿವೆ. ರಾಜ್ಯದಲ್ಲಿ ಲೋಹ ಶಿಲ್ಪಕಲೆಯಲ್ಲಿ ತನ್ನದೇ ಆದಂತಹ ಛಾಪು ಮೂಡಿಸಿದವರಲ್ಲಿ ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶಿಲ್ಪಿ ಶ್ರೀ ಎನ್.ಪಿ. ಶ್ರೀನಿವಾಸಾಚಾರ್ಯ ಅವರು ಒಬ್ಬರು. ಅವರ ಕಲಾ ನೈಪುಣ್ಯತೆ ಎಂತಹ ನೋಡುಗರನ್ನು ಮಂತ್ರಮುಗ್ಧರನ್ನಾಗಿಸುತ್ತದೆ.. ಅತ್ಯಂತ ಕ್ಲಿಷ್ಟವಾದ ಹೊಯ್ಸಳ ಶಿಲ್ಪಕಲಾ ಶೈಲಿಯನ್ನು ಲೋಹಶಿಲ್ಪ ಪ್ರಕಾರದಲ್ಲಿ ರಚಿಸಿ ಹೊಸ ಸಂಪ್ರದಾಯವನ್ನೇ ಸೃಷ್ಟಿಸಿದವರು ಶ್ರೀಯುತರು. ಇಡೀ ಭಾರತದ ಶಿಲ್ಪಶಾಸ್ತ್ರದ ಇತಿಹಾಸದಲ್ಲಿ ಎರಡು ವಿಭಿನ್ನ ಲೋಹಗಳ ಅದೂ ಎರಡು ವಿಭಿನ್ನ ಉಷ್ಣಾಂಶಗಳನ್ನು ಮೇಳೈಸಿಕೊಂಡ ಲೋಹಗಳನ್ನು ಒಂದೇ ಮೂರ್ತಿಯಲ್ಲಿ ಅವಿರ್ಭವಿಸುವ ಮಹಾನ್ ಕಾರ್ಯವನ್ನು ಅಂದಿನ ಕಾಲದಲ್ಲಿಯೇ ಮಾಡಿದವರು ಶಿಲ್ಪಿ ಶ್ರೀ ಎನ್.ಪಿ. ಶ್ರೀನಿವಾಸಾಚಾರ್ಯರು. ಅಂದು ಅವರು ಶಿವನನ್ನು ತಾಮ್ರದಲ್ಲಿಯೂ ಶಕ್ತಿಯನ್ನು ಹೊಳೆಯುವ ಹಿತ್ತಾಳೆಯಲ್ಲಿಯೂ ರಚಿಸಿದ್ದು ಅಚ್ಚರಿ ಮೂಡಿಸಿದ

ಸಂಗತಿ. ಇದು ಶಿಲ್ಪಿ ಶ್ರೀ ಎನ್.ಪಿ. ಶ್ರೀನಿವಾಸಾಚಾರ್ಯ ಅವರಿಗೆ ಶಿಲ್ಪಕಲೆಯಲ್ಲಿ ಇದ್ದಂಥ ಮೇರು ಕೌಶಲವನ್ನು ಎತ್ತಿ ತೋರಿಸುತ್ತದೆ. ಇಂತಹ ಮಹಾನ್ ಕಲಾವಿದನ ಜನ್ಮಶತಮಾನೋತ್ಸವವನ್ನು ಆಚರಿಸಲು ಸರ್ಕಾರವು ಅನುದಾನ ಬಿಡುಗಡೆ ಮಾಡಿದ್ದು, ಸದರಿ ಯೋಜನೆಯಡಿ ಈಗಾಗಲೇ ಶ್ರೀಯುತರ ಜೀವನ ಚರಿತ್ರೆಯನ್ನೊಳಗೊಂಡ ಸಾಕ್ಷ್ಯಚಿತ್ರವನ್ನು ನಿರ್ಮಿಸಲಾಗಿರುತ್ತದೆ.

ಅಕಾಡೆಮಿಯಲ್ಲಿ ಇಂತಹ ಕಲಾವಿದರ ಲೇಖನಗಳನ್ನೊಳಗೊಂಡ ಒಂದು ಕಿರುಪುಸ್ತಕವಿದ್ದು, ಅದರ ಪ್ರತಿಗಳು ಮಾರಾಟಕ್ಕೆ ಲಭ್ಯವಿರುವುದಿಲ್ಲ. ಇಂತಹದ ಸಂಧರ್ಭದಲ್ಲಿ ಅವರ ಮೊಮ್ಮಗಳಾದ ಕು. ಕವಿತ ಡಿ.ಕೆ. ಇವರ ಮೂಲಕ ಅವರ ಸಂಪೂರ್ಣ ಜೀವನ ಚರಿತ್ರೆಯುಳ್ಳ ಪುಸ್ತಕವು ಹೊರಬರುತ್ತಿದೆ. ಇಂತಹ ಪುಸ್ತಕವನ್ನು ಕಲಾಭಿಮಾನಿಗಳು ಬಹಳ ಆತ್ಮೀಯವಾಗಿ ಸ್ವಾಗತಿಸುತ್ತಾರೆ ಎಂಬ ಭರವಸೆ ಇದೆ. ಪುಸ್ತಕದ ಲೇಖಕರಾದ ಕು. ಕವಿತ ಡಿ.ಕೆ. ಅವರಿಗೆ ಮತ್ತೊಮ್ಮೆ ಅಭಿನಂದನೆಗಳು. ಶ್ರೀಯುತರ ಸಾಕ್ಷ್ಯಚಿತ್ರ ನಿರ್ಮಿಸಲು ಹಾಗೂ ಪುಸ್ತಕ ಪ್ರಕಟಣೆಯಲ್ಲಿ ಸಹಕರಿಸಿದ ಶಿಲ್ಪಿ ಶ್ರೀ ಎನ್.ಪಿ. ಶ್ರೀನಿವಾಸಾಚಾರ್ಯ ಅವರ ಕುಟುಂಬದವರಿಗೆ ಅಕಾಡೆಮಿಯ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅಲ್ಲದೇ ಈ ಪುಸ್ತಕದ ಮುದ್ರಣಕ್ಕೆ ಸಹಕರಿಸಿದ ಅಕಾಡೆಮಿಯ ಕಾರ್ಯಕಾರಿ ಸಮಿತಿ ಸದಸ್ಯರಿಗೂ, ಅಕಾಡೆಮಿಯ ರಿಜಿಸ್ಟ್ರಾರ್ ಆದ ಶ್ರೀಮತಿ ಇಂದ್ರಮ್ಮ ಹೆಚ್.ವಿ. ಅವರಿಗೂ ಅಕಾಡೆಮಿಯ ಸಿಬ್ಬಂದಿಗಳಿಗೂ, ಈ ಪುಸ್ತಕವನ್ನು ಅಂದವಾಗಿ ಮುದ್ರಣ ಮಾಡುತ್ತಿರುವ ಮಾಲೀಕರು, ಸತ್ಯಾನಂದ ಪ್ರಿಂಟರ್ಸ್, ಬೆಂಗಳೂರು ಇವರಿಗೂ ತುಂಬು ಹೃದಯದ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಮಹಾದೇವಪ್ಪ ಶಂಭುಲಿಂಗಪ್ಪ ಶಿಲ್ಪಿ
ಅಧ್ಯಕ್ಷರು
ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಪ್ರಕಾಶಕರ ನುಡಿ

ಶಾಸ್ತ್ರಬದ್ಧ ಹಾಗೂ ಶ್ರೇಷ್ಠ ರೀತಿಯಲ್ಲಿ ಸರ್ವಾಂಗ ಸುಂದರ ಕೃತಿಗಳನ್ನೇ ರಚಿಸುವುದು ತಮ್ಮ ಪರಮಧ್ಯೇಯ ಎಂದು ಹೇಳುತ್ತಿದ್ದವರು ಶಿಲ್ಪಿ ಶ್ರೀ ಎನ್.ಪಿ. ಶ್ರೀನಿವಾಸಾಚಾರ್ಯರು. ಶ್ರೀಯುತರು ಯಾವುದೇ ಅಗ್ಗದ ಪ್ರಚಾರ ಹಾಗೂ ರೊಕ್ಕದ ಆಸೆಗೆ ಬಲಿಯಾಗದೇ ನೂವು ನಲಿವಿಗೆ ಕುಗ್ಗದೆ-ಹಿಗ್ಗದೆ, ವಕ್ರ ಮಾರ್ಗಗಳನ್ನು ಖಂಡಿಸುತ್ತಾ, ಯಾವುದಕ್ಕೂ ರಾಜಿಯಾಗದೇ ಉತ್ತುಂಗಕ್ಕೆ ಏರಿದವರು. ಇವರ ಆದರ್ಶ ಕಲಾನಿಷ್ಠೆ ಪರಿಶ್ರಮ ಹೊಸ ಜನಾಂಗದ ಕಲಾವಿದರಿಗೆ ಆದರ್ಶಪ್ರಾಯ. ಸಾಂಪ್ರದಾಯಿಕವಾಗಿ ಶಿಲ್ಪಕಲೆ ಬೆಳೆದು ಬಂದಿದ್ದು, ಲೋಹಶಿಲ್ಪದ ಕಲೆಗಳನ್ನು ಉಳಿಸಿ, ಬೆಳೆಸಿಕೊಂಡು ಬಂದವರಲ್ಲಿ ಶಿಲ್ಪಿ ಶ್ರೀ ಎನ್.ಪಿ. ಶ್ರೀನಿವಾಸಾಚಾರ್ಯ ಅವರು ಒಬ್ಬರು. ಇಂತಹ ಮಹಾನ್ ಕಲಾವಿದನ ಜನ್ಮಶತಮಾನೋತ್ಸವವನ್ನು ಆಚರಿಸಲು ಸರ್ಕಾರವು ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಯೋಜನೆಯಡಿ ಈಗಾಗಲೇ ಶ್ರೀಯುತರ ಜೀವನ ಚರಿತ್ರೆಯನ್ನೊಳಗೊಂಡ ಸಾಕ್ಷ್ಯಚಿತ್ರವನ್ನು ನಿರ್ಮಿಸಲಾಗಿರುತ್ತದೆ.

ಅಕಾಡೆಮಿಯಲ್ಲಿ ಇಂತಹ ಕಲಾವಿದರ ಒಂದು ಕಿರುಪುಸ್ತಕವಿದ್ದು, ಅದರ ಪ್ರತಿಗಳು ಮಾರಾಟಕ್ಕೆ ಲಭ್ಯವಿರುವುದಿಲ್ಲ. ಇಂತಹದ ಸಂದರ್ಭದಲ್ಲಿ ಅವರ ಮೊಮ್ಮಗಳಾದ ಕು. ಕವಿತ ಡಿ.ಕೆ. ಇವರ ಮೂಲಕ ಆ ಕಿರು ಪುಸ್ತಕವನ್ನು ಒಳಗೊಂಡಂತೆ ಅವರ ಸಂಪೂರ್ಣ ಜೀವನ ಚರಿತ್ರೆಯುಳ್ಳ ಪುಸ್ತಕವು ಹೊರಬರುತ್ತಿದೆ. ಇಂತಹ ಪುಸ್ತಕವನ್ನು ಕಲಾಭಿಮಾನಿಗಳು ಬಹಳ ಆತ್ಮೀಯವಾಗಿ ಸ್ವಾಗತಿಸುತ್ತಾರೆ ಎಂಬ ಭರವಸೆ ಇದೆ. ಪುಸ್ತಕದ ಲೇಖಕರಾದ ಕು. ಕವಿತ ಡಿ.ಕೆ. ಅವರಿಗೆ ಮತ್ತೊಮ್ಮೆ ಅಭಿನಂದನೆಗಳು. ಶ್ರೀಯುತರ ಸಾಕ್ಷ್ಯಚಿತ್ರ ನಿರ್ಮಾಣ ಹಾಗೂ ಪುಸ್ತಕ ಪ್ರಕಟಣೆಗೆ ಸಹಕರಿಸಿದ ಶಿಲ್ಪಿ ಶ್ರೀ ಎನ್.ಪಿ. ಶ್ರೀನಿವಾಸ ಆಚಾರ್ಯ ಅವರ ಕುಟುಂಬದವರಿಗೆ ಅಕಾಡೆಮಿಯ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅದೇ ರೀತಿ ಈ ಪುಸ್ತಕದ ಪ್ರಕಟಣೆಯಲ್ಲಿ ಸಹಕರಿಸಿದ ಅಕಾಡೆಮಿಯ ಅಧ್ಯಕ್ಷರಾದ ಶ್ರೀಯುತ ಮಹಾದೇವಪ್ಪ ಶಂಭುಲಿಂಗಪ್ಪ ಶಿಲ್ಪಿ ಅವರಿಗೂ, ಅಕಾಡೆಮಿಯ ಕಾರ್ಯಕಾರಿ ಸಮಿತಿ ಸದಸ್ಯರಿಗೂ, ಅಕಾಡೆಮಿಯ ಸಿಬ್ಬಂದಿಗಳಿಗೂ, ಈ ಪುಸ್ತಕವನ್ನು ಅಂದವಾಗಿ ಮುದ್ರಣ ಮಾಡುತ್ತಿರುವ ಮಾಲೀಕರು, ಸತ್ಯಾನಂದ ಪ್ರಿಂಟರ್ಸ್, ಬೆಂಗಳೂರು ಇವರಿಗೂ ತುಂಬು ಹೃದಯದ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಇಂದ್ರಮ್ಮ ಹೆಚ್.ವಿ.
ರಿಜಿಸ್ಟ್ರಾರ್
ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಸಂಪಾದಕರ ಮಾತು

ನಮ್ಮ ತಾತ ಶಿಲ್ಪಿ ಎನ್.ಪಿ. ಶ್ರೀನಿವಾಸಾಚಾರ್ಯರ ಮನೆಯೆಂದರೆ, ಹನ್ನೆರಡು ಮಕ್ಕಳ ತುಂಬು ಕುಟುಂಬ. ಪ್ರತಿಯೊಬ್ಬ ಮಕ್ಕಳ ಕುಟುಂಬದಲ್ಲಿ ಎರಡರಿಂದ ಮೂರು ಮೊಮ್ಮಕ್ಕಳು. ಗೌರಿ ಹಬ್ಬದಲ್ಲಿ ಎಲ್ಲರೂ ಅಜ್ಜಿ ತಾತನ ಮನೆಗೆ ಸಾಂಪ್ರದಾಯಿಕವಾಗಿ ಅಲಂಕಾರ ಮಾಡಿಕೊಂಡು ಹಬ್ಬವನ್ನು ಆಚರಿಸಲು ಸೇರುತ್ತಿದ್ದೆವು. ಪೂಜೆಯ ನಂತರ ಹೆಣ್ಣುಮಕ್ಕಳೆಲ್ಲಾ ಜೊತೆಗೂಡಿ ಮಂಗಳದ ಆರತಿ ಮಾಡಿ, ಹಿರಿಯರಾದ ತಾತ ಶ್ರೀನಿವಾಸಾಚಾರ್ಯರಿಗೆ ಹಾಗೂ ಅಜ್ಜಿ ಶಾರದಮ್ಮನವರಿಗೆ ಅಕ್ಷತೆಯನ್ನು ಕೊಟ್ಟು ಪಾದಗಳಿಗೆ ನಮಸ್ಕರಿಸುತ್ತಾ ಆಶೀರ್ವಾದವನ್ನು ಪಡೆಯುತ್ತಿದ್ದೆವು. ಎಲ್ಲರಿಗೂ ಆಶೀರ್ವಾದ ಮಾಡುವಾಗ ಇವರಿಬ್ಬರಲ್ಲಿ ಸಹನೆಯು ಕಡಿಮೆಯಾಗುತ್ತಿರಲಿಲ್ಲ. ಪ್ರತಿ ವರ್ಷ ಎಲ್ಲಾ ಮಕ್ಕಳನ್ನು ಹಾಗೂ ಮೊಮ್ಮಕ್ಕಳನ್ನು ನೋಡಿ ಸಂತೋಷದಿಂದ, ಪ್ರೀತಿಯಿಂದ ಎಲ್ಲರೊಟ್ಟಿಗೆ ಸಮಯವನ್ನು ಕಳೆಯುತ್ತಿದ್ದರು. ಇಂಥಹ ಸಾಂಪ್ರದಾಯಕ ಸಂಸ್ಕಾರವನ್ನು ಬೆಳೆಸಿದ ಇವರಿಬ್ಬರಿಗೆ ನನ್ನ ಅನಂತಾನಂತ ನಮಸ್ಕಾರಗಳು.

ನಮ್ಮ ತಾತ ಶ್ರೀನಿವಾಸಾಚಾರ್ಯರು ಬಹಳ ಗಂಭೀರ ಹಾಗೂ ಸೌಮ್ಯ ಸ್ವಭಾವದವರು. ಇವರು (ಮಾಸ್ಟರ್ ಕ್ರಾಫ್ಟ್ಸ್‌ಮನ್, ಆಲ್ ಇಂಡಿಯಾ ಹ್ಯಾಂಡಿಕ್ರಾಫ್ಟ್

ಬೋರ್ಡ್) ನಿವೃತ್ತರಾದ ಮೇಲೆ ಹಲವು ವರ್ಷಗಳನ್ನು ಕುಟುಂಬದ ಸದಸ್ಯರೊಂದಿಗೆ ಬೆಂಗಳೂರಿನಲ್ಲಿ ಕಳೆದರು. ಸಾಯಂಕಾಲ ದೂರದರ್ಶನದಲ್ಲಿ ಬರುತ್ತಿದ್ದ ವಾರ್ತೆಗಳನ್ನು ನೋಡುತ್ತಾ, ಕ್ರಿಕೆಟ್ ಪಂದ್ಯಗಳನ್ನು ವೀಕ್ಷಿಸುತ್ತಾ ಹಾಗೂ ಕೆಲವೊಮ್ಮೆ ಮೊದಲನೆ ಮಹಡಿಯ ಬಾಲ್ಕನಿಯಲ್ಲಿ ಕುರ್ಚಿಯನ್ನು ಹಾಕಿಕೊಂಡು ಕುಳಿತು, ದೂರದಿಂದಲೇ ಜನರನ್ನು ನೋಡುತ್ತಾ ತನ್ನ ಜೀವನದ ಹಲವು ಘಟನೆಗಳನ್ನು ನೆನಪು ಮಾಡಿಕೊಂಡು ಪತ್ನಿ ಶಾರದಮ್ಮನವರಲ್ಲಿ ಹಂಚಿಕೊಂಡು, ಶಿಲ್ಪಕಲೆಗೆ ಇದ್ದ ಗೌರವವನ್ನು ತಿಳಿಸುತ್ತಿದ್ದರು. ಶ್ರೀನಿವಾಸಾಚಾರ್ಯರು ಶಿಲ್ಪಕಲೆಯಲ್ಲಿನ ವೈಭವವನ್ನು ವೃದ್ಧಾಪ್ಯದಲ್ಲಿ ಅನುಭವಿಸುವುದಕ್ಕೆ ಪುಸ್ತಕಗಳನ್ನು ಓದುತ್ತಾ, ಹಲವು ಪ್ರಶ್ನೆಗಳಿಗೆ ಉತ್ತರವನ್ನು ಹುಡುಕುತ್ತಿದ್ದರು.

ಇದು ವೃದ್ಧಾಪ್ಯದ ವಿಷಯವಾದರೆ, ಇದಕ್ಕಿಂತ ಮುಂಚಿನ ವರುಷಗಳ ನೆನಪೆಂದರೆ ಒಬ್ಬ ನಿಷ್ಠಾವಂತ ಸಾಂಪ್ರದಾಯಕ ಶಿಲ್ಪಿ ಏಕಾಗ್ರಚಿತ್ತನಾಗಿ ಶರೀರ ಮತ್ತು ಮನಸ್ಸನ್ನು ಒಂದು ಮಾಡಿ, ಹಣೆಯಲ್ಲಿ ತ್ರಿಪುಂಡ್ರ, ಗಂಧ ಹಾಗೂ ಕುಂಕುಮವನ್ನು ಧರಿಸಿ, ಜನಿವಾರದ ಸಮೇತವಾಗಿ ಶ್ವೇತ, ಶುಭ್ರ ಕಚ್ಚೆಪಂಚೆಯನ್ನು ತೊಟ್ಟು, ಬಲಗೈನಲ್ಲಿ ಸುತ್ತಿಗೆ, ಎಡಗೈನಲ್ಲಿ ಉಳಿಯನ್ನು ಹಿಡಿದು, ಮಂಡಿಯನ್ನು ಮಡಚಿ ಕುಳಿತು, ಬೆನ್ನನ್ನು ಬಗ್ಗಿಸಿ, ತದೇಕಚಿತ್ತದಿಂದ ವಿಗ್ರಹವನ್ನು ನೋಡುತ್ತಾ, ಮಂತ್ರ ಜಪಿಸುತ್ತಾ ಲೋಹಗಳಿಗೆ ಶಿಲ್ಪಶಾಸ್ತ್ರದ ಸುತ್ತಿಗೆ ಪೆಟ್ಟುಗಳ ನಿನಾದವನ್ನು ಸೃಷ್ಟಿಸುತ್ತಾ, ಪೂರ್ವದಿಕ್ಕಿಗೆ ಕುಳಿತಿರುತ್ತಿದ್ದರು ತಾತ!

ಇದೆಲ್ಲವೂ ಮನೆಯ ಕೆಳಭಾಗದಲ್ಲಿದ್ದ ಸುಮಾರು 10x10 ಅಡಿ ಸುತ್ತಳತೆಯಲ್ಲಿದ್ದ ಅಂಗಡಿಯಲ್ಲಿ ನಡೆಯುತ್ತಿತ್ತು! ಇವರ ಸುತ್ತಲೂ ಶಿಲ್ಪಕೆತ್ತನೆಗೆ ಬೇಕಾಗುವ ಉಳಿಗಳು, ಸುತ್ತಿಗೆಗಳು, ಕೆತ್ತನೆಗೆ ಸಂಬಂಧಿಸಿದ ಇತರೆ ಸಾಮಗ್ರಿಗಳು, ಅಪೂರ್ಣವಾದ ಶಿಲ್ಪಗಳು, ವಿಗ್ರಹಗಳು, ಮೇಣ, ಜೇಡಿಮಣ್ಣು, ಬತ್ತದ ಹೊಟ್ಟು, ಲೋಹದ ಚೂರುಗಳು ಮುಂತಾದವುಗಳಿರುತ್ತಿದ್ದವು. ಶ್ವೇತ ವಸ್ತ್ರಧಾರಿಯಾಗಿದ್ದ ಶ್ರೀನಿವಾಸಾಚಾರ್ಯರು ಯಾವುದೇ ಸಂದರ್ಭದಲ್ಲಿಯೂ ಸಹ ತಮ್ಮಲ್ಲಿ ಬೆಳೆಸಿಕೊಂಡಿದ್ದ ಸಂಸ್ಕೃತಿಯನ್ನು ಬಿಟ್ಟು ಇರುತ್ತಿರಲಿಲ್ಲ. ಮಾತಿನಲ್ಲಾಗಲೀ ಕೃತಿಯಲ್ಲಾಗಲೀ ಅದನ್ನೇ ಪ್ರತಿಪಾದಿಸುತ್ತಿದ್ದರು ಮತ್ತು ಅದನ್ನೇ ಜೀವಿಸುತ್ತಿದ್ದರು ಕೂಡ. ಜೀವನವಿಡೀ ನಿಸ್ವಾರ್ಥಿಯಾಗಿ ಎಲ್ಲರಿಂದ ಗೌರವವನ್ನು ಸಂಪಾದಿಸಿದ್ದರು.

ಅವರ ಪತ್ನಿ ಅಂದರೆ ನಮ್ಮ ಅಜ್ಜಿ ಶಾರದಮ್ಮನವರು ಶ್ರೀನಿವಾಸಾಚಾರ್ಯರ ಜೀವನದುದ್ದಕ್ಕೂ ಸ್ನೇಹಿತೆಯಾಗಿ, ತಾಯಿಯಾಗಿ, ಸ್ಫೂರ್ತಿಯಾಗಿ ಅವರ ಎಲ್ಲಾ ಕೈಂಕರ್ಯಗಳಲ್ಲಿ ಜೊತೆಯಾಗಿ ನಡೆದವರು. ಹನ್ನೆರಡನೇ ವಯಸ್ಸಿನಲ್ಲಿ ಶ್ರೀನಿವಾಸಾಚಾರ್ಯರೊಂದಿಗೆ ಮದುವೆಯಾಗಿ ಇವರೊಂದಿಗೆ ಹನ್ನೆರಡು

ಮಕ್ಕಳನ್ನು ಪಡೆದು, ಸಂಸ್ಕಾರದೊಂದಿಗೆ ಮಕ್ಕಳನ್ನು ಬೆಳೆಸಿ, ಎಲ್ಲರ ಮದುವೆಯನ್ನು ಮಾಡಿ, ಮೊಮ್ಮಕ್ಕಳನ್ನು ಸುಧಾರಿಸಿ, ತಾತ ಶ್ರೀನಿವಾಸಾಚಾರ್ಯರ ನೆರಳಾಗಿ ತಮ್ಮ ಜೀವನವನ್ನು ಸವೆಸಿದವರು.

1992ರಲ್ಲಿ ಶ್ರೀನಿವಾಸಾಚಾರ್ಯರ ನಿಧನದ ನಂತರ, ನಾಲ್ಕೈದು ವರ್ಷಗಳನ್ನು ಎಲ್ಲಾ ಮಕ್ಕಳ ಮನೆಗಳಲ್ಲಿ ತಂಗಿದ್ದು ಎಲ್ಲರ ಸುಖ ದುಃಖಗಳಲ್ಲಿ ಭಾಗಿಯಾಗಿ, ವೃದ್ಧಾಪ್ಯದ ಜೀವನವನ್ನು ಸಾಗಿಸಿದರು. ಈ ಸಂದರ್ಭದಲ್ಲಿಯೇ ಶಾರದಮ್ಮನವರು ಶ್ರೀನಿವಾಸಾಚಾರ್ಯರ ನೆನಪುಗಳ ಬುತ್ತಿಯನ್ನು ತೆಗೆದು ಪತಿಯ ಜೀವನ ಚರಿತ್ರೆಯನ್ನು 1996ರಲ್ಲಿ ಬರೆದರು.

ಎರಡನೆಯ ಬಾರಿ ಸಂಕ್ಷಿಪ್ತವಾಗಿ 1997ರಲ್ಲಿ ಹದಿನೈದು ಪುಟಗಳ ಹಸ್ತಪ್ರತಿಯನ್ನು ಸಿದ್ಧಪಡಿಸಿದರು. ಹಿರಿಯ ಸಹೋದರರಾದ ನಾ. ಬಾ. ಚಂದ್ರಶೇಖರಾಚಾರ್ಯರಿಗೆ ತಮ್ಮ ಅನುಭವಕ್ಕೆ ನಿಲುಕಿದ ಶಿಲ್ಪಿ ಶ್ರೀನಿವಾಸಾಚಾರ್ಯರ ಜೀವನವನ್ನು ಸುಮಾರು ನಲವತ್ತೈದು ಪುಟಗಳಲ್ಲಿ ವರ್ಣಿಸಿದ್ದಾರೆ.

ಶಾರದಮ್ಮನವರು ಹಸ್ತಪ್ರತಿಯೊಂದಿಗೆ ಶ್ರೀನಿವಾಸಾಚಾರ್ಯರ ಬಗ್ಗೆ ಪ್ರಕಟವಾಗುತ್ತಿದ್ದ ಲೇಖನಗಳನ್ನು, ಶಿಲ್ಪಗಳ ಛಾಯಾಚಿತ್ರಗಳನ್ನು, ಭಾವಚಿತ್ರಗಳನ್ನು, ಪ್ರಶಂಸೆಯ ಪತ್ರಗಳನ್ನು ಜೊತೆಯಲ್ಲಿಯೇ ತೆಗೆದುಕೊಂಡು ಹೋಗಿ, ಹಲವರಲ್ಲಿ ಶ್ರೀನಿವಾಸಾಚಾರ್ಯರ ಜೀವನಚರಿತ್ರೆಯನ್ನು ಪುಸ್ತಕದ ರೂಪದಲ್ಲಿ ಪ್ರಕಟಿಸಬೇಕೆಂದು ವಿನಂತಿಸಿಕೊಂಡಿದ್ದರು. ಆಗ ಯಾರೂ ಸ್ಪಂದಿಸಿರಲಿಲ್ಲ. ಅಜ್ಜಿಗೆ ನಿರಾಶೆಯಾದರೂ ಸಹ ಎಲ್ಲಿಯೂ ಕುಗ್ಗದೆ ಮೊಮ್ಮಗನಾದ ನಾಗಾರ್ಜುನನ ಮೂಲಕ ಕರ್ನಾಟಕದ ಆಗಿನ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣರವರಿಗೆ ಪತ್ರ ಬರೆಸಿ ಶ್ರೀನಿವಾಸಾಚಾರ್ಯರ ಜೀವನ ಚರಿತ್ರೆಯ ಪುಸ್ತಕವನ್ನು ಬಿಡುಗಡೆ ಮಾಡಬೇಕೆಂದು ವಿನಂತಿಸಿಕೊಂಡಿದ್ದರು.

2000ದಿಂದ 2002ನೇ ಇಸವಿಯವರೆಗೆ ನನ್ನ ಹಾಗೂ ಅಜ್ಜಿಯ ಭೇಟಿ ಹಲವು ಬಾರಿ ಆಗಿತ್ತು. ಪ್ರತಿಯೊಂದು ಭೇಟಿಯಲ್ಲೂ ಸಹ ತಾತನ ಬಗ್ಗೆ ಮಾತನಾಡುತ್ತಿದ್ದೆವು. ಅಜ್ಜಿಯು, ತಾತನಲ್ಲಿದ್ದ ಶಿಲ್ಪಿಯ ಗುಣಗಳನ್ನು ವರ್ಣಿಸುತ್ತಾ, ಶಿಲ್ಪಗಳ ಸೌಂದರ್ಯಗಳನ್ನು ನೆನೆಯುತ್ತಾ, ತಾತನವರಿಗೆ ಸಿಕ್ಕ ಗೌರವಗಳನ್ನು ತಿಳಿಸುತ್ತಾ ಅವರ ಕನಸುಗಳನ್ನು ನನ್ನಲ್ಲಿ ಬಿತ್ತನೆ ಮಾಡಿದರು. ನಾನು ಅಲ್ಲಿಯವರೆಗೂ ತಾತನ ಬಗ್ಗೆ ವಿಷಯಗಳನ್ನು ಅರಿತಿದ್ದರೂ, ತಾತನ ಪ್ರತಿಭೆ ಹಾಗೂ ತಾತ ಮಾಡಿದ ಶಿಲ್ಪಗಳ ಮಹತ್ವಗಳನ್ನು ತಿಳಿದಿರಲಿಲ್ಲ. ನನ್ನಲ್ಲಿದ್ದ ತಾತನವರ ವಿಷಯಗಳಿಗೆ ಜೀವಕೊಟ್ಟವರು ನನ್ನ ಅಜ್ಜಿ ಶಾರದಮ್ಮನವರು!

ಪುಸ್ತಕ ಬಿಡುಗಡೆಯ ಕುರಿತು ಸಕಾರಾತ್ಮಕವಾಗಿ ಸ್ಪಂದಿಸಿದ

ಮುಖ್ಯಮಂತ್ರಿಗಳ ಪತ್ರ ತಲುಪುವಷ್ಟರಲ್ಲಿ ತಡವಾಗಿತ್ತು. ನಮ್ಮ ಅಜ್ಜಿ 2002ರಲ್ಲಿ ದೈವಾಧೀನರಾಗಿದ್ದರು.

ಅಜ್ಜಿಯ ನಿಧನದ ನಂತರ ನನಗೂ ಗೊತ್ತಿಲ್ಲದಂತೆ ಅಜ್ಜಿ ಬಿತ್ತಿದ್ದ ಕನಸಿನ ಬೀಜಗಳು ಮೊಳಕೆಯೊಡೆದು, ಆಲದಮರದ ಬಿಳಲುಗಳಂತೆ ನನ್ನ ನಾಡಿಯಲ್ಲೆಲ್ಲಾ ಬೇರೂರತೊಡಗಿತ್ತು. ಅಷ್ಟರಲ್ಲಿ ಶ್ರೀಯುತ ಮರಿಶಾಮಾಚಾರ್ಯರು ಶ್ರೀನಿವಾಸಾಚಾರ್ಯರ ಕುಟುಂಬದೊಡನೆ ಸ್ಪಂದಿಸಿ, ಪುಸ್ತಕ ಪ್ರಕಟಣೆಗೆ ಬೇಕಾಗಿದ್ದ ಎಲ್ಲಾ ವಿಷಯಗಳನ್ನು ಸಂಗ್ರಹಿಸಿ, ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ವತಿಯಿಂದ ತಾತನವರ ಜೀವನದ ಬಗೆಗಿನ ಕೈಪಿಡಿಯನ್ನು 2003ರಲ್ಲಿ ಬಿಡುಗಡೆ ಮಾಡಿದರು. ಹಲವು ಯುವ ಶಿಲ್ಪಿಗಳಿಗೆ ಈ ಕೈಪಿಡಿ ಮಾರ್ಗದರ್ಶನ ನೀಡಿತು, ಸಮಕಾಲೀನ ಶಿಲ್ಪಿಗಳಿಗೆ ತಾತನವರ ವೃತ್ತಿ ಜೀವನದ ಶಿಸ್ತು ಮತ್ತು ಬದ್ಧತೆಯನ್ನು ಎತ್ತಿ ತೋರಿಸಿತು.

2011ರಲ್ಲಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಅಧ್ಯಕ್ಷರಾಗಿದ್ದ ಡಾ. ಜಿ. ಜ್ಞಾನಾನಂದ ಅವರಲ್ಲಿ ಶ್ರೀನಿವಾಸಾಚಾರ್ಯರ ಜೀವನ ಚರಿತ್ರೆಯನ್ನು ಪುಸ್ತಕ ಹಾಗೂ ವ್ಯಕ್ತಿಚಿತ್ರ ನಿರ್ಮಾಣ ಮಾಡಬೇಕೆಂದು ಮನವಿಯನ್ನು ಕೊಟ್ಟೆವು. ನನ್ನ ಅಜ್ಜಿಯ ಹಾಗೂ ನಮ್ಮೆಲ್ಲರ ಆಸೆಗಳನ್ನು ಪೂರೈಸುವುದಕ್ಕೆ ಮುಂದಾದ ಕರ್ನಾಟಕ ಶಿಲ್ಪಕಲಾ ಅಕಾಡೆಮಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ಶಿಲ್ಪಿ ಎನ್.ಪಿ. ಶ್ರೀನಿವಾಸಾಚಾರ್ಯರ ಜೀವನವನ್ನು ಕುರಿತಾದ ವ್ಯಕ್ತಿಚಿತ್ರವನ್ನು ಡಾ. ರಾಜು ಕಂಬಾರರು ನಿರ್ಮಿಸಿ ಕೊಟ್ಟಿದ್ದು, ಪುಸ್ತಕದ ರೂಪದಲ್ಲಿನ ಶ್ರೀ ಶ್ರೀನಿವಾಸಾಚಾರ್ಯರ ಜೀವನವನ್ನು ಬರೆಯಲು ನನಗೆ ಅನುವು ಮಾಡಿಕೊಟ್ಟಿದ್ದಾರೆ. ಇದಕ್ಕಾಗಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಗೆ ನಾವೆಲ್ಲರೂ ಋಣಿಯಾಗಿದ್ದೇವೆ. ಶಿಲ್ಪಕಲಾ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಮಹಾದೇವಪ್ಪ ಶಂಭುಲಿಂಗಪ್ಪ ಶಿಲ್ಪಿ ಹಾಗೂ ಪ್ರತಿ ಹಂತದಲ್ಲಿ ಪ್ರೋತ್ಸಾಹಿಸಿದ ರಿಜಿಸ್ಟ್ರಾರ್ ಶ್ರೀಮತಿ ಇಂದ್ರಮ್ಮ ಹೆಚ್.ವಿ. ಅವರಿಗೂ ನನ್ನ ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸುತ್ತೇನೆ.

ನಂದಿನಿ ಲೇಔಟ್‌ನಲ್ಲಿರುವ ಪ್ರಾದೇಶಿಕ ವಿನ್ಯಾಸ ಮತ್ತು ತಾಂತ್ರಿಕ ಅಭಿವೃದ್ಧಿ ಕೇಂದ್ರದಲ್ಲಿರುವ ತಾತ ಮಾಡಿದ್ದ ಶಿಲ್ಪಗಳನ್ನು ತೋರಿಸಿ ಪ್ರೋತ್ಸಾಹಿಸಿದ ಅಲ್ಲಿನ ಎಲ್ಲಾ ಅಧಿಕಾರಿಗಳು ಹಾಗೂ ಸಹಾಯಕ ನಿರ್ದೇಶಕರಾದ ಶ್ರೀ ಸಶಿಧರ್ ಅವರಿಗೆ ಹಾಗೂ ಶ್ರೀಮತಿ ಸುಮಿತ್ರಾ ಅವರಿಗೆ ನನ್ನ ಅನಂತಾನಂತ ಧನ್ಯವಾದಗಳು.


ಹಲವು ತಿಂಗಳುಗಳು ಅಜ್ಜಿ ದಿ. ಶಾರದಮ್ಮ ಅವರು ತಾತನವರ ಬಗ್ಗೆ ಬರೆದಿದ್ದ ಹಸ್ತಪ್ರತಿಯನ್ನು ಓದಿ, ಭಾವನಾತ್ಮಕವಾಗಿ ಬರೆದಿದ್ದ ಅಜ್ಜಿಯ ಪದಗಳಲ್ಲಿ ಉಸಿರಾಡಿ, ತಾತ ದಿ. ನಾ.ಚಾ. ಚಂದ್ರಶೇಖರಾಚಾರ್ಯರು

ಬರೆದಿದ್ದ ಕೃತಿಯಿಂದ ಸ್ಪೂರ್ತಿಯನ್ನು ಸಂಪಾದಿಸಿದೆ. ನಾಗಮಂಗಲ, ಮೈಸೂರು, ಧರ್ಮಸ್ಥಳ, ಬೆಂಗಳೂರಿನಲ್ಲಿರುವ ಹಲವು ಶಿಲ್ಪಗಳನ್ನು, ವಿಗ್ರಹಗಳನ್ನು ನೋಡಿ, ಸ್ಪರ್ಶಿಸಿ, ಅದಕ್ಕೆಲ್ಲಾ ದಕ್ಕುತ್ತಿರುವ ಭದ್ರತೆ, ಗೌರವವನ್ನು ಕಂಡಾಗಲೇ ನನಗೆ ತಾತನ ಜೀವನ ಪರಿಚಯವಾದದ್ದು. ತದನಂತರ ತಾತನ ಹತ್ತಿರದ ಸಂಬಂಧಿಕರಲ್ಲಿ, ಮಕ್ಕಳಲ್ಲಿ, ಶಿಲ್ಪಿಗಳಿಂದ ಶ್ರೀನಿವಾಸಾಚಾರ್ಯರ ಜೀವನ ಶೈಲಿಯ ಬಗ್ಗೆ ತಿಳಿದುಕೊಂಡು, ಅವರು ಮಾಡಿದ್ದ ಶಿಲ್ಪಗಳ ಮೇಲಿನ ಪ್ರೀತಿ ಗೌರವಗಳ ಬಗ್ಗೆ ತಿಳಿದುಕೊಂಡೆ. ಶ್ರೀನಿವಾಸಾಚಾರ್ಯರಲ್ಲಿದ್ದ ಶಿಲ್ಪಗಳ ಹಾಗೂ ಶಿಲ್ಪಿಗಳ ಮೇಲಿದ್ದ ಬಾಂಧವ್ಯವನ್ನು ಕಂಡೆ. ಶ್ರೀನಿವಾಸಾಚಾರ್ಯರ ಮಕ್ಕಳಾದ ದಿ. ಎನ್.ಎಸ್. ಡಂಕಣೇಶ್ವರ ಸ್ವಾಮಿಯವರಲ್ಲಿದ್ದ ಶಿಲ್ಪಗಳನ್ನು ನೋಡಿ, ಎನ್. ಎಸ್. ಸುಜ್ಞಾನಮೂರ್ತಿಯವರಲ್ಲಿ ಹಾಗೂ ಶಿಲ್ಪಿ ಎನ್.ಎಸ್. ಜನಾರ್ಧನ ಮೂರ್ತಿಯವರಲ್ಲಿ ಚರ್ಚಿಸಿ, ಮಗಳು ನಿರ್ಮಲಾವತಿ (ನನ್ನ ತಾಯಿ) ಅವರಿಂದ ಹಲವು ವಿಷಯಗಳನ್ನು ತಿಳಿದು, ಅಜ್ಜಿಯ ಸಂಗ್ರಹದಲ್ಲಿದ್ದ ಲೇಖನಗಳನ್ನು, ಪತ್ರಗಳನ್ನು ಸಂಗ್ರಹಿಸಿಕೊಂಡು, ಡಿಸೈನ್ ಸೆಂಟರ್‌ನಲ್ಲಿದ್ದ ದ್ವಿಲೋಹ ಹಾಗೂ ಲೋಹಶಿಲ್ಪಗಳನ್ನು ನೋಡಿ, ನನ್ನ ಗುರುಗಳಾದ ಪ್ರೊ. ಚೂಡಾಮಣಿ ನಂದಗೋಪಾಲ್‌ರವರ ಆಶೀರ್ವಾದದೊಂದಿಗೆ ಹಾಗೂ ಮೈಸೂರಿನ ಎಚ್.ಎಮ್. ವರದಾಚಾರ್ಯರ ಸಲಹೆಗಳೊಂದಿಗೆ ನನ್ನ ಸಾಮರ್ಥ್ಯವಿದ್ದಷ್ಟು ಪ್ರಯತ್ನಿಸಿ ಆಕಾಶದೆತ್ತರಕ್ಕೆ ಬೆಳೆದಿರುವ ಶಿಲ್ಪಿಯಾದ ತಾತನವರ ಬಗ್ಗೆ ಬರೆದಿದ್ದೇನೆ. ಯಾವುದೇ ಲೋಪದೋಷಗಳಿದ್ದರೆ, ಕ್ಷಮಿಸಿ ಹಾಗೂ ನಿಮ್ಮ ಅನಿಸಿಕೆಯೊಂದಿಗೆ ಪತ್ರ ಬರೆಯಿರಿ. ನಿಮ್ಮಿಂದ ಪ್ರೋತ್ಸಾಹವನ್ನು ಅಪೇಕ್ಷಿಸುತ್ತಿರುವೆ. ಹಾಗೂ ಪಂಚಭೂತಗಳು ಯುಗಶಿಲ್ಪಿ, ವರಶಿಲ್ಪಿ ಎನ್.ಪಿ. ಶ್ರೀನಿವಾಸಾಚಾರ್ಯರ ಅತ್ಮವನ್ನು ಮತ್ತೆ ಸೇರಿಹಿಡಿದು, ನಮ್ಮೊಂದಿಗೆ ಮರುಜನ್ಮ ಪಡೆಯುವಂತಾಗಲಿ, ಮತ್ತೊಮ್ಮೆ ಶಿಲ್ಪಕಲಾ ಪ್ರಪಂಚಕ್ಕೆ ಅದ್ಭುತ ಶಿಲ್ಪಗಳ ಸುರಿಮಳೆಯಾಗಲಿ ಎಂದು ಆಶಿಸುತ್ತಾ ಈ ಬರಹವನ್ನು ತಮ್ಮೆಲ್ಲರಿಗೂ ಅರ್ಪಿಸುತ್ತೇನೆ.

– ಕವಿತ ಡಿ.ಕೆ.
kavidk@gmail.com

ಕೃತಜ್ಞತೆಗಳು

* ಶ್ರೀಮತಿ ಶಾರದಮ್ಮ
  (ಎನ್.ಪಿ. ಶ್ರೀನಿವಾಸಾಚಾರ್ಯರ ಧರ್ಮಪತ್ನಿ)
* ಶ್ರೀ ನಾ.ಭಾ. ಚಂದ್ರಶೇಖರಾಚಾರ್ಯ
  (ಶ್ರೀಮತಿ ಶಾರದಮ್ಮನವರ ಸ್ವಂತ ಅಣ್ಣ)
* ಶ್ರೀ ಎಚ್.ಎಂ. ವರದಾಚಾರ್ಯ (ನಿವೃತ್ತ ತಹಸೀಲ್ದಾರ್, ಸೋದರ ಸಂಬಂಧಿ)
* ಪ್ರೊ. ಚೂಡಾಮಣಿ ನಂದಗೋಪಾಲ್
  (ನನ್ನ ಗುರು, ಕಲಾ ಇತಿಹಾಸಕಾರರು)
* ಡಾ. ರಾಜು ಕಂಬಾರ (ನಿರ್ಮಾಪಕರು)
* ಶ್ರೀ ಎನ್.ಎಸ್. ಸುಜ್ಞಾನ ಮೂರ್ತಿ
  (ಎನ್.ಪಿ. ಶ್ರೀನಿವಾಸಾಚಾರ್ಯರ ಹಿರಿಯ ಮಗ)
* ಶಿಲ್ಪಿ ಶ್ರೀ ಎನ್.ಎಸ್. ಜನಾರ್ಧನ ಮೂರ್ತಿ
  (ಎನ್.ಪಿ. ಶ್ರೀನಿವಾಸಾಚಾರ್ಯರ 5ನೇ ಮಗ)
* ಶ್ರೀಮತಿ ನಿರ್ಮಲಾ ಕೃಷ್ಣಚಾರಿ
  (ನನ್ನ ತಾಯಿ, ಎನ್.ಪಿ. ಶ್ರೀನಿವಾಸಾಚಾರ್ಯರ ಹಿರಿಯ ಪುತ್ರಿ)
* ಮಾನ್ಯ ವೀರೇಂದ್ರ ಹೆಗಡೆ
  (ಧರ್ಮಾಧಿಕಾರಿಗಳು, ಧರ್ಮಸ್ಥಳ)
* ಶ್ರೀ ಟಿ.ಎಸ್. ಸುಬ್ರಹ್ಮಣ್ಯ
  ಉಪ ನಿರ್ದೇಶಕರು, ಮೈಸೂರು ಅರಮನೆ
* ಶಿಲ್ಪ ಸಿದ್ಧಾಂತಿ ಸಿದ್ಧಲಿಂಗ ಸ್ವಾಮಿ ಅವರ ಕುಟುಂಬ
* ಶಿಲ್ಪಿ ಶ್ರೀ ಎನ್.ಜಿ. ವೆಂಕಟೇಶಮೂರ್ತಿ, ನಾಗಮಂಗಲ
* ಶ್ರೀ ಡಿ. ರತ್ನಾಕರ ಆಚಾರ್, ಧರ್ಮಸ್ಥಳ
* ಶ್ರೀ ಪುಷ್ಪದಂತ (ಧರ್ಮಸ್ಥಳ ಪ್ರಾಚ್ಯವಸ್ತು ಸಂಗ್ರಹಾಲಯ)



ಶಿಲ್ಪಿ ಶ್ರೀ ಎನ್.ಪಿ. ಶ್ರೀನಿವಾಸಾಚಾರ್ಯರು

13–03–1913 – 2–11–1992

ಪರಿವಿಡಿ

೧. ಶಿಲ್ಪಿಯ ಪರಿಚಯ

ವರ ಶಿಲ್ಪಿ ಎನ್.ಪಿ. ಶ್ರೀನಿವಾಸಾಚಾರ್ಯರು ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯಲ್ಲಿನ ನಾಗಮಂಗಲದಲ್ಲಿ ತಂದೆ ಶ್ರೀ ಪುಟ್ಟಾಚಾರ್ಯರು, ತಾಯಿ ಶ್ರೀಮತಿ ನಂಜಮ್ಮನವರ ಹಿರಿಯ ಪುತ್ರರಾಗಿ 1913ರಲ್ಲಿ ಜನಿಸಿದರು, ಕರ್ನಾಟಕದ ಲೋಹ ಶಿಲ್ಪಿಗಳ ಹೆಸರಿನ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದು, ಕಲಾತ್ಮಕ ಮನಸ್ಸನ್ನು ಹೊಂದಿದ್ದು, ಪ್ರತಿಷ್ಠಿತ ಶಿಲ್ಪಿ, ನಿಸ್ವಾರ್ಥಿ ಹಾಗೂ ಸಾಮಾನ್ಯ ಜೀವನ ಶೈಲಿಯಲ್ಲಿ ವಿಜೃಂಭಿಸಿದ ಸೌಮ್ಯ ಮನಸ್ಸಿನ ವ್ಯಕ್ತಿಯೆಂದು ಗುರುತಿಸಲ್ಪಟ್ಟವರು.

ಶಿಲ್ಪಕಲೆಯನ್ನು ರಕ್ತಕಣಗಳಲ್ಲಿ ಬೆರೆಸಿಕೊಂಡು, ಜೀವನವನ್ನೆಲ್ಲಾ ಲೋಹದ ಸಾಂಪ್ರದಾಯಿಕ ಶಿಲ್ಪರಚನೆಯಲ್ಲಿ ತೊಡಗಿಸಿ, ನಾಲ್ಕು ಮುಖ್ಯ ಸ್ಥಳಗಳಲ್ಲಿ ಶಿಲ್ಪಕೆತ್ತನೆಯಿಂದ ಗೌರವವನ್ನು ಗಳಿಸಿದ್ದಾರೆ. ನಾಗಮಂಗಲದುದ್ದಕ್ಕೂ ಶಿಲ್ಪವೃತ್ತಿಯನ್ನು ಪ್ರಾರಂಭಿಸಿ, ಮೈಸೂರಿನಲ್ಲಿ ನೆಲೆಸಿ, ಧರ್ಮಸ್ಥಳ ಕ್ಷೇತ್ರದಲ್ಲಿ ತಮ್ಮ ನೈಪುಣ್ಯತೆಯನ್ನು ಮೆರೆದು ಮತ್ತು ಬೆಂಗಳೂರಿಗೆ ಸೇರಿ ಕೊನೆಯವರೆಗೂ, ಉಸಿರಾಟಕ್ಕಿಂತ ಹೆಚ್ಚಾಗಿ ಸುತ್ತಿಗೆಯ ಮತ್ತು ಉಳಿಗಳ ನಿನಾದದೊಂದಿಗೆ ಹಲವು ಅದ್ಭುತ, ಸುಂದರವಾದ, ಶಾಸ್ತ್ರಬದ್ಧವಾದ ಶಿಲ್ಪಗಳನ್ನು ಸೃಷ್ಟಿಸಿದ್ದಾರೆ. ತಮ್ಮ ಕಲ್ಪನೆಗಳನ್ನು ನನಸ್ಸನ್ನಾಗಿ ಮಾಡಿ, ಶಿಲ್ಪಿಗಳಿಗೆ ಹಾಗೂ ಬರಹಗಾರರಿಗೆ ಇಂದಿಗೂ ಆಶ್ಚರ್ಯದ ಅದ್ಭುತ ಅನುಭವವನ್ನು ಕೊಡುವಂತಹ ಶಿಲ್ಪಕೃತಿಗಳನ್ನು ರಚಿಸಿದ್ದಾರೆ. ಇವರ ಶಿಲ್ಪಕೆತ್ತನೆಗಳು ಭಾರತದ ಹಲವೆಡೆ ಹರಡಿದೆ. ಗುಜರಾತಿನ ಭರತಪುರ, ಬದರಿನಾಥ ದೇವಸ್ಥಾನದಲ್ಲಿ ನೇಪಾಳ, ಲಂಡನ್, ಮೈಸೂರು, ಧರ್ಮಸ್ಥಳ, ಬೆಂಗಳೂರಿನ ಪ್ರಾದೇಶಿಕ ವಿನ್ಯಾಸ ಹಾಗೂ ತಾಂತ್ರಿಕ ಅಭಿವೃದ್ಧಿ ಕೇಂದ್ರದಲ್ಲಿ ಶಿಲ್ಪಗಳು ರಾರಾಜಿಸುತ್ತಿವೆ.

ಶ್ರೀನಿವಾಸಾಚಾರ್ಯರು ಹುಟ್ಟಿನಿಂದಲೆ ಉಳಿಗಳ ಶಬ್ದದೊಂದಿಗೆ ಬೆಳೆದು, ಮೇಣ ಹಾಗೂ ಜೇಡಿಮಣ್ಣಿನ ಜೊತೆಯಲ್ಲಿ ಆಟವಾಡುತ್ತಾ, ತಂದೆ, ಚಿಕ್ಕಪ್ಪ ಮತ್ತು ದೊಡ್ಡಪ್ಪನವರಿಂದ ಶಿಲ್ಪರಚನೆಯನ್ನು ಕಲಿಯುತ್ತಾ ಶಿಲ್ಪಾಸಕ್ತಿಯನ್ನು ಬೆಳೆಸಿಕೊಂಡರು, ಕೆಲವೇ ವರ್ಷಗಳ ಕಾಲ ಶಾಲೆಗೆ ಹೋಗಿ, ಬೇಕಿದ್ದಷ್ಟು ಓದು ಬರಹ ಕಲಿತರು. ತಂದೆ ಮಾಡುತ್ತಿದ್ದ 'ಕಡೆತದ ಕೆಲಸ'(Turning)ಗಳಲ್ಲಿ ಸಹಾಯ ಮಾಡುತ್ತಿದ್ದರು. ತಾವು ವಾಸಿಸುತ್ತಿದ್ದ ಅಗ್ರಹಾರದಲ್ಲಿ ಪ್ರತಿದಿನ ನಡೆಯುತ್ತಿದ್ದ ಶಿಲ್ಪಿಗಳ ಕೆಲಸಗಳಲ್ಲಿ ಭಾಗಿಯಾಗುತ್ತ, ಒಳುಂಡೆಯನ್ನು ಕಟ್ಟುವುದನ್ನು ಕಲಿತು, ಕುಸುರಿ ಕೆಲಸಗಳನ್ನು ಮಾಡುತ್ತಾ ಶಿಲ್ಪವೃತ್ತಿಗೆ ಪಾದಾರ್ಪಣೆ ಮಾಡಿದರು. ಉಪನಯನವಾದ ನಂತರ, ನಾಗಮಂಗಲದಲ್ಲಿ ಹೆಸರಾಂತ ಪಂಚಶಿಲ್ಪಿ ಯಜಮಾನ್ ಶ್ರೀಕಂಠಾಚಾರ್ಯರಲ್ಲಿಗೆ ಚಿನ್ನದ ಕೆಲಸವನ್ನು ಕಲಿಯಲು ಹೋದರು. ಆದರೆ ಶಿಲ್ಪ ರಚನೆಯಲ್ಲಿ ಆಸಕ್ತಿ ಹೊಂದಿದ್ದ ಶ್ರೀನಿವಾಸಾಚಾರ್ಯರು ತಂದೆಯಲ್ಲಿ ಚರ್ಚಿಸಿ ಶಿಲ್ಪರಚನೆಯನ್ನು ಮುಂದುವರೆಸಿದರು. ಕಲ್ಲಿನಲ್ಲಿ, ಮರದಲ್ಲಿ, ಲೋಹಗಳಲ್ಲಿ ಶಿಲ್ಪಗಳನ್ನು ಮಾಡುವ ತಂತ್ರವನ್ನು ತಂದೆಯವರಿಂದ ಹಾಗೂ ಯಜಮಾನ್ ಶ್ರೀಕಂಠಾಚಾರ್ಯರಿಂದ ಪಡೆದರು. 22ನೇ ವಯಸ್ಸಿನವರೆಗೂ ನಾಗಮಂಗಲದಲ್ಲಿಯೇ ಇದ್ದು ತಮ್ಮ ಕೆಲಸಗಳಿಂದ ಗೌರವ ಪಡೆದರು.

1936ರಲ್ಲಿ ಸಂಸಾರಜೀವನಕ್ಕೆ ಕಾಲಿಟ್ಟರು, ಆನಂತರ ಮೈಸೂರಿಗೆ ಬಂದು ರಾಜಗುರುಗಳಾಗಿದ್ದ ಶಿಲ್ಪ ಸಿದ್ಧಾಂತಿ ಸಿದ್ಧಲಿಂಗಸ್ವಾಮಿಯವರ ಉಪದೇಶಗಳಿಂದ ಹೊಯ್ಸಳ, ಚೋಳ ಶೈಲಿಗಳ ಬಗ್ಗೆ ಮತ್ತಷ್ಟು ಸೂಕ್ಷ್ಮ ವಿಷಯಗಳನ್ನು ಕಲಿತು ಶಿಲ್ಪಶಾಸ್ತ್ರ ಮತ್ತು ಆಗಮ ಶಾಸ್ತ್ರಗಳಲ್ಲಿ ಪಾಂಡಿತ್ಯವನ್ನು ಸಾಧಿಸಿ ಮೈಸೂರಿನ ದೇವಸ್ಥಾನಗಳಿಗೆ ಮತ್ತು ಮೈಸೂರಿನ ಅರಮನೆಗೆ ಬೇಕಾಗಿದ್ದ ವಿಗ್ರಹಗಳನ್ನು ನಿರ್ಮಿಸಿದರು, ಹಾಗು ಆಭರಣಗಳನ್ನು ಮಾಡಿದರು.

ಇವರ ವೃತ್ತಿಯ ಕೌಶಲವು ಇವರ ಹೆಸರನ್ನು ಅಷ್ಟೂ ದಿಕ್ಕುಗಳಲ್ಲಿ ಹರಿದಾಡಿಸಿತು. ಧರ್ಮಸ್ಥಳದ ಶ್ರೀ ಮಂಜಯ್ಯ ಹೆಗ್ಗಡೆಯವರು ಇವರ ಕಲೆಯನ್ನು ಗುರುತಿಸಿ ಪ್ರೋತ್ಸಾಹಿಸಿ ಹಲವು ಚಿನ್ನ ಮತ್ತು ಹಿತ್ತಾಳೆ ವಿಗ್ರಹಗಳನ್ನು ಮಾಡಿಸಿದರು. ಶ್ರೀ ಮಂಜುನಾಥ ಸ್ವಾಮಿಯ ಸನ್ನಿಧಿಯಲ್ಲಿದ್ದು, ರಥಕ್ಕೆ ತಾಮ್ರದ ಪ್ರಭಾವಳಿಯನ್ನು ಬೆಳ್ಳಿಯ ಬಾಗಿಲುವಾಡಗಳನ್ನು ಸುಮಾರು ನಾಲ್ಕು ವರ್ಷಗಳ ಕಾಲಾವಧಿಯಲ್ಲಿ ತಯಾರಿಸಿದರು. ಅಲ್ಲಿಂದ ಮತ್ತೆ ಮೈಸೂರಿನಲ್ಲಿಯೇ ಕೆಲವು ವರ್ಷಗಳ ಕಾಲ ತಂಗಿದ್ದು, ಮನೆಯಲ್ಲಿಯೂ ಹಾಗೂ ರಾಜಗುರುಗಳ ಗುರುಕುಲದಲ್ಲಿಯೂ ಶಿಲ್ಪಕೆತ್ತನೆಗಳನ್ನು ಮಾಡಿದರು.

1957ರಲ್ಲಿ ಬೆಂಗಳೂರಿನ ವಿನ್ಯಾಸ ಕೇಂದ್ರ(Design Centre)ದಲ್ಲಿ

ಶಿಲ್ಪಿಯಾಗಿ ವಿನ್ಯಾಸ ವಿಭಾಗದಲ್ಲಿ ಸರ್ಕಾರಿ ಕೆಲಸವನ್ನು ಪ್ರಾರಂಭಿಸಿದರು. ನಂತರ ಸಹಾಯಕ ಕುಶಲಕರ್ಮಿಯಾಗಿ ಹಲವು ವರ್ಷಗಳ ಕಾಲ ಕೆಲಸ ಮಾಡಿ, 60ನೇ ವಯಸ್ಸಿನಲ್ಲಿ ಮಾಸ್ಟರ್ ಕುಶಲಕರ್ಮಿಯಾಗಿ ನಿವೃತ್ತರಾದರು. ಈ ಅವಧಿಯಲ್ಲಿ ಕಲ್ಪನೆಗೂ ಮೀರಿದ ಲೋಹಕ್ಕೆ ಹೊಯ್ಸಳ ಶೈಲಿಯನ್ನು ಅಳವಡಿಸಿ ಶಿಲ್ಪಕೃತಿಗಳನ್ನು ತಯಾರಿಸಿದರು. 1968ರಲ್ಲಿ ಚನ್ನಕೇಶವ ಶಿಲ್ಪಕ್ಕೆ ಅಂದಿನ ಉಪರಾಷ್ಟ್ರಪತಿ ವಿ.ವಿ. ಗಿರಿಯವರಿಂದ ರಾಷ್ಟ್ರಪ್ರಶಸ್ತಿಯನ್ನು ಮತ್ತು 1973ರಲ್ಲಿ ದ್ವಿಲೋಹ ಅರ್ಧನಾರೀಶ್ವರ ಶಿಲ್ಪಕೃತಿಗೆ ಪ್ರಧಾನಿ ಇಂದಿರಾಗಾಂಧಿಯವರಿಂದ ಮೆರಿಟ್ ಆವಾರ್ಡನ್ನು 25ನೇ ಸ್ವಾತಂತ್ರ್ಯ ದಿನಾಚರಣೆಯಂದು ಸ್ವೀಕರಿಸಿದರು.

1987–88ರಲ್ಲಿ ಐದನೇ ಮಗನಾದ ಶಿಲ್ಪಿ ಎನ್.ಎಸ್. ಜನಾರ್ಧನ ಮೂರ್ತಿಯವರ ಜೊತೆಯಲ್ಲಿ ಮೈಸೂರು ದಸರಾ ಉತ್ಸವ ಮೂರ್ತಿಯಾದ ಪಂಚಲೋಹದ ಚಾಮುಂಡೇಶ್ವರಿಯನ್ನು ಅಂಬಾರಿಗಾಗಿ ತಯಾರಿಸಿದರು. ಮಹಿಷಾಸುರ ಮರ್ಧಿನಿ ವಿಗ್ರಹವನ್ನು ಅದ್ಭುತ ಸಂಯೋಜನೆಯಿಂದ ಅಭಿವ್ಯಕ್ತಪಡಿಸಿದ್ದಾರೆ.

ಇದೇ ಲೋಹ ಶಿಲ್ಪವು ಶ್ರೀನಿವಾಸಾಚಾರ್ಯರ ಕೊನೆಯ ಲೋಹದ ಶಿಲ್ಪರಚನೆಯಾಯಿತು. ವೃದ್ಧಾಪ್ಯದಲ್ಲಿ ಭಾರವಾದ ವಸ್ತುಗಳನ್ನು ಹೊರಲಾಗದ ಕಾರಣ, ಮೇಣದ ಹಲವು ವಿಗ್ರಹಗಳನ್ನು, ರೇಖಾಚಿತ್ರಗಳನ್ನು ರಚಿಸಿದರು. ಸ್ಪಷ್ಟ ರೇಖೆಗಳಿಂದ ನವಗ್ರಹಗಳನ್ನು, ಆಯುಧಗಳನ್ನು, ಪೂಜಾ ಸಾಮಗ್ರಿಗಳನ್ನು, ಹಲವು ಶೈಲಿಯ ಕೀರ್ತಿಮುಖ, ಕೇಶ ವಿನ್ಯಾಸವನ್ನು, ಭಂಗಿಗಳನ್ನು, ಕಿರೀಟದ ವಿನ್ಯಾಸಗಳನ್ನು, ಹಸ್ತಮುದ್ರೆಗಳನ್ನು, ಕರ್ಪೂರದಾರತಿಯ ವಿನ್ಯಾಸವನ್ನು ಚಿತ್ರಿಸಿದ್ದಾರೆ. ಅವರ ಕೊನೆಗಾಲದಲ್ಲಿ ಬಲಹೀನತೆಯಿಂದ ಹಾಸಿಗೆ ಹಿಡಿದರು. ಎಂಭತ್ತನೇ ವಯಸ್ಸಿನಲ್ಲಿ ಅನಾರೋಗ್ಯದ ಕಾರಣವಾಗಿ ಆಸ್ಪತ್ರೆ ಸೇರಿದರು. 1992ರಲ್ಲಿ ಆಸ್ಪತ್ರೆಗೂ ಹುಡುಕಿಕೊಂಡು ಬಂದ ಲಲಿತಕಲಾ ಅಕಾಡೆಮಿಯ ಪ್ರಶಸ್ತಿಯನ್ನು ಹಾಸಿಗೆಯಲ್ಲಿಯೇ ಸಂತೋಷದಿಂದ ಸ್ವೀಕರಿಸಿದರು, ಕೆಲವೇ ದಿನದಲ್ಲಿ ದೈವಾಧೀನರಾದರು.

ಎನ್.ಪಿ. ಶ್ರೀನಿವಾಸಾಚಾರ್ಯರು ಸೃಷ್ಟಿಸಿದ ಕೆಲವು ಮುಖ್ಯ ಶಿಲ್ಪಗಳು:

* ಚನ್ನಕೇಶವ – ಹೊಯ್ಸಳ ಶೈಲಿ
* ಚೋಳರಾಣಿ – ಚೋಳ ಶೈಲಿ
* ಅರ್ಧನಾರೀಶ್ವರ – ದ್ವಿಲೋಹ – ಹೊಯ್ಸಳ ಶೈಲಿ
* ವೀಣಾ ಪಾಣಿ – ದ್ವಿಲೋಹ – ಹೊಯ್ಸಳ ಶೈಲಿ
* ತ್ವಷ್ಟೃ ಬ್ರಹ್ಮ – ಹೊಯ್ಸಳ ಶೈಲಿ

೨. ಮುಗ್ಧ ಮನಸ್ಸಿನ ಶ್ರೀನಿವಾಸಾಚಾರ್ಯರು

ಪಾರಂಪರ್ಯವಾಗಿ ಬೆಳೆದು ಬಂದ ಹಲವು ಸಂಪ್ರದಾಯಗಳಲ್ಲಿ ಶಿಲ್ಪಿಗಳ ಕೊಡುಗೆ ಮಹತ್ತರವಾದದ್ದು. ತತ್ವಜ್ಞಾನಿಗಳು ತಮ್ಮ ಕಲ್ಪನೆಯಲ್ಲಿ ಪ್ರಕೃತಿ ಸೃಷ್ಠಿಯಾದ ರೀತಿಯನ್ನು ಹಲವು ಹಂತಗಳಲ್ಲಿ ಪ್ರಶ್ನಿಸಿ, ಉತ್ತರವನ್ನು ಹುಡುಕುತ್ತಾ ಕಲಾತ್ಮಕ ಮನಸ್ಸಿಗೆ ಉಲ್ಲಾಸವನ್ನು ಕೊಟ್ಟು, ಹಲವು ಬಗೆಯ ಕಲೆಗಾರರಿಗೆ ಪ್ರೋತ್ಸಾಹ ನೀಡಿದ್ದಾರೆ. ಪ್ರಕೃತಿಯಲ್ಲಿ ನಡೆಯುವ ಕ್ರಿಯೆ ಪ್ರತಿಕ್ರಿಯೆಗಳನ್ನು ಗಮನಿಸಿ ಸೌಂದರ್ಯ ಹಾಗೂ ಭಾವನೆಗಳನ್ನು ತಮ್ಮ ಕಲಾತ್ಮಕ ಜಗತ್ತಿನಲ್ಲಿ ಅಳವಡಿಸಿಕೊಂಡು ಪ್ರಕೃತಿಯನ್ನು ಶಿಲೆಯಲ್ಲಿ, ಚಿನ್ನದಲ್ಲಿ, ಬೆಳ್ಳಿಯಲ್ಲಿ, ಹಲವು ಲೋಹಗಳಿಂದ ಪುನರ್ ನಿರ್ಮಿಸಿರುವ ಶಿಲ್ಪಿಗಳು, ಕಲಾಕೃತಿಗಳನ್ನು ಮಹತ್ತರ ಘಟಕಕ್ಕೆ ತಲುಪಿಸಿದ್ದಾರೆ. ದೇವಾಲಯ, ಅರಮನೆ, ಕೋಟೆಗಳನ್ನು ವಾಸ್ತುಶಾಸ್ತ್ರದ ಪ್ರಕಾರವೇ ನಿರ್ಮಿಸಿ, ರಕ್ಷಣೆ ಮಾಡುವ ಸೈನಿಕರಿಗೆ, ಆನೆಗಳಿಗೆ, ಕುದುರೆಗಳಿಗೆ, ಒಂಟೆಗಳಿಗೆ, ಮಹಾರಾಜ, ಮಹಾರಾಣಿಯರಿಗೆ ಬೇಕಾಗುವ ಎಲ್ಲಾ ಶಸ್ತ್ರಗಳನ್ನು ಅತ್ಯುತ್ತಮವಾಗಿ ತಯಾರಿಸಿ, ಲೋಹದ ವಸ್ತ್ರಗಳನ್ನು ಹೆಣೆದಿದ್ದಾರೆ.

ಇದಲ್ಲದೆ ಹಲವು ರೀತಿಯ ಆಭರಣಗಳನ್ನು ಶಾಸ್ತ್ರಬದ್ಧವಾಗಿ ದೈವಭಕ್ತಿಯಿಂದ ತಯಾರಿಸುತ್ತಿದ್ದರು. ಸಂಗೀತಗಾರರಿಗೆ, ನೃತ್ಯಗಾರರಿಗೆ ಬೇಕಾದ ಎಲ್ಲಾ ವಾದ್ಯಗಳನ್ನು, ವಸ್ತ್ರಗಳನ್ನು, ಆಭರಣಗಳನ್ನು ಪ್ರತ್ಯೇಕವಾಗಿ ನಿರ್ಮಿಸುತ್ತಿದ್ದರು. ದೇವಸ್ಥಾನಗಳಿಗೆ ಬೇಕಾದ ಪೂಜಾ ಸಾಮಗ್ರಿಗಳಾದ ನಂದಿಸ್ತಂಭ, ಬಾಗಿಲುವಾಡ, ಪತಾಕೆ, ಪಲ್ಲಕ್ಕಿ, ತಯಾರಿಸಿ ರಥಗಳ

ತಂತ್ರಗಳನ್ನು ಉಪಯೋಗಿಸಿ ಕಲಾತ್ಮಕ ಲೋಕವನ್ನು ಭೂಮಿಯ ಮೇಲೆ ಸೃಷ್ಟಿಸಿದರು. ಇಂತಹ ಚತುರತೆ, ಜ್ಞಾನ ಮತ್ತು ಗೌರವವನ್ನು ಸಂಪಾದಿಸುತ್ತಿದ್ದ ಶಿಲ್ಪಿಯ ಕುಟುಂಬಗಳು ಸಾಕಷ್ಟಿವೆ. ಇದರಲ್ಲಿ ಹೆಸರುವಾಸಿಯಾದವರೆಂದರೆ ನಾಗಮಂಗಲದ ಅಗ್ರಹಾರದಲ್ಲಿ ನೆಲೆಸಿದ್ದ ಲೋಹಶಿಲ್ಪಿಗಳು.

ವಸ್ತುಗಳನ್ನು ಕೇವಲ ವಸ್ತುಗಳನ್ನಾಗಿ ಬಿಡದೆ ಅದಕ್ಕೆ ಅಲಂಕಾರ ಮಾಡಿ, ತಕ್ಕ ವಿನ್ಯಾಸವನ್ನು ಕೆತ್ತನೆ ಮಾಡಿ, ತಮ್ಮ ಕಲ್ಪನೆಯ ಮೂಸೆಯಲ್ಲಿ ಸೌಂದರ್ಯವನ್ನು ತುಂಬಿ, ಪ್ರಪಂಚದಾದ್ಯಂತ ಕಂಚುಗಾರರ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಪಂಚ ಶಿಲ್ಪಗಳನ್ನು ಮಾಡುವವರಲ್ಲಿ ನಾಗಮಂಗಲದ ಕಂಚುಗಾರರು ಎತ್ತಿದ ಕೈ. ಇಂತಹ ತಪ್ಪು ವಂಶದಲ್ಲಿ ಶ್ರೀ ಪುಟ್ಟಾಚಾರ್ಯರು ಕಡತದ ಕೆಲಸವನ್ನು 19-20ನೇ ಶತಮಾನದಲ್ಲಿ ಮಾಡುತ್ತಿದ್ದರು. ಇವರ ಪೂರ್ವಿಕರು ಲೋಹದಿಂದ ವಿಗ್ರಹ, ಪೂಜಾ ಸಾಮಗ್ರಿ, ಕೊಂಬು-ಕಹಳೆ, ಧ್ವಜ ಸ್ತಂಭ ಮತ್ತು ಉತ್ಸವ ಮೂರ್ತಿಗಳನ್ನು ಮಾಡಲು 12ನೇ ಶತಮಾನದಲ್ಲಿ ಕಾರಬೈಲು ಹಳ್ಳಿಯಿಂದ ನಾಗಪುರಿ (ನಾಗಮಂಗಲ) ಪಟ್ಟಣಕ್ಕೆ ಬಂದು ನೆಲೆಸಿದರು. ಸೌಮ್ಯಕೇಶವ ಸ್ವಾಮಿ ದೇವಾಲಯಕ್ಕೆ ವಿವಿಧ ಶಿಲ್ಪ ಕೆತ್ತನೆಯ ಕೆಲಸಗಳನ್ನು ಮಾಡಿದರು. ದೇವಸ್ಥಾನದ ಪೂರ್ವದಿಕ್ಕಿನ ದ್ವಾರದೆದುರೇ ಅಗ್ರಹಾರವನ್ನು ನಿರ್ಮಿಸಿಕೊಂಡು ಪ್ರತಿನಿತ್ಯದ ಪೂಜೆಗೆಂದೇ ಶ್ರೀ ಕಾಳಿಕಾಂಬ ಕಮಟೇಶ್ವರಸ್ವಾಮಿಯ ದೇವಾಲಯವನ್ನು ನಿರ್ಮಿಸಿದರು.

ಕಡೆತದ ಕೆಲಸವನ್ನು ಮಾಡುತ್ತಿದ್ದ ಪುಟ್ಟಾಚಾರ್ಯರ ಸಮಕಾಲೀನರಲ್ಲಿ ಹಲವು ಶಿಲ್ಪಿಗಳು ನೆಲೆಸಿದ್ದರು. ಪ್ರತಿಯೊಬ್ಬ ಶಿಲ್ಪಿಯು ಅವರದ್ದೇ ವಿಶೇಷ ನೈಪುಣ್ಯತೆಯಿಂದ ಶಿಲ್ಪಗಳನ್ನು ರಚಿಸುತ್ತಿದ್ದರು. ಕೆಲವು ಶಿಲ್ಪಿಗಳು ಬರೀ ಮೇಣದ ಆಕೃತಿಗಳನ್ನು ಮಾಡುತ್ತಿದ್ದರು. ಹಾಗೆಯೇ ಕೆಲವರು ಎರಕ ಹೊಯ್ಯುವುದರಲ್ಲಿ ನಿಪುಣರು. ಹಾಗಾಗಿ ಪ್ರತಿಯೊಬ್ಬ ಶಿಲ್ಪಿಯೂ ಅಲ್ಲಿರುವ ಎಲ್ಲಾ ಶಿಲ್ಪಿಗಳ ಜೊತೆಯಲ್ಲಿ ಪ್ರೀತಿ ಗೌರವದಿಂದ ಜೀವನವನ್ನು ನಡೆಸುತ್ತಿದ್ದರು. ಯಾವುದೇ ಶಿಲ್ಪರಚನೆಯಲ್ಲಿ ಸವಾಲು ಎದುರಾದಾಗ ಪರಸ್ಪರ ಚರ್ಚಿಸಿ, ಪ್ರೋತ್ಸಾಹಿಸಿ ಶಿಲ್ಪಕೆತ್ತನೆಯನ್ನು ಮುಂದುವರೆಸುತ್ತಿದ್ದರು. ಹಲವು ಶತಮಾನಗಳಿಂದ ವಿಜೃಂಭಿಸಿದ ಶಿಲ್ಪ ಕಲೆಯು 20ನೇ ಶತಮಾನದ ಹೊತ್ತಿಗೆ ಇಳಿಮುಖವಾಗತೊಡಗಿತು. ಈ ಸಂದರ್ಭದಲ್ಲಿ ಪುಟ್ಟಾಚಾರ್ಯರಿಗೆ ಹಿರಿಯ ಮಗನಾಗಿ ಸೋಮವಾರ, ಶ್ರವಣ ನಕ್ಷತ್ರದಲ್ಲಿ 13.03.1913ರಂದು ಎನ್.ಪಿ. ಶ್ರೀನಿವಾಸಾಚಾರ್ಯರು ಹುಟ್ಟಿದರು.

ಮನೆಯಲ್ಲಿಯೇ ಕಡೆತದ ಕೆಲಸವು ನಡೆಯುತ್ತಿದ್ದ ಕಾರಣ. ಮೊದಲನೇ ದಿನದಿಂದಲೇ ಕುಲುಮೆಯ ಹೊಗೆ, ಉಳಿಗಳ ಶಬ್ದಗಳೊಂದಿಗೆ, ಪಂಚೇಂದ್ರಿಯಗಳನ್ನು ಸ್ಥಿರಗೊಳಿಸಿ ತಂಗಿ ಹಾಗೂ ತಮ್ಮನೊಡನೆ ಜೇಡಿಮಣ್ಣು ಮೇಣಗಳಿಂದ ಆಟದ ಸಾಮಾನುಗಳನ್ನು ತಯಾರಿಸುತ್ತಾ ಬಾಲ್ಯವನ್ನು ಪ್ರಾರಂಭಿಸಿದರು. ಹೀಗೆ ಐದಾರು ವರ್ಷಗಳನ್ನು ಕಳೆದು ಶಿಲ್ಪಗಳಲ್ಲಿ ಆಸಕ್ತಿ ತೋರಿಸಿದರು. ತಾಯಿ ನಂಜಮ್ಮನವರು ಪ್ರತಿನಿತ್ಯ ಸಂಪ್ರದಾಯ ಸಂಸ್ಕೃತಿಯನ್ನು ಮನೆಯಲ್ಲಿ ಪಾಲಿಸಿ, ಮಕ್ಕಳಿಗೆ ಶಿಸ್ತಿನ ಜೀವನವನ್ನು ಪ್ರೀತಿಯಿಂದ ತಿಳಿಸಿಕೊಟ್ಟರು.

ಶ್ರೀನಿವಾಸಾಚಾರ್ಯರು ಪ್ರತಿನಿತ್ಯ ತಮ್ಮ ನಿತ್ಯ ಕರ್ಮಾದಿಗಳನ್ನು ಮುಗಿಸಿದ ನಂತರ ಕಲ್ಯಾಣಿಯಲ್ಲಿ ಮಿಂದು ದೇವಸ್ಥಾನದಲ್ಲಿ ಪೂಜಾರತಿಯನ್ನು ನೋಡಿ, ತೀರ್ಥಪ್ರಸಾದವನ್ನು ದೈವ ಭಕ್ತಿಯಿಂದ ಸ್ವೀಕರಿಸಿ, ಮನೆಯಲ್ಲಿ ಆಹಾರ ಸೇವನೆ ಮಾಡಿ ನಂತರ ಶಾಲೆಗೆ ಹೋಗುತ್ತಿದ್ದರು. ನಾಲ್ಕನೇ ತರಗತಿಯವರೆಗೂ ಓದಿದ ನಂತರ ಶಿಲ್ಪರಚನೆಯ ಮೇಲಿನ ಆಸಕ್ತಿಯು ಪ್ರಮುಖವಾಯಿತು. ಇದನ್ನು ಗಮನಿಸಿದ ಪುಟ್ಟಾಚಾರ್ಯರು ತಮ್ಮ ಮಗನನ್ನು ಪ್ರೋತ್ಸಾಹಿಸಿ ಮೇಣದಿಂದ ಮೂರ್ತಿಗಳನ್ನು ಮಾಡುವ ರೀತಿಯನ್ನು ತಿಳಿಸುತ್ತಿದ್ದರು. ಹಾಗೆಯೇ ಬಾಲಕ ಶ್ರೀನಿವಾಸಾಚಾರ್ಯರು ತಂದೆಗೆ ಕಡೆತದ ಕೆಲಸಗಳಲ್ಲಿ ಸಹಾಯ ಮಾಡಲಾರಂಭಿಸಿದರು. ಒಂಭತ್ತನೆ ವಯಸ್ಸಿನಲ್ಲಿ ತಂದೆಯ ಮಾರ್ಗದರ್ಶನದಂತೆ ನಾಗಮಂಗಲದಲ್ಲಿ ಪಂಚಶಿಲ್ಪಿಯವರಾದ ಯಜಮಾನ್ ಶ್ರೀಕಂಠಾಚಾರ್ಯರಲ್ಲಿಗೆ ಚಿನ್ನದ ಕೆಲಸವನ್ನು ಕಲಿಯಲು ಕಳುಹಿಸಿದರು. ತರಬೇತಿಯು ಶುರುವಾದ ಕೆಲವೇ ತಿಂಗಳುಗಳಲ್ಲಿ ಶ್ರೀನಿವಾಸಾಚಾರ್ಯರು ಬಹಳ ಸುಂದರವಾದ ಒಡವೆಗಳನ್ನು ರಚಿಸಲಾರಂಭಿಸಿದರು.

ಪಾರಂಪರ್ಯವಾಗಿಯೋ, ರಕ್ತಗತವಾಗಿಯೋ ಅಥವಾ ಬಾಲ್ಯದಿಂದಲೇ ಶಿಲ್ಪಕೆತ್ತನೆಗಳನ್ನು ನೋಡಿದ ಕಾರಣವೋ, ಶ್ರೀನಿವಾಸಾಚಾರ್ಯರು ಗುರುಗಳಾದ ಶ್ರೀಕಂಠಾಚಾರ್ಯರ ನಿರೀಕ್ಷೆಗೆ ಮೀರಿ ಅಂದವಾದ ಒಂದು ಚೌಲಿಕುಪ್ಪಿಯನ್ನು ತಯಾರಿಸಿದರು. ಅಂದಿನ ದಿನ ಹಿಂತಿರುಗಿದ ಶ್ರೀನಿವಾಸಾಚಾರ್ಯರು ತಂದೆಯವರಲ್ಲಿ ತನ್ನಲ್ಲಿ ಹೆಮ್ಮರವಾಗಿ ಬೆಳೆದಿದ್ದ ಶಿಲ್ಪಾಸಕ್ತಿಯನ್ನು ವ್ಯಕ್ತಪಡಿಸಿದರು. ಆ ಸಮಯದಲ್ಲಿ ಶ್ರೀನಿವಾಸಾಚಾರ್ಯರ ಕಣ್ಣಿನಲ್ಲಿನ ಉತ್ಸಾಹದ ಮಿಂಚನ್ನು ಗಮನಿಸಿದ ತಂದೆಯವರು ವಾದ ಮಾಡದೆ ಮಗನಿಗೆ ಕಡೆತದ ಕೆಲಸಗಳಲ್ಲಿ ಕೈ ಜೋಡಿಸಲು ಅನುಮತಿ ನೀಡಿದರು. ಈ ಮಧ್ಯದಲ್ಲಿ ಸಮಯ ಸಿಕ್ಕಾಗಲೆಲ್ಲಾ ಮೇಣದಿಂದ ಶಿಲ್ಪಗಳ ಆಕೃತಿಗಳನ್ನು ಮೂರ್ತಿಗಳನ್ನು ತಯಾರಿಸುತ್ತಿದ್ದರು. ಯಜಮಾನ್ ಶ್ರೀಕಂಠಾಚಾರ್ಯರು ಹತ್ತನೇ ವಯಸ್ಸಿನ ಶ್ರೀನಿವಾಸಾಚಾರ್ಯರನ್ನೇ ಗಮನಿಸುತ್ತಿದ್ದರು. ಶ್ರೀಕಂಠಾಚಾರ್ಯರು ಕೆರೆಗೆ

ಹೋಗುವಾಗ ಶ್ರೀನಿವಾಸಾಚಾರ್ಯರನ್ನು ಜೊತೆಯಲ್ಲಿಯೇ ಕರೆದುಕೊಂಡು ಹೋಗುತ್ತಾ ಶಿಲ್ಪಶಾಸ್ತ್ರಗಳನ್ನು, ಮಂತ್ರ, ಶ್ಲೋಕಗಳನ್ನು ಹೇಳಿಕೊಡುತ್ತಿದ್ದರು. ಹಾಗೆಯೇ ಶ್ರೀನಿವಾಸಾಚಾರ್ಯರು ಮಾಡುತ್ತಿದ್ದ ಮೇಣದ ಆಕೃತಿಗಳಲ್ಲಿ ದೋಷಗಳು ಕಂಡಾಗ ಸರಿಪಡಿಸಿ ಅದಕ್ಕೆ ಕಾರಣಗಳನ್ನು ತಿಳಿಸುತ್ತಿದ್ದರು. ಗುರು ಶಿಷ್ಯರ ಸಂಬಂಧ ಹೀಗೆಯೇ ಬೆಳೆಯತೊಡಗಿತು. ಹನ್ನೆರಡನೆಯ ವಯಸ್ಸಿನಲ್ಲಿ ಬಾಲಕ ಶ್ರೀನಿವಾಸಾಚಾರ್ಯರ ಉಪನಯನವಾದ ಮೇಲೆ ಪಂಚಶಿಲ್ಪಿ ಯಜಮಾನ್ ಶ್ರೀಕಂಠಾಚಾರ್ಯರು ಅವರನ್ನು ಶಿಷ್ಯನನ್ನಾಗಿ ಸ್ವೀಕರಿಸಿದರು. ಶಿಲ್ಪಗುರುಗಳು ಶ್ರೀನಿವಾಸಾಚಾರ್ಯರಿಗೆ ಅಗತ್ಯವಿದ್ದ ಶಾಸ್ತ್ರ, ಅಳತೆ, ಪ್ರಮಾಣ, ಭಂಗಿ, ಶೈಲಿಗಳ ಜ್ಞಾನವನ್ನು ಧಾರೆ ಎರೆದರು.

೩. ಯುವ ಶಿಲ್ಪಿ

ಶ್ರೀನಿವಾಸಾಚಾರ್ಯರು ತಮ್ಮ ಗುರುಗಳಾದ ಶ್ರೀಕಂಠಾಚಾರ್ಯರಿಂದ, ತಂದೆಯವರಿಂದ ಹಾಗೂ ಅಗ್ರಹಾರದಲ್ಲಿದ್ದ ಹಲವು ಶಿಲ್ಪಿಗಳಿಂದ ಎಲ್ಲಾ ಶಿಲ್ಪರಚನೆಯ ಹಂತಗಳನ್ನು ಕಲಿಯುತ್ತಿದ್ದರು. ಶಿಲ್ಪಿಗಳ ಸಮೂಹವು ಯುವಕನಿಗೆ ಬೇಕಾದ ಶಿಲ್ಪ ತಂತ್ರಗಳನ್ನು ತಿಳಿಸಿಕೊಡುತ್ತಾ ಶಿಲ್ಪಗಳೊಂದಿಗೆ ಬಾಲಕನ ಬಾಂಧವ್ಯವನ್ನು ಬೆಸೆದರು. ಎಲ್ಲರಿಂದ ಪಡೆದ ಶಿಲ್ಪರಚನೆಯ ಜ್ಞಾನವನ್ನು ಅಳವಡಿಸಿಕೊಂಡು ಮೇಣದ ಆಕೃತಿಗಳ ರಚನೆಯಲ್ಲಿ ಮಗ್ನನಾಗುತ್ತಿದ್ದ ಮಗನನ್ನು ಹಲವು ವರ್ಷಗಳಿಂದ ನೋಡುತ್ತಿದ್ದ ತಂದೆ ಪುಟ್ಟಾಚಾರ್ಯರು 1929ರಲ್ಲಿ ದೈವಾಧೀನರಾದರು.

ಹದಿನಾರನೆ ವಯಸ್ಸಿನಲ್ಲಿಯೇ ಕುಟುಂಬದ ಜವಾಬ್ಧಾರಿಯನ್ನು ಹೊತ್ತು ಮುನ್ನಡೆದರು. ಈ ಸಮಯದಲ್ಲಿ ಒಳ್ಳೆಯ ಕೆತ್ತನೆ ಕೆಲಸಗಳು ದೊರೆಯುತ್ತಿರಲಿಲ್ಲ. ಆದರೂ ಸಹ ಎಲ್ಲಿಯೂ ಕುಗ್ಗದೆ ಜೇಡಿಮಣ್ಣಿನಿಂದ ಗಣಪತಿ ಗೌರಮ್ಮನನ್ನು ತಯಾರಿಸಿ, ಅದಕ್ಕೆ ಬಣ್ಣ ಹಚ್ಚಿ, ಗಣಪತಿ ಚತುರ್ಥಿಯ ಹಬ್ಬದಲ್ಲಿ ಮಾರುತ್ತಿದ್ದರು. ಮೊಹರಂ ಸಮಯದಲ್ಲಿ ಹುಲಿವೇಷವನ್ನು ಧರಿಸುವವರಿಗೆ ಮೈಯೆಲ್ಲಾ ಹುಲಿಯ ಚರ್ಮದ ಹಾಗೆಯೇ ಕಾಣುವಂತೆ ಬಣ್ಣ ಹಚ್ಚುತ್ತಿದ್ದರು. ಅಗ್ರಹಾರದಲ್ಲಿದ್ದ ಹಲವು ಶಿಲ್ಪಿಗಳಿಗೆ ಸಹಾಯ ಮಾಡಿ ಸಂಭಾವನೆಯನ್ನು ಪಡೆಯುತ್ತಿದ್ದರು. ಬಡತನವಿದ್ದರೂ ಸಹ ಯುವ ಶಿಲ್ಪಿಯ ವ್ಯಕ್ತಿತ್ವದ ಶ್ರೀಮಂತಿಕೆ ಎಲ್ಲಾ ಶಿಲ್ಪಿಗಳ ಮನಸ್ಸನ್ನು ಗೆದ್ದಿತ್ತು.

ಶ್ರೀನಿವಾಸಾಚಾರ್ಯರಿಗೆ ಹದಿನೇಳನೇ ವಯಸ್ಸಿನಲ್ಲಿ ಶಿಲ್ಪಗುರುಗಳಾಗಿದ್ದ ಯಜಮಾನ್ ಶ್ರೀಕಂಠಾಚಾರ್ಯರು ಇವರನ್ನು ಮೈಸೂರಿಗೆ ಕರೆದುಕೊಂಡು ಹೋಗಿ ಮೈಸೂರಿನ ಶಿಲ್ಪ ಸಿದ್ಧಾಂತಿ ಶ್ರೀ ಸಿದ್ಧಲಿಂಗ ಸ್ವಾಮಿಯವರನ್ನು ಪರಿಚಯಿಸಿದರು.

ಶ್ರೀ ಸಿದ್ಧಲಿಂಗ ಸ್ವಾಮಿಯವರ ಆದೇಶದ ಮೇರೆಗೆ ವಿಶ್ವಕರ್ಮ ವಿಗ್ರಹವನ್ನು ಶಿಲೆಯಲ್ಲಿ ಕೆತ್ತಲು ಶ್ರೀನಿವಾಸಾಚಾರ್ಯರು ಶ್ರೀಕಂಠಾಚಾರ್ಯರಿಗೆ ಸಹಾಯ ಮಾಡುತ್ತಾ ಭಗವಂತ ವಿಶ್ವಕರ್ಮರ ವಿಗ್ರಹವನ್ನು ಪಂಚಋಷಿಗಳೊಂದಿಗೆ ತಯಾರಿಸಿದರು. ಶ್ರೀನಿವಾಸಾಚಾರ್ಯರು ಇಂತಹ ಅನೇಕ ಅವಕಾಶಗಳನ್ನು ಉಪಯೋಗಿಸಿಕೊಂಡು ತನ್ನಲ್ಲಿದ್ದ ಶಿಲ್ಪಜ್ಞಾನವನ್ನು ಪ್ರದರ್ಶಿಸುತ್ತಿದ್ದರು. ತಮ್ಮಲ್ಲಿದ್ದ ದೃಢವಿಶ್ವಾಸವನ್ನು ಕುಗ್ಗುವುದಕ್ಕೆ ಬಿಡದೆ, ಹೆಚ್ಚಿನ ಸಂಯಮದಿಂದ, ಆಸಕ್ತಿಯಿಂದ ಶಿಲ್ಪರಚನೆಯಲ್ಲಿ ತೊಡಗುತ್ತಿದ್ದರು. ಹೀಗೆಯೇ ತಮ್ಮ ಸಣ್ಣಪುಟ್ಟ ಶಿಲ್ಪ ಕಾರ್ಯಗಳಿಂದ ಮನೆಯ ಖರ್ಚನ್ನು ನಿಭಾಯಿಸುವುದರಲ್ಲಿ ಯಶಸ್ವಿಯಾಗಿದ್ದರು.

ನಾಗಮಂಗಲದ ಹತ್ತಿರವಿರುವ ಗೊಂಡೇನಹಳ್ಳಿಯಲ್ಲಿ ದೇವಸ್ಥಾನದ ಅರ್ಚಕರು ಮತ್ತು ಊರಿನವರು ಶಿಲಾ ನವಗ್ರಹಗಳನ್ನು ತಯಾರಿಸುವುದಕ್ಕೆ ಯುವಶಿಲ್ಪಿ ಎನ್.ಪಿ. ಶ್ರೀನಿವಾಸಾಚಾರ್ಯರಿಗೆ 1934ರಲ್ಲಿ ವಿನಂತಿಸಿಕೊಂಡರು. ಒಪ್ಪಿಕೊಂಡ ಕೆಲಸವನ್ನು 1935ರಲ್ಲಿ ಮುಗಿಸಿಕೊಟ್ಟರು. ಯುವಶಿಲ್ಪಿಯ ಸಂಪ್ರದಾಯ ಶಿಸ್ತನ್ನು ಮೆಚ್ಚಿದ ಅರ್ಚಕರು ಮತ್ತು ಊರಿನವರು ನವಗ್ರಹಗಳನ್ನು ಯುವ ಶಿಲ್ಪಿಯೇ ಪ್ರತಿಷ್ಠಾಪಿಸಬೇಕೆಂದು ವಿನಂತಿಸಿಕೊಂಡರು. ಈ ವಿನಯಂತಿಯನ್ನು ಆದರದಿಂದ ಸ್ವೀಕರಿಸಿ, ಅಲ್ಲಿಯೇ ಇದ್ದು ವಿಜೃಂಭಣೆಯಿಂದ ಶಾಸ್ತ್ರೋಕ್ತವಾಗಿ ನವಗ್ರಹಗಳನ್ನು ಪ್ರತಿಷ್ಠಾಪಿಸಿದರು.

ಇಪ್ಪತ್ತೈದು ವರ್ಷದ ಯುವ ಶಿಲ್ಪಿಯು ನವಗ್ರಹಗಳನ್ನು ಪ್ರತಿಷ್ಠಾಪಿಸಿದ ವಿಷಯವು ಸುತ್ತಮುತ್ತಲಿನ ಊರುಗಳಿಗೆ ಹರಡಿ ಶ್ರೀರಂಗಪಟ್ಟಣ ತಲುಪಿತ್ತು. ಅಲ್ಲಿ ನಾಗಮಂಗಲದವರೇ ಆಗಿದ್ದ ಶಿಲ್ಪಿ ಭಾಸ್ಕರಾಚಾರ್ಯರು ತಮ್ಮ ಚಿಕ್ಕಮಗಳಾದ ಶಾರದಮ್ಮನವರ ಮದುವೆಯನ್ನು ಶ್ರೀನಿವಾಸಾಚಾರ್ಯರೊಂದಿಗೇ ಮಾಡಬೇಕೆಂದು ನಿಶ್ಚಯಿಸಿ ತಕ್ಷಣವೇ ಮದುವೆಯ ಪ್ರಸ್ತಾಪವನ್ನು ಕಳುಹಿಸಿದರು. ಇದಕ್ಕೆ ಶ್ರೀನಿವಾಸಾಚಾರ್ಯರು ಒಪ್ಪಿಗೆ ಕೊಟ್ಟರು. ಅದಾದ ಕೆಲವೇ ದಿನಗಳಲ್ಲಿ ಮದುವೆಯ ಮಹೂರ್ತವನ್ನು ನಿಶ್ಚಯಿಸಿ 1936ರಲ್ಲಿ ನವ ವಧುವರರಾದ ಎನ್.ಪಿ.ಶ್ರೀನಿವಾಸಾಚಾರ್ಯರಿಗೂ ಹಾಗೂ ಶಾರದಮ್ಮನವರಿಗೂ ಹಿರಿಯರೆಲ್ಲರೂ ಆಶೀರ್ವದಿಸಿದರು.

೪. ಮೈಸೂರಿನ ವರಶಿಲ್ಪಿ

1938ರಲ್ಲಿ ಶ್ರೀಮತಿ ಶಾರದಮ್ಮನವರು ತಾಯಿಯೊಡನೆ ಅಕ್ಕನ ಮನೆಗೆ ಮೈಸೂರಿಗೆ ಹೋಗಿದ್ದರು. ಶ್ರೀಮತಿಯವರನ್ನು ಕರೆತರಲು ಶ್ರೀನಿವಾಸಾಚಾರ್ಯರು ಮೈಸೂರಿಗೆ ಬಂದರು. ಅಲ್ಲಿ ಚಾಮರಾಜೇಂದ್ರ ಟೆಕ್ನಿಕಲ್ ಇನ್ಸಿಟ್ಯೂಟ್‌ನ ಹಿತ್ತಾಳೆ ಕೇಂದ್ರದಲ್ಲಿ ಅಣ್ಣ ಎನ್.ವಿ. ಸೂರ್ಯನಾರಾಯಣಾಚಾರ್ಯರು (ದೊಡ್ಡಪ್ಪನ ಮಗ) ಮಾಸ್ಟರ್ ಆಗಿ ಕೆಲಸದಲ್ಲಿದ್ದರು. ಇವರನ್ನು ಭೇಟಿ ಮಾಡಬೇಕೆಂದು ಹಿತ್ತಾಳೆ ಕೇಂದ್ರಕ್ಕೆ ಹೋದಾಗ ಅಣ್ಣನವರು ಶ್ರೀನಿವಾಸಾಚಾರ್ಯರಿಗೆ ಲೋಹದ ಗರುಡ ವಾಹನವನ್ನು ಮಾಡುವುದಕ್ಕೆ ಸಲಹೆ ನೀಡಿದರು. ಶ್ರೀನಿವಾಸಾಚಾರ್ಯರು ಮೈಸೂರಿನಲ್ಲಿಯೇ ಕೆಲವು ದಿನಗಳು ಉಳಿದು ಗರುಡ ವಾಹನವನ್ನು ಮಾಡಲಾರಂಭಿಸಿದರು. ಮೈಸೂರಿನಲ್ಲಿ ಸಂಬಂಧಿಕರಿದ್ದ ಕಾರಣ ಜೀವನವು ಸುಗಮವಾಗಿ ಶಾರದಮ್ಮನವರ ಜೊತೆಯಲ್ಲಿ ನಡೆಯಲಾರಂಭಿಸಿತು. ಶ್ರೀನಿವಾಸಾಚಾರ್ಯರ ಪರಿಚಯ ಹಲವು ಶಿಲ್ಪಿಗಳಿಗಾಯಿತು. ಹಾಗೆಯೇ ಶಿಲ್ಪರಚನೆಯಲ್ಲಿ ಇವರಿಂದ ಸಲಹೆಗಳನ್ನು ಪಡೆಯುತ್ತಿದ್ದರು. ಇದಲ್ಲದೇ ಇವರಿಂದಲೇ ಮೇಣದಿಂದ ವಿಗ್ರಹಗಳನ್ನು ಮಾಡಿಸಿಕೊಳ್ಳುತ್ತಿದ್ದರು. ಇವರ ಕೌಶಲಕ್ಕೆ ತಲೆದೂಗಿ ಬೆಳ್ಳಿಯ ರೇಕುಗಳ (Sheet) ಕೆಲಸಗಳನ್ನು ಹೇರಳವಾಗಿ ಕೊಡಲಾರಂಭಿಸಿದರು. ಕೆಲವೇ ತಿಂಗಳುಗಳಲ್ಲಿ ಶ್ರೀನಿವಾಸಾಚಾರ್ಯರ ಶಿಲ್ಪಚಾತುರ್ಯವು ಗೌರವವನ್ನು ತಂದುಕೊಟ್ಟಿತ್ತು.

ಮೈಸೂರಿನಲ್ಲಿನ ಶಿಲ್ಪಿಗಳ ಅಪೇಕ್ಷೆಯಂತೆ ಕಂಚಿನಲ್ಲಿ, ಬೆಳ್ಳಿಯಲ್ಲಿ,

ಮೇಣದಲ್ಲಿ ಕೆಲಸಗಳನ್ನು ಮಾಡಿಕೊಟ್ಟರು. ಅಲ್ಲಿಯೇ ಮನೆಯೊಂದನ್ನು ಬಾಡಿಗೆಗೆ ತೆಗೆದುಕೊಂಡು ಹಲವು ವರ್ಷಗಳು ಮೈಸೂರಿನಲ್ಲಿಯೇ ನೆಲೆಸಬೇಕೆಂದು ನಿರ್ಧರಿಸಿದರು. ಇದೇ ವೇಳೆಯಲ್ಲಿ ಪ್ರತಿಷ್ಠಿತ ಶಿಲ್ಪಿಗಳಾದ ತಲಕಾಡು ಶ್ರೀಕಂಠಾಚಾರ್ಯರ ಪರಿಚಯವಾಯಿತು. ಇವರು ಮೈಸೂರು ಅರಮನೆಯ ಸೊನಾರ್‌ಖಾನೆಯಲ್ಲಿ ಕೆಲಸದಲ್ಲಿದ್ದರು. ಇವರು ಶ್ರೀನಿವಾಸಾಚಾರ್ಯರ ಶಿಲ್ಪರಚನೆಯಿಂದ ಸಂತೋಷಗೊಂಡು ಮೈಸೂರಿನ ಅರಮನೆಯ ರಾಜಗುರುಗಳಾಗಿದ್ದ ಶಿಲ್ಪ ಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಯವರ ಪರಿಚಯ ಮಾಡಿಸಿದರು.

ಬಾಲ್ಯದಲ್ಲಿಯೇ ಶ್ರೀಕಂಠಾಚಾರ್ಯರ ಜೊತೆಯಲ್ಲಿ ಮೈಸೂರಿಗೆ ಬಂದಿದ್ದ ಕಾರಣ, ರಾಜಗುರುಗಳು ಶ್ರೀನಿವಾಸಾಚಾರ್ಯರನ್ನು ಜ್ಞಾಪಿಸಿಕೊಂಡು ಮಾತನಾಡಿಸಿದರು. ಹೀಗೆಯೇ ದಿನಗಳು ಕಳೆದಂತೆ ಶ್ರೀನಿವಾಸಾಚಾರ್ಯರ ಹೆಸರು ಮನೆಮಾತಾಯಿತು. ಹಲವು ರೀತಿಯ ಕೆಲಸಗಳು ಇವರನ್ನು ಹುಡುಕಿಕೊಂಡು ಬಂದವು. ಶಿಲ್ಪರಚನೆಯು ಯಾವುದೇ ಕಾರಣಕ್ಕೂ ಶ್ರೀನಿವಾಸಾಚಾರ್ಯರನ್ನು ಒಂಟಿಯಾಗಿ ಬಿಡುತ್ತಿರಲಿಲ್ಲ. ಅದಕ್ಕೆಂದೇ ಶ್ರೀನಿವಾಸಾಚಾರ್ಯರು ಶಿಲ್ಪರಚನೆಯನ್ನು ಶ್ರಮವಹಿಸಿ ನಿಷ್ಠೆಯಿಂದ ಗೌರವದಿಂದ ಶಿಲ್ಪ ಕೆಲಸವನ್ನು ಮುಗಿಸಿಕೊಡುತ್ತಿದ್ದರು.

ಯಾವುದೇ ಮಾಧ್ಯಮದಲ್ಲಿಯಾಗಲಿ, ಯಾವುದೇ ಶಿಲ್ಪಕೆತ್ತನೆ ಕೆಲಸವಿರಲಿ, ಎಷ್ಟೇ ಕಡಿಮೆ ಕಾಲಾವಧಿಯಿರಲಿ, ವರವನ್ನು ಪಡೆದ ಶಿಲ್ಪಿಗಳಂತೆ ಪ್ರತಿಯೊಂದು ಹಂತದಲ್ಲಿಯೂ ಸಹಾ ಅದ್ಭುತ ಸೌಂದರ್ಯವನ್ನು ಶಿಲ್ಪ ಕೆತ್ತನೆಗಳಿಂದ ಪ್ರದರ್ಶಿಸಿ 'ವರಶಿಲ್ಪಿ'ಯಾಗಿ ಮೈಸೂರಿನಲ್ಲಿ ಹೆಸರುವಾಸಿಯಾದರು.

೫. ರಾಜಗುರುಗಳಲ್ಲಿ ಶಿಷ್ಯತ್ವ

1940ರವರೆಗೆ ಸಂಸಾರವು ಬೆಳೆದು ಮಕ್ಕಳಾದವು. ತಂದೆಯಾದ ಅನುಭವವನ್ನು ಮನಸ್ಸಿನಲ್ಲಿಟ್ಟುಕೊಂಡು ಸಂತಸದಿಂದ ಜೀವನವನ್ನು ಅನುಭವಿಸಲಾರಂಭಿಸಿದರು. ಹಿರಿಯ ಮಗನು ಹುಟ್ಟಿದ ಒಂದೇ ವಾರದಲ್ಲಿ ಮೈಸೂರಿನ ಅರಮನೆಯಲ್ಲಿ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರ ಪಟ್ಟಾಭಿಷೇಕದ ಸಂಭ್ರಮವಿತ್ತು. ಶ್ರೀನಿವಾಸಾಚಾರ್ಯರ ಕಲಾವಂತಿಕೆಯ ಬಗ್ಗೆ ತಿಳಿದಿದ್ದ ರಾಜಗುರು ಶಿಲ್ಪ ಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಯವರು ಇಪ್ಪತ್ತೇಳು ವಯಸ್ಸಿನ ಶ್ರೀನಿವಾಸಾಚಾರ್ಯರನ್ನು ಕರೆಯಿಸಿ ಪಟ್ಟಾಭಿಷೇಕದ ಸಂದರ್ಭದಕ್ಕೆ ಬೇಕಾಗಿದ್ದ 34 ತೊಲದ ಬಂಗಾರದ ದುರ್ಗಾ ಪ್ರತಿಮೆಯನ್ನು ಅರಮನೆಯ ಅಂಬಾವಿಲಾಸದಲ್ಲಿಯೇ ನಾಲ್ಕು ದಿನದ ಅವಧಿಯಲ್ಲಿ ತಯಾರಿಸಲು ಪ್ರೋತ್ಸಾಹಿಸಿದರು. ನಾಲ್ಕು ದಿನದ ಅವಧಿಯಲ್ಲಿ ರಾಜಗುರುಗಳು ಪ್ರತಿ ಹಂತದಲ್ಲೂ ಸಲಹೆಗಳನ್ನು ಕೊಟ್ಟು ಸುಂದರವಾದ ದುರ್ಗಾ ಪ್ರತಿಮೆಯನ್ನು ಮಾಡಿಸಿಕೊಂಡರು.

ಶ್ರೀನಿವಾಸಾಚಾರ್ಯರಲ್ಲಿದ್ದ ಶಿಲ್ಪಕಲಾ ಶ್ರೀಮಂತಿಕೆಯನ್ನು ಗಮನಿಸಿದ ಅರಮನೆಯ ಮನೆತನದವರು, ಅಧಿಕಾರಿಗಳು, ಗುರುಗಳ ಸಮ್ಮತಿಯಿಂದ ಅರಮನೆಗೆ ಹಾಗೂ ಅರಮನೆಯ ಆವರಣದಲ್ಲಿರುವ ದೇವಸ್ಥಾನಗಳಿಗೆ, ಕೃಷ್ಣದೇವರಿಗೆ ಕವಚ, ಭುವನೇಶ್ವರಿ ದೇವಸ್ಥಾನಕ್ಕೆ ಬೇಕಾದ ಭುವನೇಶ್ವರಿಯ ಉತ್ಸವಮೂರ್ತಿಯನ್ನು ಶ್ರೀನಿವಾಸಾಚಾರ್ಯರಿಂದಲೇ ಮಾಡಿಸಿಕೊಂಡರು.

ಮೈಸೂರು ಸಿಂಹಾಸನವನ್ನು ವಿಸ್ತರಿಸಲು ಮೆಟ್ಟಿಲುಗಳಿಗೆ ಬೇಕಾದ ಹಲವು ಚೇಟಿಯರಲ್ಲಿ ಶ್ರೀನಿವಾಸಾಚಾರ್ಯರು ಮೊದಲಿನ ಮೆಟ್ಟಿಲಿನಲ್ಲಿರುವ ಎರಡು ಬೆಳ್ಳಿಯ ಚಾಮಧಾರಿಣಿ / ಚಾಮರದ ಚೇಟಿ(ಬೊಂಬೆ)ಯರನ್ನು ತಯಾರಿಸಿದರು.

ಹಾಗೂ ಮೈಸೂರಿನ ಮಹಾರಾಜರಿಗೆ ಪೂಜಾ ಮಂಟಪವನ್ನು ತಯಾರಿಸಿದರು. ಇದೆಲ್ಲವನ್ನು ಎರಡು ವರ್ಷದ ಅವಧಿಯಲ್ಲಿ ತಯಾರಿಸಿದರು (1940-1942). ಮತ್ತೊಂದು ಸಂಭ್ರಮ ಮೈಸೂರನ್ನು ವ್ಯಾಪಿಸಿತು. ಮಹಾರಾಜರ ತಂಗಿ ಸುಜಯಕಾಂತ ಅಮ್ಮಣ್ಣಿಯವರ ಮದುವೆಯ ಸಂಭ್ರಮ. ಇವರು ಗುಜರಾತಿನ ಭರತ ಮಹಾರಾಜರ ಮನೆತನದ ಜೊತೆಯಲ್ಲಿ ಸಂಬಂಧವನ್ನು ಬೆಳೆಸಿದರು. ನವ ವರ ರಾಜಕುಮಾರರು ಮೈಸೂರಿನ ದರ್ಶನ ಮಾಡುತ್ತಾ ಹಲವು ಮುಖ್ಯ ದೇವಸ್ಥಾನಗಳಿಗೆ ಹೋಗಿ ನಂತರ ಮೈಸೂರಿನ ಚಾಮರಾಜೇಂದ್ರ ಟೆಕ್ನಿಕಲ್ ಇನ್ಸಿಟ್ಯೂಟ್‌ಗೆ ಹೋದಾಗ ಅಲ್ಲಿ ಹಲವು ಶಿಲ್ಪಿಗಳು ತಯಾರಿಸಿದ್ದ ವಿಗ್ರಹಗಳನ್ನು ಹಾಗೂ ಅಲಂಕಾರಿಕ ವಸ್ತುಗಳನ್ನು ವೀಕ್ಷಿಸಿದರು. ಅಲ್ಲಿ ಅವರ ದೃಷ್ಟಿಗೆ ಬಿದ್ದಿದ್ದು 'ದಂತದ ಅಂಬೆಗಾಲು ಕೃಷ್ಣ'ನ ವಿಗ್ರಹ. ಇದನ್ನು ತಯಾರಿಸಿದ ಶಿಲ್ಪಿಗೆ ಮೆಚ್ಚುಗೆಯನ್ನು ಸೂಚಿಸಿ ಅದೇ ತರಹದ ಅಂಬೆಗಾಲು ಕೃಷ್ಣನನ್ನು ಬಂಗಾರದಲ್ಲಿ ಮಾಡಿಸಬೇಕೆಂದು ತಿಳಿಸಿದರು. ಈ ವಿಷಯವು ಮೈಸೂರು ಮಹಾರಾಜರ ಕಿವಿಗೆ ಬಿತ್ತು. ರಾಜಕುಮಾರರ ಆಸೆಯನ್ನು ಪೂರೈಸುವುದಕ್ಕೆ ಹಲವು ಶಿಲ್ಪಿಗಳಿಂದ ಮೇಣದಿಂದ ಕಟ್ಟಿದ ಅಂಬೆಗಾಲಿನ ಕೃಷ್ಣನನ್ನು ಸಂಗ್ರಹಿಸಲು ತಿಳಿಸಿದರು.

ಮೊಕ್ತೆಸರ್ ವೆಂಟಕ ನಂಜಪ್ಪನವರು ಶ್ರೀನಿವಾಸಾಚಾರ್ಯರಿಗೂ ಪ್ರೋತ್ಸಾಹಿಸಿ ಅವರಿಂದಲೂ ಮೇಣದ ಅಂಬೆಗಾಲು ಕೃಷ್ಣನನ್ನು ಮಾಡಿಸಿದರು. ಮೈಸೂರಿನ ಮೊಕ್ತೆಸರ್‌ರವರು ಎಲ್ಲಾ ಶಿಲ್ಪಿಗಳಿಂದ ಬಂದಿದ್ದ ಮೇಣದ ವಿಗ್ರಹಗಳನ್ನು ಸಾಲಾಗಿ ಜೋಡಿಸಿ ಪ್ರದರ್ಶಿಸಿದರು. ಇದನ್ನೆಲ್ಲಾ ನೋಡಿದ ಮಹಾರಾಜರು ಒಂದು ಗಂಟೆಯ ಪರಿಶೀಲನೆಯ ನಂತರ ಶ್ರೀನಿವಾಸಾಚಾರ್ಯರು ಮಾಡಿದ್ದ ಕೃಷ್ಣನನ್ನು ಪ್ರಶಂಸಿಸಿ, ಇವರಿಗೆ 300 ತೊಲ ಬಂಗಾರವನ್ನು ನೀಡಿ ಎರಕ ಹೊಯ್ಯುವುದಕ್ಕೆ ಸೂಚಿಸಿದರು. ಕೆಲವೇ ದಿನಗಳಲ್ಲಿ ಮಹಾರಾಜರು ನೋಡಿದ್ದು ಒಂದು ಸುಂದರವಾದ ಮುದ್ದಾದ ಅಂಬೆಗಾಲು ಕೃಷ್ಣನನ್ನು. ಇದನ್ನು 1942ರಲ್ಲಿ ಉಡುಗೊರೆಯಾಗಿ ಭರತಪುರದ ಮಹಾರಾಜರಿಗೆ ನೀಡಿದರು.

ಶ್ರೀನಿವಾಸಾಚಾರ್ಯರು ಕೆಲವೇ ವರ್ಷಗಳಲ್ಲಿ ಪಡೆದಿದ್ದ ಉನ್ನತಿಯನ್ನು ಗೌರವದಿಂದ ಸ್ವೀಕರಿಸಿ ವಿನಮ್ರತೆಯಿಂದ ಪ್ರೀತಿಯಿಂದ ಎಲ್ಲರನ್ನೂ ಮಾತನಾಡಿಸುತ್ತಿದ್ದರು. ಆದರೆ ಅಂಬಾವಿಲಾಸದಲ್ಲಿ ಕೆಲಸ ಮಾಡುತ್ತಿದ್ದ ಕೆಲವು ಶಿಲ್ಪಿಗಳಿಗೆ ಹಾಗೂ ಮೈಸೂರಿನಲ್ಲಿದ್ದ ಸಮಕಾಲೀನ ಶಿಲ್ಪಗಳಿಗೆ ಶ್ರೀನಿವಾಸಾಚಾರ್ಯರು

ಗಳಿಸುತ್ತಿದ್ದ ಪ್ರಶಂಸೆಯಿಂದ ಬೇಸತ್ತು ಶ್ರೀನಿವಾಸಾಚಾರ್ಯರ ಏಳಿಗೆಯನ್ನು ಕುಂಠಿತಗೊಳಿಸುವುದಕ್ಕೋಸ್ಕರ ತೊಂದರೆಗಳನ್ನು ಕೊಡಲಾರಂಭಿಸಿದ್ದರು. ಪರಿಸ್ಥಿತಿ ಹದಗೆಟ್ಟಿದ್ದರೂ ಸಹ ಯಾರಲ್ಲಿಯೂ ದ್ವೇಷದ ಮನೋಭಾವನೆಯನ್ನು ಬೆಳೆಸಿಕೊಳ್ಳಲಿಲ್ಲ ಅಥವಾ ಅವರಿಗೆ ಸಡಿಲವಾದ ಮಾತುಗಳನ್ನಾಡಿ ಬೇಸರವನ್ನೂ ಕೊಡದೇ ಸಹನೆಯನ್ನು ಪ್ರದರ್ಶಿಸಿದರು. ಶ್ರೀನಿವಾಸಾಚಾರ್ಯರ ಪರಿಸ್ಥಿತಿಯನ್ನು ಗಮನಿಸಿದ ರಾಜಗುರುಗಳು ನೊಂದುಕೊಂಡರು. ಅವರ ಸಹನೆಯನ್ನು ಗಮನಿಸಿದ ಶಿಲ್ಪ ಸಿದ್ಧಾಂತಿಯವರು ಶ್ರೀನಿವಾಸಾಚಾರ್ಯರನ್ನು ತಮ್ಮ ಗುರುಕುಲಕ್ಕೆ ಕರೆದುಕೊಂಡು ಬಂದರು. ತಮ್ಮ ಕೊಠಡಿಯ ಪಕ್ಕದ ಕೊಠಡಿಯನ್ನು ಇವರಿಗೆ ಬಿಟ್ಟುಕೊಟ್ಟು ಹಲವು ಅದ್ಭುತ ಮಾತುಗಳನ್ನಾಡಿ ಶ್ರೀನಿವಾಸಾಚಾರ್ಯರನ್ನು ಪ್ರೋತ್ಸಾಹಿಸಿದರು. ಅಂದಿನಿಂದ ಶ್ರೀನಿವಾಸಾಚಾರ್ಯರು ಅರಮನೆಯಲ್ಲಿ ಮಾಡಬೇಕಾಗಿದ್ದ ಎಲ್ಲಾ ಶಿಲ್ಪ ಕಾರ್ಯವನ್ನು ರಾಜಗುರುಗಳ ಮುಖೇನ ಮಾಡಲಾರಂಭಿಸಿದರು.

ಶ್ರೀನಿವಾಸಾಚಾರ್ಯರ ಜೀವನದಲ್ಲಿ ಎರಡನೇ ಬಾರಿ ಗುರುಗಳಿಂದ ಉಪದೇಶಗಳು ದೊರೆಯಲಾರಂಭಿಸಿತು. ಸಿದ್ಧಲಿಂಗಸ್ವಾಮಿಯವರು ಶಾಸ್ತ್ರಜ್ಞಾನ ಮತ್ತು ಪ್ರಯೋಗ ತಂತ್ರ, ಅಂತಃಪ್ರಜ್ಞೆ, ವೈಯಕ್ತಿಕ ಶೀಲ, ಸತ್ಯ, ಧರ್ಮಗಳಲ್ಲಿ ನಿಷ್ಠೆಯನ್ನು ಹೊಂದಿದ್ದ ಪರಿಪೂರ್ಣ ಸ್ಥಪತಿಗಳಾಗಿದ್ದ ಕಾರಣ ಶ್ರೀನಿವಾಸಾಚಾರ್ಯರಿಗೆ ಹಲವು ಘಟ್ಟದಲ್ಲಿ ಶಿಲ್ಪಶಾಸ್ತ್ರದ ಬಗ್ಗೆ ತಿಳಿಹೇಳುತ್ತಾ ಜೀವನಸಾರವನ್ನು ಮತ್ತು ಕರ್ತವ್ಯಸಾರವನ್ನು ಪರಿಚಯಿಸಿದ್ದರು. ಇದರಿಂದ ಹದಗೊಂಡ ಶ್ರೀನಿವಾಸಾಚಾರ್ಯರು ಶಾಸ್ತ್ರೀಯ ಶಿಲ್ಪ ಲಕ್ಷಣಗಳನ್ನು ಅರಿತು, ಅನುಸರಿಸಿ, ಪಾರಂಪರಿಕ ಶಿಲ್ಪ ರಚನೆಯಲ್ಲಿ ತೊಡಗಿದರು.

ಯಾವುದೇ ವಿಗ್ರಹ ರಚನೆಯನ್ನು ಶುರು ಮಾಡುವುದ್ದಕ್ಕಿಂತ ಮೊದಲು ರೇಖಾಚಿತ್ರಗಳಲ್ಲಿ ಸೂಕ್ಷ್ಮವಿಚಾರಗಳನ್ನು ಅಳವಡಿಸಿ ತದನಂತರ ಮೇಣದಲ್ಲಿ ಮಾಡುವುದಕ್ಕೆ ಪ್ರೋತ್ಸಾಹಿಸಿದರು. ಹೀಗೆಯೇ ಮುಂದುವರೆದ ಗುರುಶಿಷ್ಯರ ಸಂಬಂಧ ಹಲವರಲ್ಲಿ ಚರ್ಚೆಗೆ ಕಾರಣವಾಯಿತು. ಇದಾವುದನ್ನೂ ಲೆಕ್ಕಿಸದೆ ರಾಜಗುರುಗಳು ಶಿಷ್ಯಂದಿರಿಗೆ ಬೇಕಾದ ಎಲ್ಲಾ ವಿಚಾರಗಳನ್ನು ತಿಳಿಸಿ ಚರ್ಚೆಗೆ ಒಳಪಡಿಸಿ, ಶಿಷ್ಯಂದಿರಿಂದ ಅತೀವ ಗೌರವವನ್ನು ಸಂಪಾದಿಸಿದ್ದರು. ಹಾಗೆಯೇ ಶ್ರೀನಿವಾಸಾಚಾರ್ಯರಿಗೆ ರಾಜಗುರುಗಳು ಗುರುಗೀತೆ ಮತ್ತು ಶಿವಗೀತೆಗಳ ಬಗ್ಗೆಯೂ ತಿಳಿಸುತ್ತಿದ್ದರು. 1942 ರಿಂದ 1949ರವರೆಗೂ ಸಿದ್ಧಲಿಂಗ ಸ್ವಾಮಿಯವರ ಜೊತೆಯಲ್ಲಿಯೇ ಇದ್ದು ಮೈಸೂರಿನ ಅರಮನೆಗೆ ಬೇಕಾದ ಹಲವು ಚಿನ್ನದ ಆಭರಣಗಳನ್ನು ವಿಗ್ರಹಗಳನ್ನು ನಿರ್ಮಿಸಿದರು. ಅವುಗಳಲ್ಲಿ ಕೆಲವೆಂದರೆ,

* ಒಂದು ಸಾವಿರ ತೊಲದ ಕಡಗೋಲು ಕೃಷ್ಣ.
* ಎಂಟುನೂರು ತೊಲದ ಕಾಶಿ ವಿಶ್ವನಾಥ.
* ಎಂಬತ್ತು ತೊಲದ ಶಿವ ಪಂಚಾಯತನ.
* ಸಿದ್ಧಲಿಂಗ ಸ್ವಾಮಿಯವರಿಗೆ ಎರಡು ಚಿನ್ನದ ಆವಿಗೆ (ಪಾದುಕೆ).
* ಒಂದೂವರೆ ಅಂಗುಲದ ವ್ಯಾಳಿ ತಲೆಯ ಉಂಗುರ.
* ಶ್ರೀಕಂಠದತ್ತ ನರಸಿಂಹರಾಜ ಒಡೆಯರವರ ನಾಮಕರಣಕ್ಕೆ ನಿಂಗಣ್ಣಾಚಾರ್ಯರು ಕೊಟ್ಟ ಹಾರಕ್ಕೆ ಚಿನ್ನದ ಆಲದೆಲೆ ಕೃಷ್ಣ.
* ಮೇಸ್ತ್ರಿ ಶ್ರೀ ಚಲುವಾಚಾರ್ಯರು ಉಡುಗೊರೆಯಾಗಿ ಕೊಟ್ಟಿದ್ದ ಹಾರಕ್ಕೆ ಗಾಯತ್ರಿ ದೇವಿಯ ಪದಕ.
* 1949ರಲ್ಲಿ ಮೈಸೂರಿನ ಕಾಮಕಾಮೇಶ್ವರಿ ದೇವಸ್ಥಾನದ ಎದುರು 'ಜಗದ್ಗುರು ಶೈವಶಿಲ್ಪ ಬ್ರಹ್ಮರ್ಷಿ ಗುರುಕುಲ'ದ ಉದ್ಘಾಟನೆಗೆ ಬರುತ್ತಿದ್ದ ಮಹಾರಾಜರ ಪಚ್ಚೆಹಾರಕ್ಕೆ ವಿನ್ಯಾಸವನ್ನು ಮಾಡಿದರು.

ಇದೆಲ್ಲವನ್ನು ರಾಜಗುರುಗಳ ಇಚ್ಛೆಯಂತೆಯೇ ಗುರುಕುಲದಲ್ಲಿಯೇ ನಿರ್ಮಿಸಿದರು. 1942-49ರ ಅವಧಿಯಲ್ಲಿ ಗುರುಕುಲದಲ್ಲಿಯೂ ಹಾಗೂ ಮನೆಯಲ್ಲಿಯೂ ಸಹ ಕೆತ್ತನೆಯ ಕೆಲಸಗಳನ್ನು ಮಾಡುತ್ತಿದ್ದರು. ನಂತರದ ದಿನದಲ್ಲಿ ಒಮ್ಮೆ ಮಂಡ್ಯ ಜಿಲ್ಲೆಗೆ ಹೋಗಬೇಕಾದಾಗ ಅಲ್ಲಿ ಸಕ್ಕರೆ ಕಾರ್ಖಾನೆಯಲ್ಲಿ ಕೆಲಸದಲ್ಲಿದ್ದ ಎನ್.ಸಿ. ವೆಂಕಟಾಚಾರ್ಯರನ್ನು (ಚಿಕ್ಕಪ್ಪನ ಮಗ) ಭೇಟಿ ಮಾಡಲು ಹೋದರು. ಶಿಲ್ಪಿ ಶ್ರೀನಿವಾಸಾಚಾರ್ಯರನ್ನು ನೋಡಿದ ವೆಂಕಟಾಚಾರ್ಯರು ಬಹಳ ಸಂತಸದಿಂದ ಸ್ವಾಗತಿಸಿ ಕಾರ್ಖಾನೆಯನ್ನೆಲ್ಲಾ ತೋರಿಸುತ್ತಾ ಹಲವರಿಗೆ ಹಾಗೂ ಮ್ಯಾನೇಜರಿಗೆ ಇವರನ್ನು 'ಪ್ರಖ್ಯಾತ ಶಿಲ್ಪಿ'ಯೆಂದು ಪರಿಚಯಿಸಿದರು. ಅಲ್ಲಿಯ ಮ್ಯಾನೇಜರರು ಶ್ರೀನಿವಾಸಾಚಾರ್ಯರನ್ನು ಆದರದಿಂದ ಸ್ವಾಗತಿಸಿ ಸಕ್ಕರೆ ಕಾರ್ಖಾನೆಯಲ್ಲಿನ ಒಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ವಿನಂತಿಸಿಕೊಂಡರು.

ಶ್ರೀನಿವಾಸಾಚಾರ್ಯರು ತಂತ್ರಜ್ಞಾನದ ಅರಿವನ್ನೂ ಹೊಂದಿದ್ದ ಕಾರಣ ಕಾರ್ಖಾನೆಯ ತೊಂದರೆಯನ್ನು ಮಧ್ಯಾಹ್ನದ ಹೊತ್ತಿಗೇ ಬಗೆಹರಿಸಿದರು. ಇಂತಹ ಶಿಲ್ಪಿಯನ್ನು ಮತ್ತೆ ಮೈಸೂರಿಗೆ ಕಳುಹಿಸಿಕೊಡಲು ಮನಸ್ಸಾಗದೆ ಅದೇ ಕಾರ್ಖಾನೆಯಲ್ಲಿಯೇ ಕೆಲಸ ಮಾಡುವುದಕ್ಕೆ ವಿನಂತಿಸಿಕೊಂಡರು. ತಿಂಗಳ ಸಂಭಾವನೆಯೂ ಸಹ ಇದ್ದಿದ್ದ ಕಾರಣದಿಂದ ಒಮ್ಮೆಗೆ ಮನಸ್ಸು

ಮಾಡಿ ಕೆಲಸವನ್ನು ಮುಂದುವರೆಸಿದರು. ಒಂದು ವರ್ಷ ಸಾಂಪ್ರದಾಯಿಕ ಕಲೆಯಿಂದ ದೂರವಿದ್ದರು. ಚಿಕ್ಕವಯಸ್ಸಿನಿಂದ ಮಾಡುತ್ತಿದ್ದ ಸಾಂಪ್ರದಾಯಿಕ ಶಿಲ್ಪರಚನೆಯನ್ನು ಬಿಟ್ಟು ಡಿಸ್ಟಿಲರಿಗೆ ಬೇಕಾದ ಮೌಲ್ಡ್‌ಗಳನ್ನು ಮಾಡುತ್ತಿದ್ದರು. ಅಷ್ಟರಲ್ಲಿ ಮೈಸೂರು ಅರಮನೆಯಿಂದ ಸಕ್ಕರೆ ಕಾರ್ಖಾನೆಗೆ ಮೆಮೋಗಳು, ಪತ್ರಗಳು ರವಾನೆಯಾಗಿ ಶಿಲ್ಪಿಗಳನ್ನು ವಾಪಸ್ ಮೈಸೂರಿಗೆ ಕಳುಹಿಸಿಕೊಡಲು ಸೂಚಿಸಿದರು. ಮ್ಯಾನೇಜರ್‌ರವರು ಶ್ರೀನಿವಾಸಾಚಾರ್ಯರಿಗೆ ಈ ಮೆಮೋಗಳನ್ನು ತೋರಿಸಿ ಅವರನ್ನು ಆದರ, ಗೌರವದಿಂದ ಮೈಸೂರಿಗೆ ಕಳುಹಿಸಿಕೊಟ್ಟರು.

ಚಾಮುಂಡೇಶ್ವರಿಯ ಅನುಗ್ರಹದಿಂದ ಮಂಡ್ಯದಲ್ಲಿದ್ದ ಶಿಲ್ಪಿ ಶ್ರೀನಿವಾಸಾಚಾರ್ಯರನ್ನು ಬರಮಾಡಿಕೊಂಡು ಚಾಮುಂಡಿ ಬೆಟ್ಟದ ದೇವಸ್ಥಾನಕ್ಕೆ ಬೆಳ್ಳಿಯಿಂದ ಬಾಗಿಲುವಾಡಗಳನ್ನು ಮಾಡಿಸಿಕೊಂಡರು. ಇದಾದ ನಂತರ ಮನೆಯಲ್ಲಿಯೇ ಹಲವು ಕೆತ್ತನೆ ಕೆಲಸಗಳು ಬರಲಾರಂಭಿಸಿತ್ತು. ಮತ್ತೊಮ್ಮೆ ಗೊಂಡೇನಹಳ್ಳಿಗೆ ಉತ್ಸವಮೂರ್ತಿ ಸೂರ್ಯನಾರಾಯಣ ಸ್ವಾಮಿಯ ವಿಗ್ರಹವನ್ನು ಸೂರ್ಯಮಂಡಲದ ಸಮೇತವಾಗಿ ಸಾರಥಿ ಅರುಣನ ಜೊತೆಯಲ್ಲಿ ಏಳು ಕುದುರೆಗಳನ್ನು ನಿರ್ಮಿಸಿದರು. 1947ರಲ್ಲಿ ಇಪ್ಪತ್ತೆರಡನೇ ವಯಸ್ಸಿನಲ್ಲಿ ಮಾಡಿದ್ದ ಶಿಲಾ ನವಗ್ರಹಗಳ ಜೀರ್ಣೋದ್ಧಾರವನ್ನು ಒಂಬತ್ತು ಪುರೋಹಿತರ ಜೊತೆಯಲ್ಲಿ ಹೋಗಿ ಐದು ದಿನಗಳು ಇದ್ದು ವಿಜೃಂಭಣೆಯಿಂದ ನಡೆಸಿಕೊಟ್ಟರು.

ಮೈಸೂರಿನಲ್ಲಿರುವ ಕಬೀರ್ ಮಠಕ್ಕೆ ಮೂರು ಬಾಗಿಲುವಾಡಗಳು, ಪತಾಕೆಗಳು, ಮರವನ್ನೇ ಹಾಕದೇ ಇರುವ ಪಲ್ಲಕ್ಕಿಯನ್ನು ತಯಾರಿಸಿದರು. ಮೈಸೂರಿನ ಮಿಷನ್ ಆಸ್ಪತ್ರೆ ರಸ್ತೆಯಲ್ಲಿರುವ ಎಲ್ಲಮ್ಮನ ದೇವಸ್ಥಾನಕ್ಕೆ ಬಾಗಿಲುವಾಡ ಮತ್ತು ಪ್ರಭಾವಳಿಯನ್ನು ತಯಾರಿಸುವುದಕ್ಕೆ ಮುಂದಾದರು. ಹಾಗೆಯೇ ಮೈಸೂರಿನ ಸುಬ್ಬರಾಯ ಕೆರೆಯ ಏರಿಯ ಮೇಲಿರುವ ರಾಘವೇಂದ್ರ ಸ್ವಾಮಿಗಳ ಮಠದ ಪಲ್ಲಕ್ಕಿಗೆ ವ್ಯಾಳೆ ತಲೆಗಳು, ಪರಕಾಲಮಠಕ್ಕೆ ಮೂರೂವರೆ ಅಡಿಯ ಹಯಗ್ರೀವವನ್ನು ಬೆಳ್ಳಿಯಿಂದ ರಚಿಸಿದರು. ಶ್ರೀರಂಗಪಟ್ಟಣದಲ್ಲಿರುವ ಗಂಜಾಂ ಹೊಳೆ ಬದಿಯಲ್ಲಿರುವ ರಾಮನ ಮಂದಿರಕ್ಕೆ ರಾಮ, ಲಕ್ಷ್ಮಣ, ಸೀತೆ ಮತ್ತು ಆಂಜನೇಯರ ಉತ್ಸವ ಮೂರ್ತಿಗಳನ್ನು ತಿರುಮಕೂಡಲು ನರಸೀಪುರದ ಹತ್ತಿರವಿರುವ ಮೂಗೂರಿನ ಕೃಷ್ಣನಿಗೆ ಕವಚ ಮತ್ತು ಚಿನ್ನದ ಕಿರೀಟವನ್ನು ರಚಿಸಿದರು. ಬದರಿನಾರಾಯಣ ಸ್ವಾಮಿ ದೇವಸ್ಥಾನಕ್ಕೋಸ್ಕರ ಆರು ಅಡಿ ಎತ್ತರವಿರುವ ದ್ವಾರಪಾಲಕರನ್ನು ತಾಮ್ರದ ರೇಕಿನಲ್ಲಿ (ಶೀಟ್ ವರ್ಕ್) ಮೈಸೂರಿನ ಶ್ರೀನಿವಾಸ ಪ್ರೆಸ್‌ನವರಿಗೆ ಮಾಡಿಕೊಟ್ಟರು.

ಈ ಎಲ್ಲಾ ಅದ್ಭುತ ಕೆತ್ತನೆಗಳ ಮಧ್ಯದಲ್ಲಿ ಬೆಂಗಳೂರು ಮತ್ತು

ಮೈಸೂರಿನಲ್ಲಿರುವ ಹಲವರಿಗೆ ಬೆಳ್ಳಿಯ ಫೋಟೋಗೆ ಬೇಕಾದ ಫೋಟೋ ಡ್ರೈಗಳನ್ನು ಚತುರತೆಯಿಂದ ದಿನಕ್ಕೆ ಒಂದರಂತೆ ಮಾಡಿಕೊಡುತ್ತಿದ್ದರು. ವೈದ್ಯರಾಗಿದ್ದ ವಿಶ್ವೇಶ್ವರಯ್ಯನವರಿಗೆ ಸಮುದ್ರನಾರಾಯಣ ಸ್ವಾಮಿಯನ್ನು ಇರಿಸಲು ಕೂರ್ಮಪೀಠವನ್ನು ಮತ್ತು ಔದಲವನ್ನು ಮಾಡಿದರು. ದಾವಣಗೆರೆಯ ಶಂಭುಲಿಂಗಯ್ಯನವರಿಗೆ, ಕಾಟನ್‌ಮಿಲ್ ಮಾಲೀಕರಿಗೆ ಮೂರು ಕೆಜಿ ಬೆಳ್ಳಿಯಿಂದ ಪೀಠ, ಪ್ರಭಾವಳಿ, ಈಶ್ವರ, ಪಾರ್ವತಿ, ಗಣಪತಿ, ಬಸವನನ್ನು ತಯಾರಿಸಿದರು. ದಾವಣಗೆರೆಯ 'ನವಿಲ್' ಬಿಲ್ಡಿಂಗ್ ಕೃಷ್ಣಮೂರ್ತಿಯವರಿಗೆ ಪೂಜೆಗೆ ಬೃಂದಾವನ, ದರ್ಪಣ, ಉಪಚಾರದ ಸಾಮಾನುಗಳನ್ನು ಮಾಡಿದರು. ಹಲವು ಮನೆಯವರಿಗೆ ದಶಾವತಾರದ ತಟ್ಟೆ, ಪನ್ನೀರು ದಾನಿಗಳನ್ನು ಮಾಡಿಕೊಟ್ಟರು.

ಶಿಲ್ಪಿ ಶ್ರೀನಿವಾಸಾಚಾರ್ಯರ ಕೌಶಲಕ್ಕೆ ಹೆಸರುವಾಸಿಯಾಗಿದ್ದ ಕಾರಣ ಜನರು ಶಿಲ್ಪಕೆತ್ತನೆಯ ಕೆಲಸಗಳಿಗೆ ಗೌರವದಿಂದ ಯಥೇಚ್ಛವಾಗಿಯೇ ಮಜೂರಿಯನ್ನು ಕೊಡುತ್ತಿದ್ದರು. ಹಾಗೂ ಬೆಳ್ಳಿಯ ಕೆತ್ತನೆಗಳಿಗೆ ಎಷ್ಟು ಬೆಳ್ಳಿಯನ್ನು ಕೆಲಸಕ್ಕೆ ಕೊಡುತ್ತಿದ್ದರೂ, ಅಷ್ಟೇ ಬೆಳ್ಳಿಯ ಬೆಲೆಯಷ್ಟು ಮಜೂರಿಯನ್ನು ಸಂತೋಷದಿಂದ ನೀಡುತ್ತಿದ್ದರು. ಸಂಸಾರಕ್ಕೆ ಬೇಕಾದ ಎಲ್ಲಾ ಸೌಕರ್ಯವೂ ಇತ್ತು. ಮಕ್ಕಳ ವಿದ್ಯಾಭ್ಯಾಸಕ್ಕೆ ಯಾವುದೇ ತೊಂದರೆಯಾಗದೆ ಎಲ್ಲರ ಜೀವನ ಸುಗಮವಾಗಿ ನಡೆಯುತ್ತಿತ್ತು.

ಸುಮಾರು 1938ರಲ್ಲಿ ಸರ್ ಮಿರ್ಜಾ ಮುಹಮದ್ ಇಸ್ಮಾಯಿಲ್‌ರವರು ದಿವಾನರಾಗಿದ್ದ ಕಾಲದಲ್ಲಿ ಒಮ್ಮೆ ನಾಗಮಂಗಲದ ಮೂಲಕ ಮೈಸೂರಿಗೆ ಪ್ರಯಾಣ ಮಾಡುತ್ತಿದ್ದಾಗ ಕೆಲವು ಗಂಟೆಗಳು ನಾಗಮಂಗಲದಲ್ಲಿ ತಂಗಿದ್ದರು. ಅಲ್ಲಿಯ ಶಿಲ್ಪಿಗಳು ಸೇರಿ ಅವರವರ ಜೀವನದ ಕಷ್ಟಗಳನ್ನು ಪತ್ರಗಳಲ್ಲಿ ಬರೆದು ದಿವಾನರಿಗೆ ಕೊಟ್ಟಿದ್ದರು. ಸರ್ ಮಿರ್ಝಾ ಇಸ್ಮಾಯಿಲ್‌ರವರು ಶಿಲ್ಪಿಗಳ ನೋವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ್ದರು. ಬಹಳ ವರ್ಷಗಳಾದ ಮೇಲೆ ಶ್ರೀನಿವಾಸಾಚಾರ್ಯರು ಮೈಸೂರಿನಿಂದ ನಾಗಮಂಗಲಕ್ಕೆ ಬಂದಾಗ ಅವರಿಗೆ ಆಶ್ಚರ್ಯ ಕಾದಿತ್ತು. ವಾಹನಗಳ ಸರಾಗ ಸಂಚಾರಕ್ಕೆ ಉತ್ತಮ ರಸ್ತೆಗಳನ್ನು ಹಾಸಲಾಗಿತ್ತು. ಊರಿಂದ ಊರಿಗೆ ಓಡಾಡುವುದಕ್ಕೆ ಬಸ್ಸುಗಳ ವ್ಯವಸ್ಥೆಯಾಗಿತ್ತು. ಶಿಲ್ಪಿಗಳಿಗೆ ಸಹಾಯವಾಗುವಂತೆ ವಿಶ್ವಕರ್ಮ ಕೋ-ಆಪರೇಟಿವ್ ಬ್ಯಾಂಕ್ ಹಾಗೂ ಪ್ರಪ್ರಥಮ ಹಿತ್ತಾಳೆ ಕೇಂದ್ರವೂ (Centre for Bronze Artefacts) ಸ್ಥಾಪಿತಗೊಂಡಿದ್ದವು.

ಆದರೆ ಅಲ್ಲಿದ್ದ ಹಲವು ಸಂಬಂಧಿಕರು ಹಾಗೂ ಶಿಲ್ಪಿಗಾರರು ಜೀವನೋಪಾಯಕ್ಕೋಸ್ಕರ ಬೇರೆ ಊರುಗಳಿಗೆ ವಲಸೆ ಹೋಗಿದ್ದರು. ಅಲ್ಲಿದ್ದ

ಎರಡು ಕಂಚುಗಾರರ ಕುಟುಂಬದೊಡನೆ ಮಾತನಾಡುತ್ತಾ ಇವರಲ್ಲಿದ್ದ ಬೇಸರವನ್ನು ವ್ಯಕ್ತಪಡಿಸಿಕೊಂಡರು. ಶಿಲ್ಪಿಯ ಕುಟುಂಬದವರನ್ನು ಭೇಟಿ ಮಾಡಿ ಅಲ್ಲಿದ್ದ ಯುವ ಶಿಲ್ಪಿಗಳಿಗೆ ಮೆಚ್ಚುಗೆಯನ್ನು ಸೂಚಿಸಿದರು. ಹಾಗೆಯೇ ಯುವಶಿಲ್ಪಿಗಳಿಗೆ, ಶಿಲ್ಪಿ ಶ್ರೀನಿವಾಸಾಚಾರ್ಯರು ಶಿಲ್ಪಶಾಸ್ತ್ರದ ಬಗ್ಗೆ ವಿಷಯಗಳನ್ನು ತಿಳಿಸುತ್ತಾ ಶಿಲ್ಪರಚನೆಗೆ ಬೇಕಾದ ತಂತ್ರಗಳನ್ನು ಉಪದೇಶಿಸಿ ಶಿಲ್ಪರಚನೆಯ ಸಮಯದಲ್ಲಿ ಎದುರಾಗುವ ಸವಾಲುಗಳನ್ನು ತಿಳಿಸಿ ಪ್ರೋತ್ಸಾಹಿಸಿದರು. ಹುಟ್ಟೂರಿನ ಹೊಸ ರೂಪವನ್ನು ಕಂಡು ಬಾಲ್ಯದ ನೆನಪುಗಳೊಂದಿಗೆ ಮೈಸೂರಿಗೆ ಹಿಂತಿರುಗಿದರು.

ಮೈಸೂರಿಗೆ ಬರುತ್ತಿದ್ದಂತೇ ದಿಡ್ಡಾಪುರದ ನಕಾಸು ಕೆಲಸವನ್ನು ಮಾಡುತ್ತಿದ್ದ ಸುಬ್ಬಣ್ಣಾಚಾರ್ಯರು ಬಂದು ಭೇಟಿಯಾದರು. ಧರ್ಮಸ್ಥಳದಲ್ಲಿ ಕೆತ್ತನೆ ಕೆಲಸವನ್ನು ಒಪ್ಪಿಕೊಂಡಿದ್ದನ್ನು ತಿಳಿಸಿ ಶ್ರೀನಿವಾಸಾಚಾರ್ಯರನ್ನು ಜೊತೆಯಲ್ಲಿಯೇ ಬರಬೇಕೆಂದು ವಿನಂತಿಸಿಕೊಂಡರು. ಶ್ರೀನಿವಾಸಾಚಾರ್ಯರು ಇದಕ್ಕೆ ಒಪ್ಪಿ ಸುಬ್ಬಣ್ಣಾಚಾರ್ಯರ ಜೊತೆಯಲ್ಲಿಯೇ ಧರ್ಮಸ್ಥಳದ ಸನ್ನಿಧಿಯನ್ನು ಸೇರಿದರು. ಈ ಸಮಯದಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿಗಳಾಗಿದ್ದ ಮಾನ್ಯ ಮಂಜಯ್ಯ ಹೆಗಡೆಯವರ ಪರಿಚಯವಾಯಿತು. ಮಂಜುನಾಥ ಸ್ವಾಮಿಯ ಸನ್ನಿಧಿಯಲ್ಲಿ ಒಪ್ಪಿಕೊಂಡಿದ್ದ ಕೆಲಸವನ್ನು ಮುಗಿಸಿ ಮತ್ತೆ ಮೈಸೂರಿಗೆ ಹಿಂತಿರುಗಿದರು.

ಆದರೆ ಶ್ರೀನಿವಾಸಾಚಾರ್ಯರ ಧರ್ಮಸ್ಥಳದೊಂದಿಗಿನ ಬಾಂಧವ್ಯ ಇಲ್ಲಿಗೆ ಮುಗಿಯಲಿಲ್ಲ.

೬. ಧರ್ಮಸ್ಥಳದ ಸನ್ನಿಧಿಯ ವರಶಿಲ್ಪಿ

ಧರ್ಮಸ್ಥಳ ಕ್ಷೇತ್ರದಲ್ಲಿ ಹಲವು ದೇವತಾ ಕಾರ್ಯಗಳು ನಡೆಯುತ್ತಿದ್ದವು. ಹಾಗೆಯೇ ಮಾನ್ಯ ಮಂಜಯ್ಯ ಹೆಗ್ಗಡೆಯವರಿಗೆ ಸಾಂಪ್ರದಾಯಿಕ ಶಿಲ್ಪಕಲೆಯ ಮೇಲಿನ ಪ್ರೀತಿಯಿಂದ ಹಲವು ಉತ್ತಮ ಶಿಲ್ಪಿಗಳಿಂದ ಲೋಹದ ವಿಗ್ರಹಗಳನ್ನು ಮಾಡಿಸಿಕೊಳ್ಳುತ್ತಿದ್ದರು. ಇಂತಹ ಪ್ರಕ್ರಿಯೆಯಲ್ಲಿ ಮತ್ತೊಬ್ಬ ಮಾಧ್ವ ಬ್ರಾಹ್ಮಣರಾದ ಶ್ರೀನಿವಾಸಾಚಾರ್ಯರು ಮೇಣದ ಪಾರ್ಶ್ವನಾಥ ಸ್ವಾಮಿಯನ್ನು ಹಾಗೂ ಸರಸ್ವತಿಯನ್ನು ಮಾಡಿದ್ದರು. ಇದಕ್ಕೆ ಪುತ್ತೂರಿನ ಶಿಲ್ಪಿ ಮಹಾಲಿಂಗಾಚಾರ್ಯರು ಎರಕ ಹೊಯ್ದಿದ್ದರು. ಆದರೆ ಕಾರಣಾಂತರದಿಂದ ಅಪೂರ್ಣವಾದ ವಿಗ್ರಹವಾಗಿ ಉಳಿದಿತ್ತು. ಇದೆರಡನ್ನು ಪೂರ್ಣವಾಗಿ ಸಂಪ್ರದಾಯಿಕ ಶಿಲ್ಪರಚನೆಯಾಗಬೇಕೆಂದು ಸುಬ್ಬಣ್ಣಾಚಾರ್ಯರರಲ್ಲಿ ನುರಿತ ಶಿಲ್ಪಿಗಳ ಬಗ್ಗೆ ವಿಚಾರಿಸಿದಾಗ ಸುಬ್ಬಣ್ಣಾಚಾರ್ಯರು ನಾಗಮಂಗಲದ ಶ್ರೀನಿವಾಸಾಚಾರ್ಯರನ್ನು ಬಿಟ್ಟರೆ ಯಾವ ಶಿಲ್ಪಿಯೂ ಇಂತಹ ವಿಗ್ರಹಗಳನ್ನು ಸುಂದರವಾಗಿ ಕೆತ್ತಲಾರರು ಎಂದು ನುಡಿದರು. ಇದನ್ನು ತಿಳಿದ ಮಾನ್ಯರಿಗೆ ಸಂತೋಷವಾಗಿ, ತಕ್ಷಣವೇ ಧರ್ಮಸ್ಥಳದಲ್ಲಿಯೇ ಕೆಲಸದಲ್ಲಿದ್ದ ಮುಖ್ಯ ಪ್ರಾಣಾಚಾರ್ಯರನ್ನು ಕರೆಸಿ ಮೈಸೂರಿಗೆ ಹೋಗಿ ಶಿಲ್ಪಿ ಶ್ರೀನಿವಾಸಾಚಾರ್ಯರನ್ನು ಜೊತೆಯಲ್ಲಿಯೇ ಧರ್ಮಸ್ಥಳಕ್ಕೆ ಕರೆತರಲು ತಿಳಿಸಿದರು.

ಮಾನ್ಯ ಮಂಜಯ್ಯ ಹೆಗ್ಗಡೆಯವರ ಆಜ್ಞೆಯ ಮೇರೆಗೆ ಮುಖ್ಯಪ್ರಾಣಾಚಾರ್ಯರು ಮೈಸೂರಿನ ಮನೆಯಲ್ಲಿದ್ದ ಶ್ರೀನಿವಾಸಾಚಾರ್ಯರನ್ನು ಭೇಟಿ ಮಾಡಿ ವಿಷಯವನ್ನು ತಿಳಿಸಿದರು. ಈ ಕರೆಗೆ ಗೌರವದಿಂದ ತಮ್ಮಲ್ಲಿದ್ದ ಉಳಿ ಸುತ್ತಿಗೆಗಳನ್ನು ತೆಗೆದುಕೊಂಡು ಮುಖ್ಯಪ್ರಾಣಾಚಾರ್ಯರ

ಜೊತೆಯಲ್ಲಿಯೇ ಧರ್ಮಸ್ಥಳವನ್ನು ತಲುಪಿದರು. ಅಲ್ಲಿದ್ದ ಎರಡೂ ವಿಗ್ರಹಗಳನ್ನು ಪರಿಶೀಲಿಸಿ ಮಾನ್ಯ ಮಂಜಯ್ಯ ಹೆಗ್ಗಡೆಯವರಿಗೆ ವಿಗ್ರಹಗಳಲ್ಲಿ ಅಳತೆ, ಪ್ರಮಾಣದಲ್ಲಿ ದೋಷವಿದೆ, ಶಾಸ್ತ್ರಬದ್ಧವಾಗಿ ಮಾಡಬೇಕೆಂದರೆ ದೋಷಗಳನ್ನು ಪರಿಹರಿಸಬೇಕೆಂದು ಹೇಳಿ, ವಿಗ್ರಹಗಳ ಮೇಲೆ ರೇಖೆಗಳನ್ನು ಎಳೆದು ಒಪ್ಪಿಗೆ ಕೊಟ್ಟರೆ ಸಂಪ್ರದಾಯವನ್ನು ಅನುಸರಿಸುತ್ತಾ ಶಿಲ್ಪಶಾಸ್ತ್ರಗಳನ್ನು ಅಳವಡಿಸಿಕೊಂಡು ಮಾಡುತ್ತೇನೆಂದರು. ಈ ಸ್ಪಷ್ಟ ದೃಷ್ಟಿಕೋನವನ್ನು ಗಮನಿಸಿದ ಮಾನ್ಯರಿಗೆ ಸಂತೋಷವಾಗಿ ಶ್ರೀನಿವಾಸಾಚಾರ್ಯರ ಸಲಹೆಯನ್ನು ಒಪ್ಪಿದರು. ಪಾರ್ಶ್ವನಾಥ ಸ್ವಾಮಿಯ ವಿಗ್ರಹವು ಅಜಾನುಬಾಹುಗಳಿಂದ ಕೂಡಿದ್ದವು. ಇದನ್ನು ಮೇಲಿನ ಅರ್ಧಭಾಗವನ್ನು ಉಳಿಸಿಕೊಂಡು ಕುಸುರಿ ಕೆಲಸವನ್ನು ಮುಂದುವರಿಸಿ ಪಾರ್ಶ್ವನಾಥ ಸ್ವಾಮಿಯ ವಿಗ್ರಹವನ್ನು ತಯಾರಿಸಿ, ನಂತರ ಸರಸ್ವತಿಯನ್ನೂ ಸಹ ಸುಂದರವಾಗಿ ರಚಿಸಿದರು.

ಮಾನ್ಯ ಮಂಜಯ್ಯ ಹೆಗ್ಗಡೆಯವರು ಸುಂದರವಾದ ವಿಗ್ರಹಗಳ ದರ್ಶನ ಮಾಡಿ ಸಂತೋಷದಿಂದ ಶ್ರೀನಿವಾಸಾಚಾರ್ಯರಿಗೆ ಕಲಾಪತ್ತಿನ ಪೀತಾಂಬರದ ಹೊದಿಕೆಯನ್ನು ಹೊದಿಸಿ ಸನ್ಮಾನಿಸಿ ಮುಂದಿನ ದಿನಗಳಲ್ಲಿ ಧರ್ಮಸ್ಥಳದಲ್ಲಿಯೇ ಉಳಿದು ಹಲವು ಶಿಲ್ಪಕೆತ್ತನೆಯನ್ನು ಮುಂದುವರೆಸಬೇಕೆಂಬ ತಮ್ಮ ಅಪೇಕ್ಷೆಯನ್ನು ತಿಳಿಸಿದರು. ಶ್ರೀನಿವಾಸಾಚಾರ್ಯರು ಮಾನ್ಯರ ಅಪೇಕ್ಷೆಯನ್ನು ಸಂತೋಷದಿಂದ ಒಪ್ಪಿಕೊಂಡರು.

ಆನಂತರ ಮೈಸೂರಿಗೆ ಬಂದು ತುಂಬು ಕುಟುಂಬಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಿ ಅಲ್ಲಿಯೇ ಇರಿಸಿ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗದಂತೆ ಮಾಡಿ ತಾವೊಬ್ಬರೇ ಮತ್ತೆ ಧರ್ಮಸ್ಥಳದ ಸನ್ನಿಧಿಯನ್ನು ಸೇರಿದರು.

ಧರ್ಮಸ್ಥಳ ಕ್ಷೇತ್ರದಲ್ಲಿನ ಬೆಳ್ಳಿಯ ರಥಕ್ಕೆ ಹಿತ್ತಾಳೆಯ ಪ್ರಪ್ರಥಮ ಬಾರಿಗೆ ರೇಕಿನಲ್ಲಿ ಒಂಭತ್ತು ಅಡಿಯ ಪ್ರಭಾವಳಿಯನ್ನು **ಹಿಂದೆ** ಹಾಗೂ **ಮುಂದೆ** ಎರಡೂ ಕಡೆಯೂ ಒಂದೇ ರೀತಿಯಲ್ಲಿ ವಿನ್ಯಾಸವನ್ನು ಕೆತ್ತಿ 'ಪ್ರಭಾವಳಿಯಲ್ಲಿ ಮೂರು ಆಯಾಮ'ಗಳನ್ನು ಸೃಷ್ಟಿಸಿದರು. ಬೆಳ್ಳಿಯ ರಥಕ್ಕೆ ಹೊಂದುವಂತೆ ಬೆಳ್ಳಿಯ ಮುಲಾಮನ್ನು ರೇಕಿನ ಮೇಲೆ ಹಚ್ಚಿದರು. ತಯಾರಿಸಿದ ಪ್ರಭಾವಳಿಯನ್ನು ಬೆಳ್ಳಿಯ ರಥಕ್ಕೆ ಅಳವಡಿಸಿದ ಸುಂದರ ಕೆತ್ತನೆಯನ್ನು ನೋಡಿದ ಹಲವರು ಅದರ ಸೌಂದರ್ಯಕ್ಕೆ ತಲೆಬಾಗಿದರು ಶ್ರೀನಿವಾಸಾಚಾರ್ಯರನ್ನು ಮನಸಾರೆ ಹೊಗಳಿದರು. ಶ್ರೀನಿವಾಸಾಚಾರ್ಯರು ನಾಗಮಂಗಲ ಮೈಸೂರಿನಂತೆಯೇ ಧರ್ಮಸ್ಥಳದಲ್ಲಿಯೂ ಸಹ ಗೌರವವನ್ನು ಸಂಪಾದಿಸಿದರು.

ಇವರ ಶಿಲ್ಪರಚನೆಯ ಚತುರತೆಯನ್ನು ಕಂಡು ಧರ್ಮಸ್ಥಳದ ಧರ್ಮಾಧಿಕಾರಿಗಳು ಇನ್ನೂ ಅನೇಕ ಮುಖ್ಯವಾದ ಕೆಲಸಗಳನ್ನು ಒಪ್ಪಿಸಲು

ನಿರ್ಧರಿಸಿದರು. ಮಂಜುನಾಥ ಸ್ವಾಮಿಯ ಗರ್ಭಗುಡಿಗೆ ಬೆಳ್ಳಿಯಿಂದ ದ್ವಾರಪಾಲಕರ ಸಮೇತವಾಗಿ ಬಾಗಿಲುವಾಡವನ್ನು ತಯಾರಿಸಿದರು. ಅಲ್ಲಿನ ಶಿಲ್ಪಕೆತ್ತನೆಯ ಕೆಲಸವು ಹಾಗೆಯೇ ಮುಂದುವರೆದದ್ದರಿಂದ ಶ್ರೀನಿವಾಸಾಚಾರ್ಯರ ಪತ್ನಿ ಶಾರದಮ್ಮನವರು ಧರ್ಮಸ್ಥಳಕ್ಕೆ ಬಂದು ಕೆಲ ದಿನಗಳು ಜೊತೆಯಲ್ಲಿ ಉಳಿದು ಅವರ ಏಳ್ಗೆಗೆ ಸಾಕ್ಷಿಯಾದರು. ಧರ್ಮಸ್ಥಳದಲ್ಲಿ ಸ್ವಯಂಪಾಕದ ಪದ್ಧತಿ ಇದ್ದಿದ್ದರಿಂದ ಶಾರದಮ್ಮನವರು ತಾವು ಅಲ್ಲಿ ಇದ್ದ ದಿನಗಳಲ್ಲಿ ಅಡುಗೆ ಮಾಡುತ್ತಿದ್ದರು ಮತ್ತು ಶ್ರೀನಿವಾಸಾಚಾರ್ಯರ ಕೆತ್ತನೆ ಕೆಲಸಗಳ ಕಡೆ ಗಮನ ಹರಿಸಿ ಅವರು ಮಾಡುತ್ತಿದ್ದ ಎಲ್ಲಾ ಕೆಲಸಗಳಿಗೆ ಪ್ರೋತ್ಸಾಹಿಸುತ್ತಿದ್ದರು. ತಾಯಿಯ ನಂತರ ಪತ್ನಿಯಲ್ಲಿ ಕಂಡ ಸಂಪ್ರದಾಯಿಕ ಜೀವನ ಶೈಲಿಯಿಂದ ಶ್ರೀನಿವಾಸಾಚಾರ್ಯರು ಪ್ರಭಾವಿತರಾಗಿದ್ದರು.

ಹೀಗೆಯೇ ನಾಲ್ಕು ವರ್ಷಗಳ ಕಾಲ ಧರ್ಮಸ್ಥಳದಲ್ಲಿಯೇ ಇದ್ದು ಮಾನ್ಯ ಮಂಜಯ್ಯ ಹೆಗ್ಗಡೆಯವರ ಇಚ್ಛೆಯಂತೆ ದೇವಸ್ಥಾನಕ್ಕೆ ಮತ್ತು ಮನೆಗೆ ಬೇಕಾದ ಪೂಜಾಸಾಮಗ್ರಿಗಳನ್ನು ಹಾಗೂ ವಿಗ್ರಹಗಳನ್ನು ರಚಿಸಿದರು. ಮಂಜುನಾಥ ಸ್ವಾಮಿಯ ಸನ್ನಿಧಿಯಲ್ಲಿದ್ದು ಕಲಾಸೇವೆಯನ್ನು ಮಾಡಿ ದೇವರ ಅನುಗ್ರಹವನ್ನು ಪಡೆದರು. ಎಲ್ಲರಿಂದಲೂ ಪ್ರೀತಿ ಗೌರವವನ್ನು ಸಂಪಾದಿಸಿದರು. ಮೈಸೂರಿನ ಚಾಮರಾಜೇಂದ್ರ ಟೆಕ್ನಿಕಲ್ ಇನ್ಸಿಟಿಟ್ಯೂಟಿನ ಪ್ರಾಂಶುಪಾಲರು ಧರ್ಮಸ್ಥಳಕ್ಕೆ ಬಂದು ವಿಜೃಂಭಿಸುತ್ತಿದ್ದ ರೇಕಿನ ಕೆಲಸಗಳನ್ನು ನೋಡಿ ಆಶ್ಚರ್ಯದಿಂದ ಶಿಲ್ಪಿ ಯಾರೆಂದು ಕೇಳಿದಾಗ ಮಾನ್ಯ ಮಂಜಯ್ಯ ಹೆಗ್ಗಡೆಯವರು 'ಇವರು ಶಿಲ್ಪಿ ಶ್ರೀನಿವಾಸಾಚಾರ್ಯರು, ಮೈಸೂರಿನವರು ನಿಷ್ಠಾವಂತ. ಚಿಕ್ಕ ವಯಸ್ಸಿನ ಅನುಭವಶಾಲಿ' ಎಂದು ಪ್ರಾಂಶುಪಾಲರಿಗೆ ಪರಿಚಯಿಸಿದರು. ಹೀಗೇ ಅವರ ಕೌಶಲದ ಮೆರಗು ಎಲ್ಲಾ ದಿಕ್ಕುಗಳಲ್ಲಿಯೂ ಹಬ್ಬಲಾರಂಭಿಸಿತು. 1955ರಲ್ಲಿ ಮಾನ್ಯ ಮಂಜಯ್ಯ ಹೆಗ್ಗಡೆಯವರು ದೈವಾಧೀನರಾದರು. ಇದಾದನಂತರ ಶ್ರೀನಿವಾಸಾಚಾರ್ಯರು ಮತ್ತೆ ಧರ್ಮಸ್ಥಳಕ್ಕೆ ಹಿಂತಿರುಗಲಿಲ್ಲ. ಇದನ್ನು ಗಮನಿಸಿದ ಮಾನ್ಯ ರತ್ನವರ್ಮ ಹೆಗ್ಗಡೆಯವರು ಧರ್ಮಸ್ಥಳದ ಪಟ್ಟಕ್ಕೆ ಏರುವ ಸಮಯದಲ್ಲಿ ಆಹ್ವಾನ ಪತ್ರಿಕೆಯನ್ನು ಕಳುಹಿಸಿದರು. ಈ ಆಹ್ವಾನವನ್ನು ಮನಸಾರೆ ಸ್ವೀಕರಿಸಿ ಧರ್ಮಸ್ಥಳದಲ್ಲಿ ನಡೆಯುತ್ತಿದ್ದ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಎಲ್ಲಾ ಮುಖ್ಯಕಾರ್ಯಕ್ರಮಗಳನ್ನು ಮುಗಿಸಿದ ಮಾನ್ಯ ರತ್ನವರ್ಮ ಹೆಗ್ಗಡೆಯವರು ಶ್ರೀನಿವಾಸಾಚಾರ್ಯರಲ್ಲಿ ಮಾತನಾಡಿ, ಮತ್ತೆ ಧರ್ಮಸ್ಥಳಕ್ಕೆ ಬಂದು, ಶಿಲ್ಪರಚನೆಯನ್ನು ಮುಂದುವರೆಸಲು ತಿಳಿಸಿದರು.

ಈ ಆಮಂತ್ರಣಕ್ಕೆ ಒಪ್ಪಿದ್ದ ಶಿಲ್ಪಿ ಶ್ರೀನಿವಾಸಾಚಾರ್ಯರ ಜೀವನದಲ್ಲಿ ಮತ್ತೊಂದು ಹೊಸತಿರುವು ಕಾದಿತ್ತು!

೨. ಜೀವನದ ತಿರುವುಗಳು

ಅಗ್ರಹಾರಗಳಲ್ಲಿನ ಮುಖ್ಯ ಅಂಶವೆಂದರೆ, ಜ್ಞಾನ ಅಭಿವೃದ್ಧಿಗೆ ಬೇಕಾಗುವ ಎಲ್ಲಾ ತರಹದ ವಾತಾವರಣವಿದ್ದು ಶಿಲ್ಪಿಗಳಿಗೆ ಪ್ರೋತ್ಸಾಹವು ದೊರೆಯುತ್ತದೆ, ಭಾರತದೆಲ್ಲೆಡೆ ಬ್ರಿಟಿಷರ ಆಳ್ವಿಕೆಯ ಸಮಯದಲ್ಲಿ ಸಾಮಾಜಿಕವಾಗಿ ನಡೆಯುತ್ತಿದ್ದ ಮಾರ್ಪಾಡುಗಳಲ್ಲಿ ಕರಕುಶಲ ಕರ್ಮಿಗಳಿಗೆ ಜೀವನದಲ್ಲಿ ತೊಂದರೆಗಳುಂಟಾಗಿ ಸ್ವಂತ ಊರುಗಳಿಂದ ಜೀವನೋಪಾಯಕ್ಕೋಸ್ಕರ ಬೇರೆ ಊರುಗಳಿಗೆ ಕುಟುಂಬ ಸಮೇತವಾಗಿ ವಲಸೆ ಹೋಗಿ ಅಗ್ರಹಾರದ ಸಂಸ್ಕೃತಿಯಿಂದ ವಂಚಿತರಾದರು. ಕಲಾಜ್ಞಾನವು ಬೆಳವಣಿಗೆಯಾಗದೆ ಇದ್ದ ಜ್ಞಾನವನ್ನು ಉಪಯೋಗಿಸಿ, ಕಲೆಯ ಲಕ್ಷಣಗಳನ್ನು ಕುಂಠಿತಗೊಳಿಸಿದರು. ಸ್ವಾತಂತ್ರ್ಯದ ನಂತರ ಭಾರತದಲ್ಲಿ ಹಲವು ಮಹತ್ತರ ಬದಲಾವಣೆಗಳು ಕಲಾ ಪ್ರಪಂಚದಲ್ಲಾಯಿತು. ಇದಕ್ಕೆ ಕಾರಣರಾದ ಕಮಲಾದೇವಿ ಚಟ್ಟೋಪಾಧ್ಯಾಯರವರು, ಆಲ್ ಇಂಡಿಯಾ ಹ್ಯಾಂಡಿಕ್ರಾಫ್ಟ್ ಬೋರ್ಡ್‌ನ್ನು ಸ್ಥಾಪಿಸಿ, ನುರಿತ ಶಿಲ್ಪಿಗಳನ್ನು ವಿನ್ಯಾಸ ಕೇಂದ್ರಕ್ಕೆ (ಡಿಸೈನ್ ಸೆಂಟರ್) ನೇಮಕ ಮಾಡಿಕೊಳ್ಳುತ್ತಾ ಶಾಸ್ತ್ರೀಯ ಶಿಲ್ಪರಚನೆಗೆ ಪ್ರೋತ್ಸಾಹಿಸಿದರು. ಗೆಜಟೆರ್‌ನಲ್ಲಿಯೂ ಕೂಡ ವಿನ್ಯಾಸ ಕೇಂದ್ರದ ಬಗ್ಗೆ ಪ್ರಕಟಣೆ ಹೊರ ಬಂದಿತ್ತು. ಹಾಗೆಯೇ ಆಲ್ ಇಂಡಿಯಾ ಹ್ಯಾಂಡಿಕ್ರಾಫ್ಟ್ ಬೋರ್ಡ್‌ನಲ್ಲಿ ಕೆಲಸ ಮಾಡುತ್ತಿದ್ದ ಶಿಲ್ಪಿಗಳನ್ನು ಪ್ರೋತ್ಸಾಹಿಸುವುದಕ್ಕಾಗಿ ಪ್ರತಿವರ್ಷ ರಾಷ್ಟ್ರಪ್ರಶಸ್ತಿಯನ್ನೂ ಘೋಷಿಸಿದ್ದರು.

1955ರಲ್ಲಿ ಶ್ರೀನಿವಾಸಾಚಾರ್ಯರ ಭಾವ ನಾ.ಬಾ. ಚಂದ್ರಶೇಖರಾಚಾರ್ಯರು ಸಿವಿಲ್ ಕೋರ್ಟ್‌ನಲ್ಲಿ ಕೆಲಸದಲ್ಲಿದ್ದ ಕಾರಣ ಗೆಜೆಟೆಡ್‌ನಲ್ಲಿ ಪ್ರಕಟವಾಗಿದ್ದ ಸುದ್ಧಿಯನ್ನು ಓದಿ, ಶ್ರೀನಿವಾಸಾಚಾರ್ಯರ ಹೆಸರಿನಲ್ಲಿ ಅರ್ಜಿಯನ್ನು

ತೆಗೆದುಕೊಂಡು ಹತ್ತನೇ ತರಗತಿಯಲ್ಲಿದ್ದ ಶ್ರೀನಿವಾಸಾಚಾರ್ಯರ ಹಿರಿಯ ಮಗ ಎನ್.ಎಸ್. ಸುಜ್ಞಾನಮೂರ್ತಿಯವರ ಕೈಗೆ ಕೊಟ್ಟು ತಂದೆಯವರಿಗೆ ಓದಿ ತಿಳಿಸಿ, ಬೇಕಾದ ಎಲ್ಲಾ ವಿಷಯವನ್ನು ಅರ್ಜಿಯಲ್ಲಿ ಬರೆದು ರಚಿಸಿದ ಕೆಲವು ಶಿಲ್ಪಗಳ ಛಾಯಾಚಿತ್ರಗಳನ್ನು ಲಗತ್ತಿಸಿ ಬೆಂಗಳೂರಿನ ವಿನ್ಯಾಸ ಕೇಂದ್ರಕ್ಕೆ ತಲುಪಿಸುವುದಾಗಿ ತಿಳಿಸಿದರು. ಕೆಲವೇ ದಿನಗಳಲ್ಲಿ ಚಂದ್ರಶೇಖರಾಚಾರ್ಯರು ಶ್ರೀನಿವಾಸಾಚಾರ್ಯರಲ್ಲಿ ಮಾತನಾಡಿದಾಗ ಸರ್ಕಾರಿ ಕೆಲಸದಲ್ಲಿ ಕಡಿಮೆ ಸಂಬಳವಿರುವುದರಿಂದ ಅರ್ಜಿಯನ್ನು ಸಲ್ಲಿಸಿಲ್ಲವೆಂಬ ವಿಷಯ ತಿಳಿಯಿತು. ಇದಕ್ಕೆ ಉತ್ತರವಾಗಿ ಚಂದ್ರಶೇಖರಾಚಾರ್ಯರು 'ಅಸಿಸ್ಟೆಂಟ್ ಪೋಸ್ಟಿಗೆ ಅರ್ಜಿ ಸಲ್ಲಿಸಿದರೆ ತಿಂಗಳಿಗೆ ಇನ್ನೂರು ರೂಪಾಯಿಗಳಿಗಿಂತ ಕಡಿಮೆ ಸಂಬಳ ಕೊಡುವುದಿಲ್ಲ. ನನ್ನನ್ನು ನಂಬಿ ಅರ್ಜಿಯನ್ನು ಸಲ್ಲಿಸಿ' ಎಂದು ಪ್ರೋತ್ಸಾಹಿಸಿದರು.

ತಮ್ಮ ನಲವತ್ತಾರನೇ ವಯಸ್ಸಿನಲ್ಲಿ ಹಿರಿಯ ಮಗನೊಂದಿಗೆ ಬೆಂಗಳೂರಿಗೆ ಪ್ರಯಾಣ ಮಾಡಿ, ವಿನ್ಯಾಸ ಕೇಂದ್ರವನ್ನು ಮೊದಲ ಬಾರಿಗೆ ನೋಡಿ ಸರ್ಕಾರಿ ನೌಕರಿಗೆ ಅರ್ಜಿಯನ್ನು ಸಲ್ಲಿಸಿದರು. ಮತ್ತೆ ಮೈಸೂರಿಗೆ ಹಿಂತಿರುಗಿ ತಮ್ಮ ದಿನನಿತ್ಯದಲ್ಲಿ ನಡೆಯುತ್ತಿದ್ದ ಕೆತ್ತನೆ ಕೆಲಸವನ್ನು ಮುಂದುವರೆಸಿದರು. ಮೂರು ತಿಂಗಳ ನಂತರ ಸಂದರ್ಶನಕ್ಕೆ ಹಿರಿಯ ಮಗನ ಜೊತೆಯಲ್ಲಿ ತಾವು ರಚಿಸಿದ್ದ ಶಿಲ್ಪಗಳ ಛಾಯಾಚಿತ್ರಗಳನ್ನು ಜೊತೆಯಲ್ಲಿಯೇ ತೆಗೆದುಕೊಂಡು ಹೋದರು. ಸಂದರ್ಶನದಲ್ಲಿ ಇವರು ಮಾಡಿದ ಎಲ್ಲಾ ವಿಗ್ರಹಗಳ ಕುಸುರಿ ಕೆಲಸವನ್ನು ನೋಡಿದ ಅಧಿಕಾರಿಗಳು ಇವರ ಶಿಲ್ಪರಚನೆಯ ಸಾಮರ್ಥ್ಯವನ್ನು ತಿಳಿದುಕೊಳ್ಳುವುದಕ್ಕೆ ತಿಂಗಳಿಗೆ ಎಷ್ಟು ನಟರಾಜ ವಿಗ್ರಹಗಳನ್ನು ಮಾಡಬಹುದಾಗಿ ವಿಚಾರಿಸಿದಾಗ, ಶ್ರೀನಿವಾಸಾಚಾರ್ಯರು **'ಮೇಣಕಟ್ಟಿ ಮಾಡಿದರೆ ಒಂದನ್ನು ಮಾಡುತ್ತೇನೆ. ನಕಲು ವಿಗ್ರಹಗಳನ್ನು ಮಾಡುವುದಾದರೆ ಎರಡು ವಿಗ್ರಹಗಳನ್ನು ತಯಾರಿಸುತ್ತೇನೆ'** ಎಂದರು. ಸಂದರ್ಶನದ ಫಲಿತಾಂಶವನ್ನು ಪತ್ರದ ಮೂಲಕ ತಿಳಿಸುವುದಾಗಿ ಹೇಳಿದ್ದ ಕಾರಣ ಮೈಸೂರಿಗೆ ಬಂದು ಕೆಲಸಗಳನ್ನು ಒಪ್ಪಿಕೊಂಡು ಮನೆಯಲ್ಲಿಯೇ ಶಿಲ್ಪರಚನೆಯಲ್ಲಿ ತೊಡಗಿದರು.

ಆರು ತಿಂಗಳ ನಂತರ ಬೆಂಗಳೂರಿನ ಕರಕುಶಲ ಮಂಡಲಿಯಿಂದ ಸಹಾಯಕ ನಿರ್ದೇಶಕರಾಗಿದ್ದ ಹರಿಹರನ್‌ರವರು ಮೈಸೂರಿನ ವಿಶ್ವಕರ್ಮ ಸೊಸೈಟಿಗೆ ಪತ್ರ ಬರೆದು ಒಂದು ವಾರದ ಮಟ್ಟಿಗೆ ಶಿಲಾ ಕೆತ್ತನೆಯ ತರಬೇತಿಗೆ ನುರಿತ ಶಿಲ್ಪಿಗಳನ್ನು ಬೆಂಗಳೂರಿನ ಕರಕುಶಲ ಮಂಡಲಿಗೆ ಕಳುಹಿಸಿಕೊಡಲು ತಿಳಿಸಿದರು. ಇಂತಹ ಅವಕಾಶವನ್ನು ನೋಡಿ ಸೊಸೈಟಿಯಲ್ಲಿ ಕಾರ್ಯದರ್ಶಿಗಳಾಗಿದ್ದ ಕೆ.ವಿ. ಸೂರ್ಯನಾರಾಯಣಚಾರ್ಯರು ಶ್ರೀನಿವಾಸಾಚಾರ್ಯರನ್ನು ಕಳುಹಿಸಲು ನಿರ್ಧರಿಸಿದರು.

ಶ್ರೀನಿವಾಸಾಚಾರ್ಯರು ಒಂದು ವಾರದ ಶಿಲಾಕೆತ್ತನೆಯ ತರಬೇತಿಗೋಸ್ಕರ ಮತ್ತೆ ಬೆಂಗಳೂರಿಗೆ ಬಂದರು. ಮೊದಲನೆಯ ದಿನವೇ ಹರಿಹರನ್‌ರವರ ಪರಿಚಯವಾಯ್ತು. ಕೆತ್ತನೆಯಲ್ಲಿ ಉತ್ತಮ ಹೆಸರು ಮತ್ತು ಗೌರವವನ್ನು ಸಂಪಾದಿಸಿರುವ ಶ್ರೀನಿವಾಸಾಚಾರ್ಯರು ತರಬೇತಿಗೆ ಬಂದಿರುವುದು ಹರಿಹರನ್ ಅವರಿಗೆ ಆಶ್ಚರ್ಯ ತಂದಿತ್ತು. ನೇರವಾಗಿಯೇ ಶ್ರೀನಿವಾಸಾಚಾರ್ಯರಲ್ಲಿ 'ನೀವು ತರಬೇತಿಗೆ ಬಂದಿರುವುದು ಆಶ್ಚರ್ಯವಾಗುತ್ತಿದೆ' ಎಂದರು, ಇದಕ್ಕೆ ಶ್ರೀನಿವಾಸಾಚಾರ್ಯರು 'ಲೋಹ ಶಿಲ್ಪಕೆತ್ತನೆಯಲ್ಲಿ ಅನುಭವ ಇದೆ. ಕಲ್ಲಿನ ಕೆತ್ತನೆಯನ್ನು ಕಲಿಯೋಣ ಅಂತ ಬಂದಿದ್ದೇನೆ' ಎಂದರು.

ಮಧ್ಯವಯಸ್ಸಿನಲ್ಲಿ ಪ್ರಖ್ಯಾತರೆನಿಸಿಕೊಂಡು, ಹಲವು ಮುಖ್ಯಸ್ಥಳಗಳಲ್ಲಿ ಗೌರವವನ್ನು ಸಂಪಾದಿಸಿ, ಈಗಲೂ ಸರಳ ಮನೋಭಾವನೆಯನ್ನು ಹೊಂದಿದ್ದು, ಮತ್ತಷ್ಟು ಶಿಲ್ಪಜ್ಞಾನವನ್ನು ಪಡೆಯುವುದಕ್ಕೆ ಮುಂದಾಗಿದ್ದ ಶ್ರೀನಿವಾಸಾಚಾರ್ಯರ ಬಗ್ಗೆ ಹರಿಹರನ್ ಮೆಚ್ಚುಗೆ ಸೂಚಿಸಿದರು. ಇವರಿಬ್ಬರಲ್ಲಿ ಸ್ನೇಹ ಮನೋಭಾವನೆ ಬೆಳೆಯಲಾರಂಭಿಸಿತು. ಹರಿಹರನ್‌ರವರು ನಿರ್ದೇಶಕರಾಗಿದ್ದ ಅಂಬಾಸ್ಕರ್‌ರವರಲ್ಲಿ ಶ್ರೀನಿವಾಸಾಚಾರ್ಯರ ಶ್ರೇಷ್ಠತೆಯ ಬಗ್ಗೆ ತಿಳಿಸಿ ಉದ್ಯೋಗದ ವಿನಿಮಯದಲ್ಲಿ ನೋಂದಣಿ ಮಾಡಿಸಿ ಅರ್ಜಿ ಸಲ್ಲಿಸಿ ಶ್ರೀನಿವಾಸಾಚಾರ್ಯರನ್ನು ಕರಕುಶಲ ಕೇಂದ್ರಕ್ಕೆ ನುರಿತ ಕಾರ್ಮಿಕರ (Skilled worker) ಹುದ್ದೆಗೆ ನೇಮಕಾತಿ ಮಾಡಿಕೊಳ್ಳುವುದಕ್ಕೆ ನಿರ್ಧರಿಸಿದರು. ಒಂದು ವಾರದ ತರಬೇತಿಯಾದ ನಂತರ ಶ್ರೀನಿವಾಸಾಚಾರ್ಯರನ್ನು ಭೇಟಿ ಮಾಡಿ, ಕೈಗೆ ನೇಮಕಾತಿ ಪತ್ರವನ್ನು ಕೊಟ್ಟು 'ಇವರು ಕಲಿಯಲು ಅಲ್ಲ, ಕಲಿಸುವುದಕ್ಕೆ ಬಂದವರು' ಎಂದು ತಿಳಿಸುತ್ತಾ ಹಾಗೆಯೇ ಕೆಲವೇ ತಿಂಗಳುಗಳಲ್ಲಿ ಪ್ರಮೋಷನ್ ಮಾಡಿ ಸಹಾಯಕ ಕುಶಲಕರ್ಮಿಯಾಗಿ ತೆಗೆದುಕೊಳ್ಳುವ ಮಾತನ್ನು ಕೊಟ್ಟರು.

ನೇಮಕಾತಿ ಪತ್ರವನ್ನು ಕುಟುಂಬದವರಿಗೆಲ್ಲಾ ತೋರಿಸಿ ಎಲ್ಲರ ಅಭಿಪ್ರಾಯದ ಮೇರೆಗೆ ಕುಟುಂಬವನ್ನು ಮೈಸೂರಿನಲ್ಲಿಯೇ ಇರಿಸಿ ಬೆಂಗಳೂರಿಗೆ ಬಂದು ಸರ್ಕಾರಿ ಕೆಲಸವನ್ನು 1957ರಲ್ಲಿ ಪ್ರಾರಂಭಿಸಿದರು. ಹರಿಹರನ್ ಹಾಗೂ ಶ್ರೀನಿವಾಸಾಚಾರ್ಯರು ಸಿಬ್ಬಂದಿಗಿಂತ ಸ್ನೇಹಿತರಾಗಿ ಒಬ್ಬರನ್ನೊಬ್ಬರು ಗೌರವಿಸುತ್ತಿದ್ದರು. ಕೆಲಸವನ್ನು ಶುರುಮಾಡಿದ ಒಂದೇ ತಿಂಗಳಲ್ಲಿ ಕರಕುಶಲ ಮಂಡಲಿಯ ನಿರ್ದೇಶಕರಾಗಿದ್ದ ಅಂಬಾಸ್ಕರ್‌ರವರು ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟರು. ಅಂದಿನಿಂದ ನಿರ್ದೇಶಕರ ಸ್ಥಾನ ಎರಡು ವರ್ಷದವರೆವಿಗೂ ಖಾಲಿಯಾಗಿತ್ತು ಹಾಗೂ ಶ್ರೀನಿವಾಸಾಚಾರ್ಯರಿಗೂ ಪ್ರಮೋಷನ್ ಆಗದೆ ಸಂಬಳ ಕೂಡ ಬಹಳ ಕಡಿಮೆಯಿತ್ತು. ಅಂದಾಜಿಗೆ ಏಳರಿಂದ ಎಂಟು ಮಕ್ಕಳಿದ್ದ ಸಂಸಾರವು ಬೆಳೆಯುತ್ತಲಿತ್ತು. ಅಷ್ಟರಲ್ಲಿ

ಸಹಾಯಕ ನಿರ್ದೇಶಕರಾಗಿದ್ದ ಹರಿಹರನ್‌ರವರ ಪ್ರಮೋಷನ್ ಆಗಿ ಕರಕುಶಲ ಮಂಡಳಿಗೆ ನಿರ್ದೇಶಕರಾದರು. ಶ್ರೀನಿವಾಸಾಚಾರ್ಯರು ಸ್ವಲ್ಪ ದಿನದಿಂದಲೂ ಯೋಚಿಸುತ್ತಿದ್ದ ವಿಷಯವನ್ನು ಹರಿಹರನ್‌ರವರ ಬಳಿ ಹೋಗಿ 'ಪ್ರಮೋಷನ್ ಎರಡೂ ವರ್ಷಗಳಾದರೂ ಆಗಿಲ್ಲದ ಕಾರಣ, ಕೆಲಸಕ್ಕೆ ರಾಜೀನಾಮೆ ಕೊಡಲು ಇಚ್ಛಿಸುತ್ತೇನೆ ಮತ್ತೆ ಕೆಲಸಕ್ಕೆ ಬರುವುದಿಲ್ಲ' ಎಂದರು. ಈ ಮಾತಿಗೆ ಹರಿಹರನ್‌ರವರು ಶ್ರೀನಿವಾಸಾಚಾರ್ಯರಿಗೆ 'ನಿಮಗೆ ದಿನಕ್ಕೆ ಹತ್ತು ರೂಪಾಯಿ ಕೊಡಿಸುತ್ತೇನೆ. ಕೆಲಸವನ್ನು ಬಿಡದೆ ಮುಂದುವರಿಸಿ' ಎಂದು ವಿನಂತಿಸಿಕೊಂಡರು. ಇದಕ್ಕೆ ಮನಸ್ಸಾಗದೆ, ಕಚೇರಿಯಿಂದ ಸಾಯಂಕಾಲ ಐದು ಗಂಟೆಗೆ ಮನೆಯ ಕಡೆಗೆ ನಡೆದರು.

ಈ ಸನ್ನಿವೇಶವನ್ನು ಎದುರಿಸಿದ ನಿರ್ದೇಶಕರಾದ ಹರಿಹರನ್‌ರವರು ತಕ್ಷಣವೇ ಮೇಲಧಿಕಾರಿಗಳ ಜೊತೆಯಲ್ಲಿ 'ಶ್ರೀನಿವಾಸಾಚಾರ್ಯರು ನಮ್ಮ ಕೇಂದ್ರಕ್ಕೆ ಬೇಕು. ಇಂತಹ ಶಿಲ್ಪಿಯನ್ನು ಕಳೆದುಕೊಳ್ಳುವುದಕ್ಕೆ ಮನಸ್ಸಿಲ್ಲಾ' ಎಂದರು. ಶ್ರೀನಿವಾಸಾಚಾರ್ಯರ ಶಿಲ್ಪಚಾತುರ್ಯವನ್ನು ಗಮನಿಸುತ್ತಿದ್ದ ಮೇಲಾಧಿಕಾರಿಗಳು ಕೆಲವೇ ನಿಮಿಷಗಳಲ್ಲಿ ಸಹಾಯಕ ಕುಲಶಕರ್ಮಿಯ ಹುದ್ದೆಗೆ ತೆಗೆದುಕೊಳ್ಳುವುದಕ್ಕೆ ನೇಮಕಾತಿ ಪತ್ರವನ್ನು ತಯಾರಿಸಿದರು. ಹರಿಹರನ್‌ರವರು ಜವಾನನಾಗಿದ್ದ ಗುಣಶೀಲನನ್ನು ಕರೆಸಿ, ಈಗಲೇ ಶ್ರೀನಿವಾಸಾಚಾರ್ಯರನ್ನು ಕಚೇರಿಗೆ ಕರೆತರಲು ಹೇಳಿದರು. ಗುಣಶೀಲರು ತಕ್ಷಣವೇ ಹೊರಟು ಶ್ರೀನಿವಾಸಾಚಾರ್ಯರನ್ನು ಜೊತೆಯಲ್ಲಿಯೇ ಕಚೇರಿಗೆ ಕರೆತಂದರು. ಹರಿಹರನ್‌ರವರು ಶ್ರೀನಿವಾಸಾಚಾರ್ಯರನ್ನು ಬರಮಾಡಿಕೊಂಡು ಕ್ಷಮೆ ಯಾಚಿಸಿ 'ಶ್ರೀನಿವಾಸಾಚಾರ್ಯರೇ ಈ ಕೇಂದ್ರ ನಿಮ್ಮದೇ ಅನ್ನುವ ಭಾವನೆಯಿಂದ ಇಷ್ಟು ಕಷ್ಟಗಳನ್ನು ಅನುಭವಿಸುತ್ತಾ ಶಿಲ್ಪಕಲೆಯನ್ನು ಬೆಳೆಸಿದ್ದೀರಿ. ಇನ್ನು ಮುಂದೆ ಸಂತೋಷದಿಂದ ಕೆಲಸವನ್ನು ಮುಂದುವರಿಸಿ' ಎಂದು ಹೇಳಿ ನೇಮಕಾತಿ ಪತ್ರವನ್ನು ಕೊಟ್ಟರು.

ಕುಟುಂಬದಿಂದ ಎರಡು ವರ್ಷಗಳು ದೂರವಿದ್ದ ಕಾರಣ ಈ ನೇಮಕಾತಿ ಪತ್ರವು ಬಹಳ ಸಂತೋಷವನ್ನು ತಂದಿತ್ತು. ಆಗಲೇ ಕುಟುಂಬವನ್ನು ಬೆಂಗಳೂರಿಗೆ ಕರೆಸಲು ತಯಾರಿಗಳನ್ನು ಶುರುಮಾಡಿದರು. ಇವರು ಇದ್ದ ಸಣ್ಣ ಮನೆಯನ್ನು ಬಿಟ್ಟು ಬೆಂಗಳೂರಿನ ಸಂಪಂಗಿರಾಮನಗರದ ಮೊದಲನೆ ಮಹಡಿಯನ್ನು ಬಾಡಿಗೆ ಮನೆ ಪಡೆದರು. ಹಿರಿಯ ಮಕ್ಕಳು ವಿದ್ಯಾಭ್ಯಾಸದಲ್ಲಿದ್ದ ಕಾರಣ ನಾಲ್ಕು ಮಕ್ಕಳನ್ನು ಮೈಸೂರಿನ ಮನೆಯಲ್ಲಿಯೇ ಉಳಿಯುವುದಕ್ಕೆ ಅನುಕೂಲಗಳನ್ನು ಮಾಡಿ ಉಳಿದ ಮಕ್ಕಳನ್ನು ಹಾಗೂ ಶಾರದಮ್ಮನವರನ್ನು ಬೆಂಗಳೂರಿಗೆ ಕರೆತಂದರು.

ಎರಡು ವರ್ಷಗಳು ತಾವೇ ಅಡುಗೆ ಮಾಡಿಕೊಂಡು ಮನೆಯ ಕೆಲಸಗಳನ್ನು ಮುಗಿಸಿ ಕಚೇರಿಗೆ ಹೋಗುತ್ತಿದ್ದ ಶ್ರೀನಿವಾಸಾಚಾರ್ಯರು ಶಾರದಮ್ಮನವರು ಬೆಂಗಳೂರಿಗೆ ಬಂದ ಮೇಲೆಯೂ ಸಹ ತಮ್ಮ ಬಟ್ಟೆಗಳನ್ನು ತಾವೇ ಒಗೆದುಕೊಳ್ಳುತ್ತಿದ್ದರು. ಶ್ರೀನಿವಾಸಾಚಾರ್ಯರು ಬಾಲ್ಯದಿಂದಲೇ ಆಚಾರ ವಿಚಾರ ಸಂಸ್ಕೃತಿಯನ್ನು ಪಾಲಿಸುತ್ತಿದ್ದ ಕಾರಣ, ಅವರ ದಿನ ಮುಂಜಾನೆ 5 ಗಂಟೆಗೆ ಶುರುವಾಗಿ ಪೂಜೆ ಮುಗಿಸಿ ಶುಭ್ರವಾದ ಶ್ವೇತಧಾರಿಯಾಗಿ ಹಗುರ ಮನಸ್ಸಿನಿಂದ ಕಚೇರಿಗೆ ಹೊರಡುತ್ತಿದ್ದರು. ಅಷ್ಟರಲ್ಲಿ ಶಾರದಮ್ಮನವರು ಬೆಳಗ್ಗಿನ ತಿಂಡಿ, ಊಟಗಳನ್ನು ತಯಾರಿಸಿ ಊಟವನ್ನು ಡಬ್ಬಿಯಲ್ಲಿ ಹಾಕಿಕೊಡುತ್ತಿದ್ದರು. ಹೀಗೊಮ್ಮೆ ಸಿಬ್ಬಂದಿಗಳೆಲ್ಲಾ ಪ್ರವಾಸಕ್ಕೆ ಹೋದಾಗ ಶ್ರೀನಿವಾಸಾಚಾರ್ಯರೇ ಬೆಳಗ್ಗೆಯ ತಿಂಡಿ, ಮಧ್ಯಾಹ್ನಕ್ಕೆ ಅಡುಗೆ ತಯಾರಿಸಿದ್ದರು. ಬಹಳ ರುಚಿಯಾಗಿದ್ದ ಕಾರಣ ಎಲ್ಲರಿಂದ ಪ್ರಶಂಸೆ ಗಳಿಸಿದ್ದರು.

ಮನೆಯಲ್ಲಿಯೂ ಶಿಲ್ಪಕೆತ್ತನೆಯ ಕೆಲಸಗಳು ಹೇರಳವಾಗಿ ಬರುತ್ತಿದ್ದ ಕಾರಣ ಸಾಯಂಕಾಲ ಕಚೇರಿಯಿಂದ ಮನೆಗೆ ನಡೆದುಕೊಂಡು ಬಂದು ವಿಶ್ರಾಂತಿ ಪಡೆದು ಮತ್ತೆ ಶಿಲ್ಪರಚನೆಯ ಕಾರ್ಯವನ್ನು ಕೈಗೊಳ್ಳುತ್ತಿದ್ದರು. ಮನೆಗೆ ಬೇಕಾಗುವಷ್ಟು ಸಂಪಾದಿಸುತ್ತಿದ್ದರು. ಚಿಕ್ಕ ವಿಗ್ರಹಗಳನ್ನು ರೇಕಿನ ಕೆಲಸಗಳನ್ನು ಹಾಗೂ ಬೆಳ್ಳಿಯ ಫೋಟೋಗೆ ಬೇಕಾಗುವ ಡೈಗಳನ್ನು ದಿನಕ್ಕೆ ಒಂದರಂತೆ ತಯಾರಿಸುತ್ತಿದ್ದರು. ಇದಕ್ಕೆ 30 ರೂಪಾಯಿಗಳು ದೊರೆಯುತ್ತಿತ್ತು.

ಕರಕುಶಲ ಕೇಂದ್ರದಲ್ಲಿ ರೇಕಿನಿಂದ ಸಪ್ತಋಷಿಗಳನ್ನು ಹಾಗೂ ಸಪ್ತಕನ್ನಿಕೆಯರನ್ನು ಮಾಡಿದರು. ಹರಿಹರನ್‌ರವರು ಶ್ರೀನಿವಾಸಾಚಾರ್ಯರೊಂದಿಗೆ ಜೀವನದ ಬಗ್ಗೆ, ಶಿಲ್ಪಗಳ ಬಗ್ಗೆ, ದೇವಸ್ಥಾನಗಳ ಬಗ್ಗೆ, ಹಲವು ಶೈಲಿಗಳ ಬಗ್ಗೆ ಚರ್ಚಿಸುತ್ತಿದ್ದರು. ಹಾಗೆಯೇ ಒಂದು ದಿನ 'ಮೃದುವಾದ ಕಲ್ಲಿನಿಂದ ಸೂಕ್ಷ್ಮ ಕೆತ್ತನೆಯಾದ ಹೊಯ್ಸಳ ಶೈಲಿಯು ಸಾಧ್ಯವಾಯಿತು. ಆದರೆ ಅದೇ ಶೈಲಿಯನ್ನು ಲೋಹದಲ್ಲಿ ಮಾಡಲು ಸಾಧ್ಯವಿಲ್ಲ, ಅದಕ್ಕೇ ಎಲ್ಲರೂ ಚೋಳ ಶೈಲಿಯನ್ನೇ ಲೋಹದಲ್ಲಿ ಪ್ರತಿಬಿಂಬಿಸುತ್ತಾರೆ" ಎಂದರು. ಲೋಹದಲ್ಲಿ ಚೋಳ ಶೈಲಿಯನ್ನು ಉಪಯೋಗಿಸಿ ಮಾಡುತ್ತಿದ್ದ ಶಿಲ್ಪಿ ಶ್ರೀನಿವಾಸಾಚಾರ್ಯರು 'ಹೊಯ್ಸಳ ಶೈಲಿಯ ಕುಸುರಿ ಕೆಲಸ ಕಷ್ಟ ಹಾಗೂ ಹೆಚ್ಚು ಸಮಯ ಬೇಕಾಗುವ ಕಾರಣ ಶಿಲ್ಪಿಗಳು ಮಾಡಿಲ್ಲದಿರಬಹುದು, ಆದರೆ ಸಾಧ್ಯವಿಲ್ಲ ಎನ್ನುವುದು ನನಗೆ ಒಪ್ಪಿಗೆಯಿಲ್ಲ, ಇನ್ನು ಮುಂದಿನ ದಿನಗಳಲ್ಲಿ ಹೊಯ್ಸಳ ಶೈಲಿಯನ್ನು ಉಪಯೋಗಿಸಿ ಶಿಲ್ಪಗಳನ್ನು ರಚಿಸುತ್ತೇನೆ' ಎಂದರು.

ಈ ಮಾತಿಗೆ ಒಪ್ಪಿದ ಇವರಿಬ್ಬರಲ್ಲಿ ಕುತೂಹಲ ಮುಂದುವರಿಯಿತು. ಶ್ರೀನಿವಾಸಾಚಾರ್ಯರು ಬೇಲೂರಿನ ಶಿಲಾವಿಗ್ರಹಗಳನ್ನು ನೋಡಿ ಸ್ಫೂರ್ತಿಯಿಂದ

ಲೋಹ ಕೆತ್ತನೆಯನ್ನು ಆರಂಭಿಸಿ, ಪ್ರಪ್ರಥಮ ಭಾರಿಗೆ ಲೋಹದ ಶಿಲ್ಪ ಜಗತ್ತಿಗೆ ಹೊಯ್ಸಳ ಶೈಲಿಯನ್ನು ಪರಿಚಯಿಸಿ ಚನ್ನಕೇಶವ, ನಾಟ್ಯ ಸರಸ್ವತಿ, ಎರಡು ಮದನಿಕೆಗಳನ್ನು ಮಾಡಿ ಹರಿಹರನ್‌ರವರಿಂದ ಹಾಗೂ ಎಲ್ಲರಿಂದಲೂ ಪ್ರಶಂಸೆಗೆ ಪಾತ್ರರಾದರು. ಇಷ್ಟರಲ್ಲಿ ನಿರ್ದೇಶಕರಾಗಿದ್ದ ಹರಿಹರನ್‌ರವರು ನಿವೃತ್ತರಾದರು. ಶ್ರೀನಿವಾಸಾಚಾರ್ಯರಲ್ಲಿ ಪ್ರಶ್ನೆಗಳನ್ನು ಕೇಳಿ ಉತ್ತರಗಳನ್ನು ಹೊಯ್ಸಳ ಶೈಲಿಯ ಶಿಲ್ಪದಲ್ಲಿ ಕಾಣುವಂತೆ ಮಾಡಿದ ಸಾಹೇಬರು ಹಾಗೂ ಸ್ನೇಹಿತರಂತೆ ಇದ್ದ ಹರಿಹರನ್‌ರವರ ನಿವೃತ್ತಿಯಾಗಿದ್ದು ಶ್ರೀನಿವಾಸಾಚಾರ್ಯರಲ್ಲಿ ಗೊಂದಲವನ್ನು ಉಂಟುಮಾಡಿತ್ತು. ಆದರೆ ಹೊಯ್ಸಳ ಶೈಲಿಯು ಲೋಹ ವಿಗ್ರಹಗಳ ಜೊತೆಯಾದ್ದರಿಂದ ಮನಸ್ಸು ಹಗುರವಾಗಿತ್ತು.

ಕರಕುಶಲ ಕೇಂದ್ರದಲ್ಲಿ ಮತ್ತೊಬ್ಬರು ಶ್ರೀನಿವಾಸಾಚಾರ್ಯರಿಗೆ ಸ್ಫೂರ್ತಿಯನ್ನು ತುಂಬುವುದಕ್ಕೆ ನಿರ್ದೇಶಕರಾಗಿ ಬಂದರು.

೮. ಗಮ್ಯದತ್ತ ನಡೆದ ವರಶಿಲ್ಪಿ

ಹೊಯ್ಸಳ ಶೈಲಿಯನ್ನು ಲೋಹದಲ್ಲಿ ಪ್ರಾಯೋಗಿಕವಾಗಿ ಪ್ರಾರಂಭಿಸಿ, ಲೋಹಶಿಲ್ಪ ಕೆತ್ತನೆಯಲ್ಲಿ ಹೊಸ ಆಯಾಮವನ್ನು ಸೃಷ್ಟಿಸಿ ಮುಂದುವರೆದ ಶ್ರೀನಿವಾಸಾಚಾರ್ಯರ ಜೀವನದಲ್ಲಿ ಕರಕುಶಲ ಕೇಂದ್ರಕ್ಕೆ ನಿರ್ದೇಶಕರಾಗಿ ಬಂದಿದ್ದು ಸೇನ್‌ಗುಪ್ತರವರು. ಸೇನ್‌ಗುಪ್ತರವರು ಶ್ರೀನಿವಾಸಾಚಾರ್ಯರು ಮಾಡಿದ್ದ ಹೊಯ್ಸಳ ಶೈಲಿಯ ಚನ್ನಕೇಶವ ವಿಗ್ರಹವನ್ನು ಅದರಲ್ಲಿ ಮೂಡಿಸಿದ್ದ ದೈವಭಾವವನ್ನು ನೋಡಿ ಮೂಕವಿಸ್ಮಿತರಾದರು. ಹಾಗೂ ನಾಟ್ಯ ಸರಸ್ವತಿಯ ಅದ್ಭುತ ಸೌಂದರ್ಯವನ್ನು ನೋಡಿ ಬಹಳ ಸಂತೋಷಪಟ್ಟರು.

ಸೇನ್‌ಗುಪ್ತರವರು ಶ್ರೀನಿವಾಸಾಚಾರ್ಯರ ಕಲಾವಂತಿಕೆಯನ್ನು ವಿಸ್ತರಿಸಲು ದೊಡ್ಡ ಗಾತ್ರದ ಶಿಲ್ಪರಚನೆಗೆ ಪ್ರೋತ್ಸಾಹಿಸಿದರು. ಈ ಪ್ರೋತ್ಸಾಹಕ್ಕೆ ಸ್ಪಂದಿಸಿ ಶ್ರೀನಿವಾಸಾಚಾರ್ಯರು ನಿರ್ಮಿಸಲು ಪ್ರಾರಂಭಿಸಿದ್ದು ಆರು ಅಡಿಯ ಚೋಳ ರಾಣಿಯನ್ನು. ಲೋಹಶಿಲ್ಪಿಯಾದ್ದರಿಂದ ಲೋಹದ ವೈಶಿಷ್ಟ್ಯತೆಗಳನ್ನು ಅರಿತಿದ್ದ ಕಾರಣ ಆರು ಅಡಿಯ ವಿಗ್ರಹಕ್ಕೆ ಬೇಕಿದ್ದ (Hallow Casting) ಟೊಳ್ಳು ತಂತ್ರವನ್ನು ಅಳವಡಿಸಿ ಚೋಳ ಶೈಲಿಯಲ್ಲಿ ಮಾಡಲಾರಂಭಿಸಿದರು.

ಇದೇ ಸಮಯದಲ್ಲಿ ಸೇನ್‌ಗುಪ್ತರವರ ಹಿರಿಯ ಅಧಿಕಾರಿಗಳು ತಮಿಳುನಾಡಿನ ಹಲವೆಡೆ ಶಿಲೆಯಲ್ಲಿ ನವಗ್ರಹ ಮಾಡುವಂತಹ ಶಿಲ್ಪಿಯನ್ನು ಹುಡುಕುತ್ತಾ ಕರಕುಶಲ ಕೇಂದ್ರದಲ್ಲಿ ವಿಚಾರಿಸಿದಾಗ ಶ್ರೀನಿವಾಸಾಚಾರ್ಯರ ಹೆಸರು ಕೇಳಿ ಬಂದಿತು. ಅವರಿಗಾಗಿ ಶ್ರೀನಿವಾಸಾಚಾರ್ಯರು ಶಿಲೆಯಲ್ಲಿಯೇ ನವಗ್ರಹಗಳನ್ನು ಶಾಸ್ತ್ರೋಕ್ತವಾಗಿ ಮಾಡಿಕೊಟ್ಟರು.

ಅದೇ ಸಮಯದಲ್ಲಿ ಸೇನ್‌ಗುಪ್ತರವರು ರಾಷ್ಟ್ರಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ಸದಸ್ಯರಾಗಿದ್ದ ಕಾರಣ, ದೆಹಲಿಗೆ ಹೋದರು. ಅಲ್ಲಿ ಇದ್ದ ಎಲ್ಲಾ ಶಿಲ್ಪಗಳನ್ನು ನೋಡಿದರು. ಆದರೆ ಸೇನ್‌ಗುಪ್ತರವರಿಗೆ ಶ್ರೀನಿವಾಸಾಚಾರ್ಯರ ಚನ್ನಕೇಶವ ಹಾಗೂ ನಾಟ್ಯ ಸರಸ್ವತಿಯ ಲೋಹಶಿಲ್ಪಗಳು ನೆನಪಿಗೆ ಬರುತ್ತಿತ್ತು. ಈ ವಿಷಯವನ್ನು ಎಲ್ಲಾ ಆಯ್ಕೆ ಸಮಿತಿಯವರಲ್ಲಿ ಹೇಳಿ ಸೇನ್‌ಗುಪ್ತರವರೇ ತಮ್ಮ ಖರ್ಚಿನಿಂದಲೇ ಬೆಂಗಳೂರಿನಲ್ಲಿದ್ದ ಚನ್ನಕೇಶವ ಹಾಗೂ ಸರಸ್ವತಿಯ ವಿಗ್ರಹಗಳನ್ನು ವಿಮಾನದಲ್ಲಿ ತರಿಸಿಕೊಂಡರು. ಮಾರನೇಯ ದಿನ ಈ ಎರಡೂ ವಿಗ್ರಹಗಳನ್ನು ಎಲ್ಲಾ ಆಯ್ಕೆ ಸಮಿತಿಯ ಸದಸ್ಯರಿಗೆ ತೋರಿಸಿದರು. ಹೊಯ್ಸಳ ಶೈಲಿಯ ಲೋಹ ವಿಗ್ರಹವನ್ನು ಮೊದಲ ಬಾರಿಗೆ ನೋಡಿದ ಎಲ್ಲಾ ಸದಸ್ಯರು ಬಹಳ ಗೌರವ ಸಂತೋಷದಿಂದ ಒಪ್ಪಿ ರಾಷ್ಟ್ರಪ್ರಶಸ್ತಿಯನ್ನು ಚನ್ನಕೇಶವ ವಿಗ್ರಹಕ್ಕೆ ಕೊಡುವುದಾಗಿ ಘೋಷಿಸಿದರು.

ಆಧುನಿಕ ಶೈಲಿಯನ್ನು ರೂಢಿಮಾಡಿಕೊಂಡಿದ್ದ ಮೀರಾ ಮುಖರ್ಜಿಯವರು ಶ್ರೀನಿವಾಸಾಚಾರ್ಯರಲ್ಲಿ ಸ್ವಲ್ಪ ದಿನಗಳ ಕಾಲ ಎರಕ ಹೊಯ್ಯುವುದನ್ನು ಕಲಿತು ಲೋಹಶಿಲ್ಪ ರಚನೆಯಲ್ಲಿ ತೊಡಗಿದರು. ಇದೇ ಸಮಯದಲ್ಲಿ ಮೀರಾ ಮುಖರ್ಜಿಯವರಿಗೂ ಸಹ ರಾಷ್ಟ್ರಪ್ರಶಸ್ತಿಯನ್ನು ಘೋಷಿಸಿದ್ದರು ಹಾಗಾಗಿ ಗುರು ಶ್ರೀನಿವಾಸಾಚಾರ್ಯರು ಹಾಗೂ ಶಿಷ್ಯರಾದ ಮೀರಾ ಮುಖರ್ಜಿಯವರು ಜೊತೆಯಲ್ಲಿಯೇ ರಾಷ್ಟ್ರಪ್ರಶಸ್ತಿಯನ್ನು ಉಪರಾಷ್ಟ್ರಪತಿಯವರಾಗಿದ್ದ ವಿ.ವಿ. ಗಿರಿಯವರಿಂದ 1968ರಲ್ಲಿ ದೆಹಲಿಯಲ್ಲಿ ಸ್ವೀಕರಿಸಿದರು. ಈ ವಿಷಯ ಹಲವು ಪತ್ರಿಕೆಗಳಲ್ಲಿ ಲೇಖನ ಛಾಯಾಚಿತ್ರಗಳೊಂದಿಗೆ ಪ್ರಕಟವಾದವು. ಶ್ರೀನಿವಾಸಾಚಾರ್ಯರ ಜೊತೆಯಲ್ಲಿ ಹೋಗಿದ್ದ ಹಿರಿಯ ಮಗ ಸುಜ್ಞಾನಮೂರ್ತಿಯವರು ತಾಯಿ ಶಾರದಮ್ಮನವರಲ್ಲಿ ದೆಹಲಿಯಲ್ಲಾದ ವಿಜೃಂಭಣೆಯ ಕಾರ್ಯಕ್ರಮವನ್ನು ವರ್ಣಿಸಿದಾಗ ಶಾರದಮ್ಮನವರಿಗೆ ಆದ ಸಂತೋಷ ವರ್ಣಿಸಲಸಾಧ್ಯ. ಶಾರದಮ್ಮನವರು ಸಂತೋಷದಿಂದ ಎಲ್ಲಾ ಪತ್ರಿಕೆಗಳನ್ನು ಖರೀದಿಸಿ ಲೇಖನಗಳನ್ನು ಸಂಗ್ರಹಿಸಿದರು. ಕುಟುಂಬದಲ್ಲಿ ಸಂಭ್ರಮದ ವಾತಾವರಣ ಮೂಡಿತು. ಸ್ನೇಹಿತರು, ಸಂಬಂಧಿಕರಿಂದ ಪ್ರಶಂಸೆಯ ಪತ್ರಗಳೂ ಮನೆಯನ್ನು ತಲುಪಿದವು.

೬. ದೈವತ್ವದೆಡೆಯ ಮನಸ್ಥಿತಿಯಲ್ಲಿನ ಯುಗಶಿಲ್ಪಿ

ತಂದೆಯಿಂದ ಲೋಹದ ಕಡತದ ಕೆಲಸವನ್ನು, ತಾಯಿಯಿಂದ ಸಂಸ್ಕಾರ ಮತ್ತು ಸಂಸ್ಕೃತಿಯನ್ನು, ಯಜಮಾನ್ ಶ್ರೀಕಂಠಾಚಾರ್ಯರಿಂದ ಚಿನ್ನದ ಕೆಲಸ, ಶಿಲಾಕೆತ್ತನೆ, ಮೇಣ ಕಟ್ಟುವುದು, ಶಿಲ್ಪಶಾಸ್ತ್ರವನ್ನು, ಸ್ತೋತ್ರ ಶ್ಲೋಕಗಳನ್ನು, ಅಳತೆ, ಪ್ರಮಾಣ, ಶೈಲಿಗಳನ್ನು ಪರಿಚಯಿಸಿಕೊಂಡಿದ್ದರು. ಪೂರ್ವಜರ ಶಿಲ್ಪಗಳನ್ನು ನೋಡುತ್ತಾ, ಚಿಕ್ಕಪ್ಪ ಮತ್ತು ದೊಡ್ಡಪ್ಪನವರ ವಿಗ್ರಹಗಳನ್ನು ನೋಡುತ್ತಾ, ಧ್ವಜ, ತೋರಣ, ನಂದಿಸ್ಥಂಭ ರಚನೆ, ಪಲ್ಲಕ್ಕಿಯ ರಚನೆ, ಉತ್ಸವಮೂರ್ತಿ, ಶಕ್ತಿದೇವತೆಗಳ ರಚನೆ, ಹಲವು ಲೋಹಗಳಿಂದ ಮಾಡಬಹುದಾದ ತಂತ್ರಗಳನ್ನು ಕಲಿತುಕೊಂಡರು. ಮೈಸೂರಿನಲ್ಲಿ ಶಿಲ್ಪ ಸಿದ್ಧಾಂತಿ ಸಿದ್ಧಲಿಂಗ ಸ್ವಾಮಿಯವರಿಂದ ಮನಸಾರ, ಗುರುಗೀತೆ, ಶಿವಗೀತೆ, ಆಗಮ ಶಾಸ್ತ್ರ, ಹೊಯ್ಸಳ ಹಾಗೂ ಚೋಳ ಶೈಲಿಗಳ ಸೂಕ್ಷ್ಮ ವಿಚಾರಗಳನ್ನು ತಿಳಿದುಕೊಂಡರು.

ಇವರ ಶಿಲ್ಪ ಕೌಶಲಕ್ಕೆ ಉದಾಹರಣೆಗಳು ಹಲವಾರಿವೆ. ಚಿನ್ನದಿಂದ ಅಂಬೆಗಾಲು ಕೃಷ್ಣ, ಪರಕಾಲ ಮಠಕ್ಕೆ ಬೆಳ್ಳಿಯ ಹಯಗ್ರೀವ ಮೂರ್ತಿ, ಮೈಸೂರು ಅರಮನೆಗೆ ಬೇಕಾಗಿದ್ದ ದುರ್ಗಾಪ್ರತಿಮೆ, ಸಿಂಹಾಸನಕ್ಕೆ ಬೆಳ್ಳಿಯ ಎರಡು ಚಾಮರದ ಚೇಟಿಯರು, ಶಿಲ್ಪ ಸಿದ್ಧಾಂತಿಗೆ ಚಿನ್ನದ ಆವಿಗೆ, ಭುವನೇಶ್ವರಿ ದೇವಸ್ಥಾನಕ್ಕೆ ಉತ್ಸಮೂರ್ತಿ, ಧರ್ಮಸ್ಥಳದಲ್ಲಿ ಬೆಳ್ಳಿಯ ರಥದ ಪ್ರಭಾವಳಿಯಲ್ಲಿ ಮೂರು ಆಯಾಮಗಳ ರಚನೆ, ಸಂಪಿಗೆಗೆ ಲೋಹದ ಗೊಮ್ಮಟೇಶ್ವರ, ಮಾನ್ಯ ಮಂಜಯ್ಯ ಹೆಗ್ಗಡೆಯವರಿಗೆ ಐರಾವತ ಮೇಲಿರುವ ಇಂದ್ರ, ಚಿನ್ನದ ಪುಷ್ಪ ಕನ್ನಡಿ, ಮಂಜುನಾಥ ದೇವಾಲಯದ ಗರ್ಭಗುಡಿಗೆ ಬಾಗಿಲುವಾಡ, ಬೆಂಗಳೂರಿನಲ್ಲಿ ಎಲ್ಲಾ ಶಿಲ್ಪಿಗಳ ಊಹೆಗೆ ಮೀರಿದ ಹೊಯ್ಸಳ ಶೈಲಿಯಲ್ಲಿ

ಲೋಹದ ಚನ್ನಕೇಶವ, ನಾಟ್ಯ ಸರಸ್ವತಿ, ಆರು ಅಡಿಯ ಚೋಳ ಶೈಲಿಯಲ್ಲಿ ಚೋಳರಾಣಿ, ಶಿಲೆಯಿಂದ ನವಗ್ರಹ ಹೀಗೆ ಇನ್ನೂ ಅನೇಕ ಶಿಲ್ಪಗಳನ್ನು ರಚಿಸಿ ತಮ್ಮಲ್ಲಿ ದೈವಿಕವಾಗಿ ಬಂದಿದ್ದ ಕಲಾ ಶಕ್ತಿಗೆ ಮೂರ್ತರೂಪಕೊಟ್ಟರು. ತಮ್ಮ ಸಾಂಸಾರಿಕ ಜೀವನದಲ್ಲೂ ಸಂತೃಪ್ತಿ ಕಂಡು ರಾಷ್ಟ್ರಪ್ರಶಸ್ತಿಯಿಂದ ಅಲಂಕೃತರಾಗಿದ್ದ ಶ್ರೀನಿವಾಸಾಚಾರ್ಯರ ಜೀವನ ನಿಜಕ್ಕೂ ಅನುಕರಣೀಯ.

ಹೊಯ್ಸಳ ಶೈಲಿಯ ಚನ್ನಕೇಶವನ ಮೂರ್ತಿಯ ರಚನೆಯ ತರುವಾಯ ಶಿಲ್ಪಿ ಶ್ರೀನಿವಾಸಾಚಾರ್ಯರಿಗೆ ಮತ್ತೊಂದು ಸವಾಲು ಸೇನ್‌ಗುಪ್ತಾರವರಿಂದ ಬಂತು. ಶಿಲ್ಪಶಾಸ್ತ್ರದಲ್ಲಿ ಏನಾದರೂ ಸಮಸ್ಯೆ ಬಂದಲ್ಲಿ ಅದನ್ನು ಯಶಸ್ವಿಯಾಗಿ ನಿಭಾಯಿಸುವ ಜ್ಞಾನ ಶ್ರೀನಿವಾಸಾಚಾರ್ಯರಿಗೆ ಇರುವುದು ಸೇನ್‌ಗುಪ್ತಾರವರಿಗೆ ತಿಳಿದ ವಿಷಯ. ದ್ವಿಲೋಹದಲ್ಲಿ ಮಾಡುವಂತಹ ಗಂಗ–ಯಮುನಾ ಪಾತ್ರೆಯ ರೀತಿಯಲ್ಲಿ ಲೋಹವಿಗ್ರಹವನ್ನು ಮಾಡಬಹುದೇ ಎಂಬುದೇ ಸೇನ್‌ಗುಪ್ತಾರವರಿಗೆ ಮೂಡಿದ ಸಂದೇಹ. ಈ ಸಂದೇಹಕ್ಕೆ ಯಾವುದೇ ಉತ್ತರವನ್ನು ಕೊಡದೆ ನಿಶ್ಯಬ್ದರಾದ ಶ್ರೀನಿವಾಸಾಚಾರ್ಯರು ಸೇನ್‌ಗುಪ್ತಾರವರು ಪ್ರಚೋದಿಸಿದ ಪ್ರಶ್ನೆಗೆ ಉತ್ತರ ಹುಡುಕುತ್ತಾ ಕೆಲವರಲ್ಲಿ ವಿಚಾರಿಸಿದಾಗ ದ್ವಿಲೋಹದಿಂದ ವಿಗ್ರಹಗಳ ಉದಾಹರಣೆಗಳೇ ಕಾಣಲಿಲ್ಲ. ಆದರೆ ಗಂಗಾ–ಯಮುನ ಪಾತ್ರೆಯನ್ನು ಮಾಡುವ ತಂತ್ರ ಶಿಲ್ಪಿಗಳ ಮನಸ್ಸಿನಲ್ಲಿರಲ್ಲಿಲ್ಲ. ಹಾಗೂ ಈ ಅದ್ಭುತ ಜ್ಞಾನವು ಇತಿಹಾಸದೊಂದಿಗೆ ಕಾಣೆಯಾಗಿರುವ ವಿಷಯವೂ ತಿಳಿದು ಬಂತು. ಈ ತಂತ್ರವಿದ್ಯೆಯನ್ನು ಕಲಿಯುವುದಕ್ಕೆ ಹಂಬಲಿಸುತ್ತಿದ್ದ ಶಿಲ್ಪಿಗೆ ನಿಜವಾದ ಸವಾಲು ಎದುರಾಗಿತ್ತು. ಅವರ ನಿವೃತ್ತಿಯ ಕಾಲವೂ ಹತ್ತಿರ ಬಂದಾಗಿತ್ತು 1968ರಲ್ಲಿಯೇ ಐವತ್ತೈದನೇ ವಯಸ್ಸಿಗೆ ನಿವೃತ್ತಿಯಾಗಬೇಕಾಗಿತ್ತು.

ಶ್ರೀನಿವಾಸಾಚಾರ್ಯರಲ್ಲಿ ದ್ವಿಲೋಹ ವಿಗ್ರಹದ ಬಗೆಗಿನ ಆಸಕ್ತಿ ಹೆಚ್ಚಾಗಿದ್ದನ್ನು ಅರಿತ ಸೇನ್‌ಗುಪ್ತರವರು ಅವರ ಮನಸ್ಸಿನಲ್ಲಿ ನಡೆಯುತ್ತಿದ್ದ ಯುದ್ಧವನ್ನು ಗ್ರಹಿಸಿದರು. ಇವರಿಂದ ಒಳ್ಳೆಯ ಪ್ರತಿಮೆಯು ಸೃಷ್ಟಿಯಾಗುವ ನಂಬಿಕೆಯಿಂದ ನಿವೃತ್ತರಾಗಬೇಕಿದ್ದ ಶ್ರೀನಿವಾಸಾಚಾರ್ಯರ ಅವಧಿಯನ್ನು ಹೆಚ್ಚಿಸಲು ಹಿರಿಯ ಅಧಿಕಾರಿಗಳಲ್ಲಿ ಚರ್ಚೆಮಾಡಿ 55ಕ್ಕೆ ಆಗಬೇಕಿದ್ದ ನಿವೃತ್ತಿಯನ್ನು 58ನೇ ವಯಸ್ಸಿಗೆ ಏರಿಸಿದರು. ಶ್ರೀನಿವಾಸಾಚಾರ್ಯರು, ಲೋಹದ ಬಗೆಗೆ ತಾವು ಸಂಪಾದಿಸಿದ್ದ ಎಲ್ಲಾ ಜ್ಞಾನವನ್ನು ಉಪಯೋಗಿಸಿ ದ್ವಿಲೋಹಕ್ಕೆ ಸರಿಯಾದ ಆಕೃತಿಯೆಂದರೆ ಅರ್ಧನಾರೀಶ್ವರವೆಂದು ನಿರ್ಧರಿಸಿದರು. ಪುರುಷ ಭಾಗವನ್ನು ಹಿತ್ತಾಳೆಯಿಂದ ಹಾಗೂ ಸ್ತ್ರೀ ಭಾಗವನ್ನು ತಾಮ್ರದಲ್ಲಿ ಎರಕ ಹೊಯ್ಯುವುದಾಗಿ ಯೋಚಿಸಿ ಬೇಕಾದ ರೇಖಾಚಿತ್ರವನ್ನು ಹಾಗೂ ಮೇಣದ ವಿಗ್ರಹವನ್ನು ತಯಾರಿಸಿದರು. ಆದರೆ ದ್ವಿಲೋಹದ ಎರಕವು ಅರ್ಧನಾರೀಶ್ವರ ವಿಗ್ರಹದ ಹೊಟ್ಟೆಯ ಭಾಗದಲ್ಲಿ

ಮಿಶ್ರಗೊಳ್ಳುತ್ತಿದ್ದವು ಹಾಗು ಇನ್ನೂ ಅನೇಕ ತೊಂದರೆಗಳಾದವು. ಆದರೂ ಧೃತಿಗೆಡದ ಶ್ರೀನಿವಾಸಾಚಾರ್ಯರು ಒಂದಾದ ಮೇಲೊಂದು ಉತ್ತರಗಳನ್ನು ಹುಡುಕುತ್ತಾ ಕೊನೆಗೆ ಯುಗದಲ್ಲಿಯೇ ಮೊದಲ ಬಾರಿಗೆ ಒಂದೂವರೆ ಅಡಿ ಎತ್ತರದ ದ್ವಿಲೋಹದಿಂದ ಅರ್ಧನಾರೀಶ್ವರ ಶಿಲ್ಪವನ್ನು ಸೃಷ್ಟಿಸಿ ಆಧುನಿಕ ಶತಮಾನದಲ್ಲಿ '**ದ್ವಿಲೋಹಶಿಲ್ಪ ರಚನೆಯ ಆದ್ಯಪ್ರವರ್ತಕ**'ರಾದರು.

ಈ ವಿಗ್ರಹದ ವಿಶೇಷವೇನೆಂದರೆ ಯುಗಶಿಲ್ಪಿ ಶ್ರೀನಿವಾಸಾಚಾರ್ಯರು ಮೊದಲ ಬಾರಿಗೆ ಲೋಹಕ್ಕೆ ಹೊಯ್ಸಳ ಶೈಲಿಯನ್ನು ಪರಿಚಯಿಸಿ ಅದೇ ಹೊಯ್ಸಳ ಶೈಲಿಗೆ ದ್ವಿಲೋಹವನ್ನು ಪರಿಚಯಿಸಿದರು. ಹಲವು ದೇಶಗಳಿಂದ ದ್ವಿಲೋಹ ವಿಗ್ರಹದ ಬಗ್ಗೆ ಉಪನ್ಯಾಸ ನೀಡಲು ಆಮಂತ್ರಣ ಬಂದವು. ಆದರೆ ಶ್ರೀನಿವಾಸಚಾರ್ಯರು ಕನ್ನಡ ಭಾಷೆಯೊಂದೇ ತಿಳಿದಿದ್ದ ಕಾರಣ ಬೇರೆ ದೇಶಕ್ಕೆ ಹೋಗುವುದಕ್ಕೆ ಮನಸ್ಸು ಮಾಡಲಿಲ್ಲ. ಇಷ್ಟರಲ್ಲಿ ಶ್ರೀನಿವಾಸಾಚಾರ್ಯರಿಗೆ ಐವತ್ತೆಂಟು ವರ್ಷ ವಯಸ್ಸಾಗಿತ್ತು. ನಿವೃತ್ತಿಯ ಸಮಯವಾಗಿತ್ತು.

ಆದರೆ ಸೇನ್‌ಗುಪ್ತಾರವರು ಇಲ್ಲಿಯೂ ಶ್ರೀನಿವಾಸಾಚಾರ್ಯರನ್ನು ನಿವೃತ್ತಿ ಮಾಡಲು ಮನಸ್ಸಾಗದೆ ಅಧಿಕಾರಿಗಳಿಂದ ಸಲಹೆಗಳನ್ನು ಪಡೆದು ನಿವೃತ್ತಿಯ ಮಿತಿಯನ್ನು 60ಕ್ಕೆ ಏರಿಸಿದರು. ಈ ವಿಷಯವು ಶ್ರೀನಿವಾಸಾಚಾರ್ಯರ ಮನಸ್ಸಿನಲ್ಲಿ ಸ್ವಾತಂತ್ರವನ್ನು ಅನುಭವಿಸಿದಂತಾಯಿತು. ಮತ್ತಷ್ಟು ಅದ್ಭುತ ಶಿಲ್ಪರಚನೆಯಲ್ಲಿ ತೊಡಗುವುದಕ್ಕೆ ಮುಂದಾದರು. ದ್ವಿಲೋಹದ ವೀಣಾಪಾಣಿಯನ್ನು ರಚಿಸಿದರು. ದೇಹ ತಾಮ್ರದಿಂದಲೂ ಹಾಗೂ ಆಭರಣವನ್ನು ಹಿತ್ತಾಳೆಯಿಂದಲೂ ತಯಾರಿಸಿದರು.

ಮೇಲಧಿಕಾರಿಗಳು ಶಿಲ್ಪಿಗಳ ಸಿಬ್ಬಂದಿಯವರು ಎಲ್ಲರೂ ಸೇರಿ 2–3–1973ರಂದು ಲೋಹಶಿಲ್ಪಿ ಎನ್.ಪಿ. ಶ್ರೀನಿವಾಸಾಚಾರ್ಯರಿಗೆ ಸನ್ಮಾನದ ಸಮೇತವಾಗಿ ನಿವೃತ್ತಿಯ ಜೀವನಕ್ಕೆ ಬೀಳ್ಕೊಟ್ಟರು. ಈ ವೇಳೆಯಲ್ಲಿ ಸೇನ್‌ಗುಪ್ತಾರವರು ಶ್ರೀನಿವಾಸಾಚಾರ್ಯರಿಗೆ 'ವಿನ್ಯಾಸ ಕೇಂದ್ರದಿಂದ ನಿವೃತ್ತರಾಧರೂ ಸಹ ನಿಮಗೆ ಈ ಕೇಂದ್ರದ ಬಾಗಿಲು ಯಾವಾಗಲೂ ತೆರೆದಿರುತ್ತದೆ. ನೀವು ಒಪ್ಪುವುದಾದರೆ ತಿಂಗಳಿಗೆ ಒಂದು ಸಾವಿರ ಕೊಡಿಸುತ್ತೇನೆ. ವಾರಕ್ಕೆ ಮೂರು ದಿನ ಕೇಂದ್ರಕ್ಕೆ ಬಂದು ನಡೆಯುತ್ತಿರುವ ಕೆಲಸವನ್ನು ನೋಡಿಕೊಳ್ಳಿ' ಎಂದು ವಿನಂತಿಸಿಕೊಂಡಿದ್ದರು. ಶ್ರೀನಿವಾಸಾಚಾರ್ಯರು ಈ ವಿಷಯವನ್ನು ಅದೇ ದಿನ ಮನೆಯಲ್ಲಿ ತಮ್ಮ ಪತ್ನಿಯವರೊಂದಿಗೆ ಹಂಚಿಕೊಂಡರು. ಅವರ ಆರೋಗ್ಯವನ್ನು ಗಮನದಲ್ಲಿರಿಸಿಕೊಂಡು ಶ್ರೀಮತಿ ಶಾರದಮ್ಮನವರು ಇದಕ್ಕೆ ಸಮ್ಮತಿಸಲಿಲ್ಲ.

ಶಿಲ್ಪಾಕೃತಿಯಾದ ದ್ವಿಲೋಹ ಅರ್ಧನಾರೀಶ್ವರವನ್ನು ಪ್ರಾತಿನಿಧಿಕವಾಗಿ ಇರಿಸಿಕೊಂಡು 21-3-1973ರಂದು ದೆಹಲಿಯಲ್ಲಿ ಜರುಗಿದ ಸ್ವಾತಂತ್ರ್ಯೋತ್ಸವದ ಬೆಳ್ಳಿಹಬ್ಬದ ಕಾರ್ಯಕ್ರಮದಲ್ಲಿ ಭಾರತದ ಪ್ರಧಾನಿಯಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರಿಂದ ಶ್ರೀನಿವಾಸಾಚಾರ್ಯರು ಮೆರಿಟ್ ಅವಾರ್ಡ್‌ನಿಂದ ಪುರಸ್ಕೃತರಾದರು. ಹಿರಿಯ ಮಗ ಸುಜ್ಞಾನಮೂರ್ತಿಯವರೇ ಈ ಪ್ರಶಸ್ತಿಗೂ ಸಾಕ್ಷಿಯಾದರು. ಪ್ರಧಾನಿ ಇಂದಿರಾಗಾಂಧಿಯವರೂ ಸಹ ಶ್ರೀನಿವಾಸಾಚಾರ್ಯರೊಂದಿಗೆ ಮಾತನಾಡುತ್ತಾ ದ್ವಿಲೋಹ ವಿಗ್ರಹವನ್ನು ನೋಡಿ ಪ್ರಶಂಸಿಸಿದರು.

ದೆಹಲಿಯಿಂದ ಹಿಂತಿರುಗಿ ತಮ್ಮ ಆತ್ಮೀಯ ಸ್ನೇಹಿತರನ್ನು ಭೇಟಿ ಮಾಡಿದ ಶ್ರೀನಿವಾಸಾಚಾರ್ಯರು ವಿನ್ಯಾಸ ಕೇಂದ್ರದಲ್ಲಿ ಸಹಾಯಕ ಶಿಲ್ಪಿಯಾಗಿ ಹದಿಮೂರು ವರ್ಷಗಳ ಕಾಲ ತಮ್ಮ ಜೊತೆಯಲ್ಲಿಯೇ ಇದ್ದ ಲೋಹಶಿಲ್ಪಿ ವೀರಭದ್ರಾಚಾರ್ಯರನ್ನು ಮಾತನಾಡಿಸಿ ಸಂತೋಷದಿಂದ ಹಿಂತಿರುಗಿದರು. ವೀರಭದ್ರಾಚಾರ್ಯರು ಶ್ರೀನಿವಾಸಾಚಾರ್ಯರನ್ನು ಗುರುಗಳ ರೂಪದಲ್ಲಿಯೇ ಗೌರವಿಸುತ್ತಾರೆ. ಶ್ರೀನಿವಾಸಾಚಾರ್ಯರು ತಾಳ್ಮೆಯಿಂದ ಹೇಳುತ್ತಿದ್ದ ಎಲ್ಲಾ ಶಿಲ್ಪಜ್ಞಾನವನ್ನು ಸಂಪಾದಿಸಿ ಶಿಲ್ಪಿಗಳ ಕುಲದಲ್ಲಿ ಗೌರವವನ್ನು ಸಂಪಾದಿಸಿದ್ದಾರೆ.

೧೦. ನಿವೃತ್ತಿಯಾದ ನಂತರ

ನಿವೃತ್ತಿಯ ನಂತರ ಎನ್.ಪಿ. ಶ್ರೀನಿವಾಸಾಚಾರ್ಯರು 1973ರಿಂದ ಮಕ್ಕಳು ಮೊಮ್ಮಕ್ಕಳೊಂದಿಗೆ ಸಂಪಂಗಿರಾಮನಗರದ ಮನೆಯಲ್ಲಿ ಸಂತೋಷದಿಂದ ತುಂಬು ಸಂಸಾರದ ಜೀವನವನ್ನು ಅನುಭವಿಸುತ್ತಿದ್ದರು. ಹಾಗೆಯೇ ಮೊದಲಿನಂತೆ ಶಿಲ್ಪಕೆತ್ತನೆಯನ್ನು ಮನೆಯ ಕೆಳಭಾಗದಲ್ಲಿದ್ದ ಅಂಗಡಿಯಲ್ಲಿ ಮುಂದುವರೆಸಿದರು. ಎಲ್ಲರಿಗೂ ಶ್ರೀನಿವಾಸಾಚಾರ್ಯರ ಶಿಲ್ಪರಚನೆಯ ಬಗ್ಗೆ ತಿಳಿದಿದ್ದ ಕಾರಣ ಇವರ ವಯಸ್ಸಿಗಿಂತ ಇವರಲ್ಲಿದ್ದ ಶಿಲ್ಪಜ್ಞಾನವನ್ನು ನಂಬಿ ಮನೆಗೆ ಬಂದು ಶಿಲ್ಪಕೆತ್ತನೆಯ ಕೆಲಸಗಳನ್ನು ಕೊಡುತ್ತಿದ್ದರು. ಬೆಂಗಳೂರಿನಲ್ಲಿರುವ ಶಿವಾಜಿನಗರದ ಧರ್ಮರಾಯನ ದೇವಸ್ಥಾನದ ಗಣಪತಿಗೆ, ಈಶ್ವರ ಲಿಂಗಕ್ಕೆ, ಪಾರ್ವತಿಯಮ್ಮನವರಿಗೆ, ಸುಬ್ರಹಮಣ್ಯೇಶ್ವರ ಮತ್ತು ವಳ್ಳಿಯಮ್ಮ ದೇವರ ಮೂರ್ತಿಗೆ ಇಪ್ಪತ್ತೈದು ಕೆ.ಜಿ. ತೂಕದ ಬೆಳ್ಳಿಯಿಂದ ಕವಚಗಳನ್ನು ಮಾಡಿದರು.

ಮೂರನೇ ಮಗನಾದ ಎನ್.ಎಸ್. ಡಂಕಣೇಶ್ವರ ಸ್ವಾಮಿಯವರು ವಿದೇಶಕ್ಕೆ ವಿಗ್ರಹಗಳನ್ನು ಮಾರಾಟ ಮಾಡಬಹುದು ಎಂದು ಶ್ರೀನಿವಾಸಾಚಾರ್ಯರಿಂದ ಕೊಳಲು ಕೃಷ್ಣ, ವೀಣಾ ಸರಸ್ವತಿ, ಭೂದೇವಿ, ಶ್ರೀದೇವಿಯನ್ನು ಮತ್ತು ಸತ್ಯನಾರಾಯಣ ಸ್ವಾಮಿಯ ವಿಗ್ರಹಗಳನ್ನು ಮಾಡಿಸಿಕೊಂಡರು.

1973ರಿಂದ ಶಿಲ್ಪಗಳ ಬಗ್ಗೆ ಯಾವುದೇ ಚರ್ಚೆಯಿರಲಿ, ಉಪನ್ಯಾಸವಿರಲಿ ಅಥವಾ ಸಭೆಯಿರಲಿ ಶ್ರೀನಿವಾಸಾಚಾರ್ಯರ ಉಪಸ್ಥಿತಿಯನ್ನು ಶಿಲ್ಪಿಗಳ ಸಮೂಹವು ಇಚ್ಛಿಸುತ್ತಿತ್ತು. ಎಲ್ಲರ ಅಪೇಕ್ಷೆಯಂತೆ ಶ್ರೀನಿವಾಸಾಚಾರ್ಯರು ಅವರ ಆಹ್ವಾನವನ್ನು ಸ್ವೀಕರಿಸಿ, ಬೇಕಾದ ವಿಷಯಗಳನ್ನು ಪುಸ್ತಕಗಳಿಂದ ತಿಳಿದು ಸಭೆಗೆ ಉಪನ್ಯಾಸ ನೀಡುವುದಕ್ಕೆ ಹಾಜರಾಗುತ್ತಿದ್ದರು. ಶಿಲ್ಪರಚನೆಯಲ್ಲಿ ಸಾಕಷ್ಟು

ಅನುಭವವಿದ್ದರೂ ಸಹ ಎಲ್ಲರಿಂದ ಬರುತ್ತಿದ್ದ ವಿಚಾರವನ್ನು ಆಲಿಸಿ ತಮ್ಮ ಅನಿಸಿಕೆಯನ್ನು ಸ್ಪಷ್ಟವಾಗಿ ತಿಳಿಸುವುದರಲ್ಲಿ ಹೆಸರುವಾಸಿಯಾಗಿದ್ದರು.

ಅರವತ್ತಕ್ಕಿಂತಲೂ ಹೆಚ್ಚಿನ ವಸಂತಗಳನ್ನು ಶಿಲ್ಪರಚನೆಯಲ್ಲಿ ತೊಡಗಿಸಿಕೊಂಡಿದ್ದ ಕಾರಣ ಆಧುನಿಕ ಕಾರ್ಯದಲ್ಲಿ ನಡೆಯುತ್ತಿದ್ದ ಅಶಾಸ್ತ್ರೀಯ ಶಿಲ್ಪರಚನೆಯನ್ನು ಗಮನಿಸುತ್ತಿದ್ದ ಶ್ರೀನಿವಾಸಾಚಾರ್ಯರಿಗೆ ಆಲ್ ಇಂಡಿಯಾ ಹ್ಯಾಂಡಿ ಕ್ರಾಫ್ಟ್ ಬೋರ್ಡಿನವರು ಏರ್ಪಡಿಸಿದ್ದ ಅಸೋಸಿಯೇಷನ್ ಆಫ್ ಬೆಸ್ಟ್ ಟಾಲೆಂಟ್ ಯೋಜನೆಯ ಸಭೆಗೆ ಶ್ರೀನಿವಾಸಾಚಾರ್ಯರನ್ನು ಹಿತ್ತಾಳೆ ವಿಭಾಗಕ್ಕೆ ನೇಮಿಸಿದರು. ಅಲ್ಲಿನ ಚರ್ಚೆಯಲ್ಲಿ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರವರು ಉಪಸ್ಥಿತರಿದ್ದರು. ಈ ಅವಕಾಶವನ್ನು ಉಪಯೋಗಿಸಿ ಇವರ ಅಂತರಾಳದಲ್ಲಿ ಕಾಡುತ್ತಿದ್ದ ಸಮಸ್ಯೆಯನ್ನು ಸಭೆಯಲ್ಲಿ ಹಂಚಿಕೊಂಡರು.

'ನಮ್ಮ ಭಾರತದಲ್ಲಿ ಶಿಲ್ಪಕಲೆಗೆ ಪ್ರೋತ್ಸಾಹ ಕಡಿಮೆ, ಆದರೆ ವಿದೇಶದಲ್ಲಿ ನಮ್ಮ ಸಾಂಪ್ರದಾಯಿಕ ಶಿಲ್ಪಗಳಿಗೆ ಬೇಡಿಕೆಯಿದೆ. ಆದ್ದರಿಂದ ನಮ್ಮಲ್ಲಿರುವ ಅನೇಕ ಶಿಲ್ಪಿಗಳು ಅವರವರ ಜೀವನೋಪಾಯಕ್ಕೆ ಅನುಕೂಲವಾಗುವಂತೆ ಶಿಲ್ಪಶಾಸ್ತ್ರವನ್ನು ಬದಿಗಿಟ್ಟು, ಅಶಾಸ್ತ್ರೀಯವಾಗಿ ಶಿಲ್ಪರಚನೆ ಮಾಡಿ 'ಸಾಂಪ್ರದಾಯಿಕ ಶಿಲ್ಪಗಳು' ಎನ್ನುವ ಹೆಸರನ್ನು ಇಟ್ಟು ಶತಮಾನಗಳಿಂದ ಬೆಳೆದು ಬಂದ ಸಂಸ್ಕೃತಿಯನ್ನು ಕಡೆಗಣಿಸುತ್ತಿದ್ದಾರೆ. ಹೊರದೇಶಗಳಿಗೆ ಮಾರಾಟ ಮಾಡಬೇಕೆಂದು ಮನಸ್ಸಿಗೆ ತಿಳಿದಂತೆ ಶಿಲ್ಪಗಳನ್ನು ಅಲ್ಪಸಮಯದಲ್ಲಿ ತಯಾರಿಸುತ್ತಿದ್ದಾರೆ. ಆದ್ದರಿಂದ ನಮ್ಮ ಶಿಲ್ಪಸಂಸ್ಕೃತಿಯು ಹಾದಿತಪ್ಪಿದೆ. ಆದರೆ ನಮ್ಮ ಸಂಪ್ರದಾಯಿಕ ಶಿಲ್ಪಗಳು ನಮ್ಮ ರಕ್ತಕಣಗಳಲ್ಲಿ ಬೇರೂರಿದೆ. ಇಂದಲ್ಲಾವಾದರೂ ಸಹ ಮುಂದಿನ ಪೀಳಿಗೆಗಳಲ್ಲಿ ನಮ್ಮ ಸಾಂಪ್ರದಾಯಿಕ ಶಿಲ್ಪಗಳು ಮರು ಜನ್ಮ ತಳಿಯುತ್ತವೆ. ನಮ್ಮ ಸಂಸ್ಕೃತಿಯು ಮತ್ತೆ ಜೀವನದ ಶೈಲಿಯಲ್ಲಿ ತನ್ನದೇ ಆದ ಅಗ್ರಸ್ಥಾನವನ್ನು ಪಡೆಯುತ್ತವೆ. ಅದಕ್ಕೋಸ್ಕರವಾಗಿ ಮುಂದಿನ ಪೀಳಿಗೆಗಳಿಗೆ ಮಾರ್ಗದರ್ಶನವಾಗುವ ಹಾಗೆ ಹೊಯ್ಸಳ, ಚೋಳ, ಪಲ್ಲವ ಹಾಗೂ ಚಾಲುಕ್ಯ ಶೈಲಿಗಳಲ್ಲಿ ವಿಗ್ರಹಗಳನ್ನು ತಯಾರಿಸಿ ನಮ್ಮ ಸಾಂಪ್ರದಾಯಿಕ ಶಿಲ್ಪಗಳ ಪ್ರಾಮುಖ್ಯತೆಯನ್ನು ಪ್ರದರ್ಶನ ಮಾಡಿದರೆ ನಮ್ಮ ಯುವ ಶಿಲ್ಪಿಗಳಿಗೆ ಪ್ರೋತ್ಸಾಹ ದೊರೆತಂತಾಗುತ್ತದೆ' ಎಂದರು.

ಈ ಮಾತಿಗೆ ಕಮಲಾದೇವಿ ಚಟ್ಟೋಪಾಧ್ಯಾಯರವರು ಸಮ್ಮತಿಸಿದರು. ಅಲ್ಲಿಗೆ ಸುಮ್ಮನಾಗದೇ, ಶ್ರೀಮತಿ ಕಮಲಾದೇವಿಯವರು ಲೋಹದಲ್ಲಿ ನಾಲ್ಕು ಶೈಲಿಯ ವಿಗ್ರಹಗಳನ್ನು ತಯಾರಿಸುವುದಕ್ಕೆ ಹಲವು ಕೇಂದ್ರಗಳಿಗೆ ಪತ್ರ ಬರೆದರು.

ದಕ್ಷಿಣ ಭಾರತದಲ್ಲಿದ್ದ ಸಾಂಪ್ರದಾಯಿಕ ಶಿಲ್ಪಗಳ ಶ್ರೀಮಂತಿಕೆಯ

ಜಾಡನ್ನು ಅನುಸರಿಸಿ ಇಲ್ಲಿದ್ದ ಕೆಲವು ಅಧಿಕಾರಿಗಳು ಶಿಲ್ಪಿಗಳನ್ನು ಹುಡುಕುತ್ತಾ ತಂಜಾವೂರು, ಕುಂಭಕೋಣಂ, ಸ್ವಾಮಿ ಮಲೈ, ಮದ್ರಾಸ್‌ಗಳಿಗೆ ಭೇಟಿ ನೀಡಿ ಅಲ್ಲಿದ್ದ ಶಿಲ್ಪಿಗಳನ್ನು ಭೇಟಿಯಾಗಿ ಶ್ರೀನಿವಾಸಾಚಾರ್ಯರ ಮನಸ್ಸಿನಿಂದ ಹೊಮ್ಮಿದ ಕಮಲಾದೇವಿಯವರ ಯೋಜನೆಯನ್ನು ತಿಳಿಸಿದರು. ಆದರೆ ಯಾವ ಶಿಲ್ಪಿಯೂ ಸಾಂಪ್ರದಾಯಕ ಶಿಲ್ಪಗಳನ್ನು ಮಾಡುವುದಕ್ಕೆ ಮುಂದಾಗಲಿಲ್ಲ. ನಾಗಮಂಗಲದಲ್ಲಿನ ಶಿಲ್ಪಿಗಳಾದ ಬ್ರಹ್ಮಶ್ರೀ ಚಿಕ್ಕಮಾಯಾಚಾರ್ಯರು 'ನಮ್ಮ ಪೂರ್ವಿಕರು ಇಂತಹ ಶಿಲ್ಪಗಳನ್ನು ಶ್ಲೋಕ ಶಾಸ್ತ್ರದ ಪ್ರಕಾರವೇ ಮಾಡುತ್ತಿದ್ದರು. ಆದರೆ ಈಗಿನ ಕಾಲದಲ್ಲಿ ಛಾಯಾಚಿತ್ರ ಅಥವ ರೇಖಾಚಿತ್ರಗಳನ್ನು ಕೊಟ್ಟರೆ ಅದರಂತೆ ಮಾಡಬಲ್ಲರು' ಎಂದರು. ನಿರಾಶೆಯಿಂದ ಅಧಿಕಾರಿಗಳು ವಾಪಸ್ ಬೆಂಗಳೂರಿಗೆ ತಲುಪಿ ಶ್ರೀನಿವಾಸಾಚಾರ್ಯರನ್ನು ಸಭೆಗೆ ಕರೆಯಿಸಿ ತಮಗೆ ದೊರೆತ ನಿರಾಶೆಯ ಪ್ರತಿಕ್ರಿಯೆಯನ್ನು ತಿಳಿಸಿದರು.

ನಿರ್ದೇಶಕರಾಗಿದ್ದ ಅಯ್ಯಪ್ಪರವರು ಶ್ರೀನಿವಾಸಾಚಾರ್ಯರಲ್ಲಿದ್ದ ನಿಷ್ಠೆ, ತಿಳುವಳಿಕೆ, ಶಾಸ್ತ್ರದಲ್ಲಿನ ಅನುಭವವನ್ನು ಗಮನಿಸಿ ವಿಗ್ರಹಗಳನ್ನು ನಿರ್ಮಿಸಲು ಶ್ರೀನಿವಾಸಾಚಾರ್ಯರನ್ನೇ ವಿನಂತಿಸಿಕೊಂಡರು. ಶಿಲ್ಪ ರಚನೆಗೆ ಸರ್ಕಾರದಿಂದ ಬೇಕಾಗುವ ಎಲ್ಲಾ ಸಹಾಯವನ್ನೂ ಮಾಡಲು ಒಪ್ಪಿದರು. ಈ ಮಾತನ್ನು ಕೇಳಿದ ಶ್ರೀನಿವಾಸಾಚಾರ್ಯರಿಗೆ ಹಲವು ವರ್ಷಗಳಿಂದ ಕಾಡುತ್ತಿದ್ದ ಸಮಸ್ಯೆಗಳಿಗೆ ಉತ್ತರ ಸಿಗಬಹುದು ಅನ್ನುವ ಮನೋಭಾವನೆಯಿಂದ ಸಾಂಪ್ರದಾಯಕ ಶಿಲ್ಪ ರಚನೆಗೆ ಒಪ್ಪಿದರು. ಇದೇ ಸಮಯದಲ್ಲಿ ಶ್ರೀ ದೇವಸೇನಾ ಸ್ಥಪತಿಗಳನ್ನು ಆಹ್ವಾನಿಸಿ ಚೋಳ ಶೈಲಿಯ ಶಿಲ್ಪಗಳನ್ನು ರಚಿಸಲು ವಿನಂತಿಸಿಕೊಂಡರು.

ಈ ಕಾರ್ಯಕ್ಕಾಗಿ ಹೊಯ್ಸಳ ಶೈಲಿಯ ಬಗ್ಗೆ ಮತ್ತಷ್ಟು ತಿಳಿಯಲು ಹೊಯ್ಸಳ ಶೈಲಿಯ ದೇವಾಲಯಗಳಿಗೆ ಭೇಟಿ ಕೊಟ್ಟರು. ತಮ್ಮ ಐದನೇ ಮಗನಾದ ಶಿಲ್ಪಿ ಜನಾರ್ಧನಮೂರ್ತಿಯವರನ್ನು ಜೊತೆಯಲ್ಲಿಯೇ ಬೇಲೂರು ಹಳೇಬೀಡುಗಳಿಗೆ ಕರೆದುಕೊಂಡು ಹೊರಟರು. ಅಲ್ಲಿ ಯಾಳಿ, ಕೀರ್ತಿಮುಖ, ಸ್ತಂಭ ಬುಟ್ಟಾಳಿಕ, ಮದನಿಕೆ, ಬಂಜಿಕ, ಮಾಹಿನಿ, ಮಕರ ತೋರಣ, ಸಾಲಭಂಜಿಕ, ಮಹಾಭಾರತದ ದೃಶ್ಯಗಳನ್ನು, ಗಣೇಶ, ಸೂರ್ಯ, ಬ್ರಹ್ಮ, ಸರಸ್ವತಿ, ದುರ್ಗಾ, ಹರಿಹರ ಶಿಲಾ ವಿಗ್ರಹಗಳನ್ನು ಹಾಗೂ ವಾಸ್ತು ಶಿಲ್ಪಗಳನ್ನು ನೋಡಿ ದೃಷ್ಟಿಯಲ್ಲಿಯೇ ಸೆರೆ ಹಿಡಿದು ವಿಮಾನ ಹಾಗೂ ಶಿಖರಗಳಿಂದ ಪ್ರೇರೇಪಿತರಾದರು.

ತಂದೆ ಹಾಗೂ ಮಗನ ಮಧ್ಯೆ ಶಿಲ್ಪಗಳ ಬಗ್ಗೆ, ಶೈಲಿಗಳ ಬಗ್ಗೆ, ಲೋಹ ಶಾಸ್ತ್ರದ ಬಗ್ಗೆ, ಆಭರಣಗಳ ಬಗ್ಗೆ ವಿಶೇಷ ರೀತಿಯಲ್ಲಿ ಚರ್ಚೆಗಳಾದವು.

ಕೆಲವೇ ದಿನಗಳಲ್ಲಿ ತ್ವಷ್ಟ ಬ್ರಹ್ಮ, ಹರಿಹರ, ಶಕುನ ಶಾರದೆ, ಕಪಟ ಭೈರವಿಯ ಶ್ಲೋಕಗಳ ಜೊತೆಯಲ್ಲಿ, ರೇಖಾಚಿತ್ರಗಳನ್ನು ರಚಿಸಲು ಶುರು ಮಾಡಿದ ಶ್ರೀನಿವಾಸಾಚಾರ್ಯರು 1981ರ ವೇಳೆಗೆ ನಾಲ್ಕು ಲೋಹಶಿಲ್ಪಗಳನ್ನು ತಯಾರಿಸಿದರು. ಹರಿಹರ ಮತ್ತು ತ್ವಷ್ಟ ಬ್ರಹ್ಮ ವಿಗ್ರಹಗಳು ಚೋಳ ಶೈಲಿಯ ದೇಹಾಕೃತಿಯೊಂದಿಗೆ ಹೊಯ್ಸಳ ಶೈಲಿಯ ಆಭರಣಗಳನ್ನು ಹೊಂದಿಸಿ ಮಾಡಿದ ಶಿಲ್ಪಗಳಾದವು. ಈ ವಿಗ್ರಹಗಳನ್ನು ಪ್ರದರ್ಶಿಸಲು ನಿರ್ಧರಿಸಿ ತಮಿಳುನಾಡಿನಲ್ಲಿರುವ 'ತಮಿಳುನಾಡು ಹ್ಯಾಂಡಿಕ್ರಾಫ್ಟ್ ಡೆವಲಪ್‌ಮೆಂಟ್ ಕಾರ್ಪೋರೇಷನ್'ನಲ್ಲಿ ದೇವಸೇನಾ ಸ್ಥಪತಿಯವರ ಮತ್ತು ಶ್ರೀನಿವಾಸಾಚಾರ್ಯರ ವಿಗ್ರಹಗಳ ಪ್ರದರ್ಶನ ಆಯೋಜನೆಯಾಯಿತು. ನೆರೆದಿದ್ದ ಎಲ್ಲಾ ಅಧಿಕಾರಿಗಳಿಂದ ಶಿಲ್ಪಿಗಳಿಂದ ಗೌರವವನ್ನು ಗಳಿಸಿದರು.

ಶಿಲ್ಪಕಲಾ ಪ್ರತಿಷ್ಠಾನದಿಂದ ಬೆಂಗಳೂರಿನ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ 'ಶಿಲ್ಪೋತ್ಸವ 89'ನ್ನು 16–20ನೇ ಸೆಪ್ಟೆಂಬರ್ 1989ರಲ್ಲಿ ಆಯೋಜಿಸಲಾಯಿತು. ಶಿಲ್ಪಿಗಳ ಸಮೂಹದ ಏಳಿಗೆಗಾಗಿ ದುಡಿಯುತ್ತಿದ್ದ ಕಾರ್ಯದರ್ಶಿಗಳಾದ ಇ.ಆರ್. ವಾದಿರಾಜ್‌ರವರು ಈ ಕಾರ್ಯಕ್ರಮದ ರೂವಾರಿಗಳಾಗಿದ್ದರು. 17ನೇ ತಾರೀಖಿನಂದು ನಡೆದ ಈ ಕಾರ್ಯಕ್ರಮಕ್ಕೆ ಯುಗಶಿಲ್ಪಿ ಶ್ರೀನಿವಾಸಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು. ಅತೀವ ಬೇಸರದಿಂದ ಅಶಾಸ್ತ್ರೀಯ ಶಿಲ್ಪರಚನೆಯ ಬಗ್ಗೆ ಮಾತಾಡಿದ ಈ ಭಾಷಣವು ಕೇಳುಗರನ್ನು ಮೂಕ ವಿಸ್ಮಿತರನ್ನಾಗಿ ಮಾಡಿತು.

ಅಂದು ವೇದಿಕೆಯ ಮೇಲೆ ಉಪಸ್ಥಿತರಿದ್ದ ಗಣ್ಯ ಮಹನೀಯರ ಸನ್ನಿಧಿಯಲ್ಲಿ ಪ್ರೊ. ಎಸ್.ಕೆ. ರಾಮಚಂದ್ರರಾಯರು ಶ್ರೀನಿವಾಸಾಚಾರ್ಯರನ್ನು **'ನಡೆದಾಡುವ ವಿಶ್ವಕರ್ಮ'** ಎಂದು ಸಂಬೋಧಿಸಿ ಗೌರವಿಸಿದರು.

ತಮ್ಮ 75ನೇ ವಯಸ್ಸಿನಲ್ಲಿ ಮತ್ತೊಂದು ಪ್ರಪಂಚದಾದ್ಯಂತ ಹೆಸರುವಾಸಿಯಾಗಲಿದ್ದ ಅದ್ಭುತ ಪಂಚಲೋಹ ಶಿಲ್ಪದ ರಚನೆಯು ಕಾದಿತ್ತು.

೧೧. ಮೈಸೂರು ದಸರಾ - ಉತ್ಸವ ಮೂರ್ತಿ ಚಾಮುಂಡೇಶ್ವರಿಯ ರಚನೆ

ಹುಟ್ಟಿನಿಂದ ಉಳಿಗಳ ಶಬ್ಧದೊಂದಿಗೆ, ಕುಲುಮೆಯ ಹೊಗೆಯೊಂದಿಗೆ, ಮೇಣ ಮತ್ತು ಜೇಡಿಮಣ್ಣಿನ ಅಂಟಿನೊಂದಿಗೆ, ಹಲವು ಬಣ್ಣದ ಲೋಹದೊಂದಿಗೆ, ಹಲವು ಸಂಪ್ರದಾಯ ಶೈಲಿಯೊಂದಿಗೆ ಅದ್ಭುತ ವಿನ್ಯಾಸವನ್ನು ನೋಡುತ್ತಾ, ವಿನ್ಯಾಸದ ನಿಯಮಗಳೊಂದಿಗೆ ತತ್ವಗಳನ್ನು ಕಲಿಯುತ್ತಾ, ಶ್ಲೋಕಗಳ ಉಚ್ಚಾರಣೆಯೊಂದಿಗೆ, ಆಗಮ ಶಾಸ್ತ್ರಗಳೊಂದಿಗೆ, ಶಿಲ್ಪರಚನೆಯ ತಂತ್ರಗಳೊಂದಿಗೆ, ಮರ, ಶಿಲೆ, ಲೋಹಗಳೊಂದಿಗೆ ಮಾತನಾಡುತ್ತಾ, ಸಂಸಾರದ ಸುಖ ದುಃಖಗಳನ್ನು ಅನುಭವಿಸುತ್ತಾ, ಜೀವನದ ಹಾದಿಯಲ್ಲಿ ರೋಚಕವಾದ ತಿರುವುಗಳನ್ನು ಗಮನಿಸುತ್ತಾ, ನಿಸ್ವಾರ್ಥ ಹಾಗೂ ದ್ವಿಲೋಹ ಶಿಲ್ಪದ ಆದ್ಯಪ್ರವರ್ತಕ ಶಿಲ್ಪಿಯಾಗಿ ಶಿಲ್ಪಕಲೆಗೋಸ್ಕರ ಶ್ರೀನಿವಾಸಾಚಾರ್ಯರ ಜೀವನ ಮುಡಿಪಾಗಿದ್ದಿತು.

ದ್ವಿಲೋಹ ಶಿಲ್ಪಗಳ ರಚನೆಯಿಂದ ಶಿಲ್ಪಕಲಾ ಜಗತ್ತಿಗೆ ಹೊಸ ಯುಗವನ್ನು ಪ್ರಾರಂಭಿಸಿದ ಶ್ರೀಸಿವಾಸಾಚಾರ್ಯರು ದೇಶದ ಪ್ರಮುಖ ಶಿಲ್ಪಿಯಾದರು. ಹನ್ನೊಂದನೇ ಶತಮಾನದಿಂದ ಹದಿನಾಲ್ಕನೇ ಶತಮಾನದವರೆಗೂ ಶಿಲಾ ದೇವಾಲಯಗಳ ವಾಸ್ತುಶಿಲ್ಪದಲ್ಲಿ ಪ್ರಮುಖ ಪಾತ್ರವಹಿಸಿದ್ದ ಹೊಯ್ಸಳ ಶೈಲಿಯನ್ನು ಪ್ರಪ್ರಥಮ ಬಾರಿಗೆ ಲೋಹದಲ್ಲಿ ಪ್ರಯೋಗ ಮಾಡಿ ಯಶಸ್ವಿಯಾಗಿ ಶಿಲ್ಪಕಲಾ ಜಗತ್ತಿನಲ್ಲಿ 'ಹೊಯ್ಸಳ ಶೈಲಿಯ ಲೋಹಶಿಲ್ಪಿ'ಯೆಂದು ತಮ್ಮ ಹೆಸರನ್ನು ಅಮರವಾಗಿಸಿಕೊಂಡರು. ಜೀವನವಿಡೀ ನೆಲದಲ್ಲಿ ಕೂತು ಮಂಡಿಯನ್ನು

ಮಡಿಚಿ ಉಳಿಗಳಿಂದ ರಚಿಸಿದ ಶಿಲ್ಪ ಕೆತ್ತನೆಗಳಿಂದ ಬಾಗಿಲುವಾಡ, ಕವಚ, ಆನೆಗಳಿಗೆ ಬೇಕಾದ ಆಭರಣ, ಧ್ವಜ ಸ್ತಂಭ, ಪೂಜಾಸಾಮಗ್ರಿಗಳನ್ನು ತಯಾರಿಸಿದರು.

'ಅನುಭವ'ವೆಂಬ ಭಂಡಾರವನ್ನು ಹೊತ್ತಿದ್ದ ಶ್ರೀನಿವಾಸಾಚಾರ್ಯರ ವೃದ್ಧಾಪ್ಯದ ದಿನಗಳಲ್ಲಿ ಮೈಸೂರು ದಸರಾದ ಜಂಬೂ ಸವಾರಿಯಲ್ಲಿಡಲು ಚಾಮುಂಡೇಶ್ವರಿ ಪಂಚಲೋಹದ ಉತ್ಸವಮೂರ್ತಿಯನ್ನು ನಿರ್ಮಿಸಲು ಕರೆ ಬಂದಿತು. ವೃದ್ಧಾಪ್ಯವು ದೈವಭಕ್ತಿಯಿಂದ ಉಲ್ಲಾಸಗೊಂಡು ಶಿಲ್ಪಿ ಶ್ರೀನಿವಾಸಾಚಾರ್ಯರಲ್ಲಿದ್ದ ನಿಶ್ಶಕ್ತಿಯು ಮಾಯವಾಯಿತು. ಮಗ ಶಿಲ್ಪಿ ಜನಾರ್ಧನ ಮೂರ್ತಿಯವರು ಸಹ ಯಾವುದೇ ಸ್ಥಿತಿಯಲ್ಲಿಯೂ ತಂದೆಯಿಂದ ದೂರ ಸರಿಯದೆ ತಕ್ಕ ಬೆಂಬಲವನ್ನು ನೀಡುತ್ತಾ ಚಾಮುಂಡೇಶ್ವರಿಯ ಉತ್ಸವಮೂರ್ತಿಯನ್ನು ಜೊತೆಗೂಡಿ ಪ್ರಾರಂಭಿಸಿದರು.

ಸಾಮಾನ್ಯವಾಗಿ ಉತ್ಸವಮೂರ್ತಿಗಳನ್ನು ಲೋಹದಲ್ಲಿ ತಯಾರಿಸುತ್ತಾರೆ ಹಾಗೂ ಅಂದಾಜಿಗೆ ನಾಲ್ಕು ಜನ ಹೊರುವಂಥಹ ಭಾರವನ್ನು ನಿಗದಿಪಡಿಸುತ್ತಾರೆ. ಮುಖ್ಯವಾಗಿ ಕೆಲವು ಆಯುಧಗಳನ್ನು ಪೀಠ, ಪ್ರಭಾವಳಿಗಳನ್ನು ಬೇರೆ ಬೇರೆ ಎರಕ ಹೊಯ್ದು ಉತ್ಸವದ ವೇಳೆಗೆ ಎಲ್ಲಾ ಭಾಗಗಳನ್ನು ಒಂದುಗೂಡಿಸುವಂಥಹ ತಾಂತ್ರಿಕತೆಯನ್ನು ಅಳವಡಿಸಿಕೊಂಡು ಉಪಾಯವಾಗಿ ತಯಾರಿಸುತ್ತಾರೆ. ಇದರಲ್ಲಿ ಸಮತೋಲನವೂ ಮುಖ್ಯವಾದ ಅಂಶವಾಗಿರುತ್ತದೆ.

ಶಾಸ್ತ್ರದ ಪ್ರಕಾರ ಪಂಚಲೋಹದ ವಿಗ್ರಹಗಳು ಬೇರೆ ಲೋಹಗಳಿಗಿಂತಲೂ ಶ್ರೇಷ್ಠವಾದ್ದರಿಂದ ಪಂಚಲೋಹದಲ್ಲಿಯೇ ಚಾಮುಂಡೇಶ್ವರಿ ತಾಯಿಯ ವಿಗ್ರಹವನ್ನು ತಯಾರಿಸಲು ನಿರ್ಧರಿಸಿದರು. ಈ ಕೆಳಗಿನ ಹಲವು ಸೂಕ್ಷ್ಮ ವಿಚಾರಗಳನ್ನು ಗಮನಿಸಿದರು.

1. ಶಾಸ್ತ್ರಬದ್ಧವಾಗಿ ತಯಾರಿಸಬೇಕಾಗಿತ್ತು.
2. ಉತ್ಸವ ಮೂರ್ತಿಯು ಆನೆಯ ಮೇಲೆ ಏರುವ 750 ಕೆ.ಜಿ.ಯ ಚಿನ್ನದ 'ಹೌಡ' ಅಂಬಾರಿಯ ಒಳಗೆ ಇಡುವಷ್ಟು ವಿಸ್ತೀರ್ಣವನ್ನು ಹೊಂದಿದ್ದಾಗಿದ್ದು ನಿರ್ದಿಷ್ಟ ಭಾರವನ್ನು ಮೀರಬಾರದಾಗಿತ್ತು. ಅಂದರೆ ಆನೆಯೂ ಚಿನ್ನದ ಅಂಬಾರಿಯ ಜೊತೆ ಉತ್ಸವಮೂರ್ತಿಯನ್ನು ಹೊತ್ತು ನಡೆಯುವಂತಹ ಭಾರವನ್ನು ನಿಗದಿಪಡಿಸಬೇಕಾಗಿತ್ತು. ಆದ್ದರಿಂದ ಟೊಳ್ಳು ತಂತ್ರವನ್ನು ಅನುಸರಿಸಬೇಕೆಂದು ನಿರ್ಧರಿಸಿದರು.
3. ಆನೆಯ ಚಲನದಲ್ಲಿಯೂ ಸಹ ಮೂರ್ತಿಯ ಸಮತೋಲನ ಕಾಪಾಡುವಂತಾಗಿರಬೇಕು.

4. ಅಂಬಾರಿಯೊಳಗೆ ಇಡುವುದಕ್ಕೆ ಯಾವುದೇ ತೊಂದರೆಯಾಗದ ರೀತಿಯಲ್ಲಿ ಹಾಗೂ ಯಾವುದೇ ಸಮಯದಲ್ಲಿ ಉತ್ಸವ ಮೂರ್ತಿಯೂ ಅಂಬಾರಿಯಿಂದ ಹೊರ ಬೀಳದ ಹಾಗೆ ಪೀಠದಲ್ಲಿ ಭದ್ರವಾಗಿ ಕೂರಿಸುವ ತಂತ್ರವನ್ನು ಉಪಯೋಗಿಸುವುದು.

5. ಮೂರ್ತಿಯ ಹಲವು ಭಾಗಗಳನ್ನು ಬೇರೆ ಬೇರೆ ಮಾಡಿ, ಉತ್ಸವದ ವೇಳೆಗೆ ಎಲ್ಲಾ ಭಾಗಗಳನ್ನು ಜೊತೆಗೂಡಿಸಿದರೆ ಪೂರ್ತಿಯಾದ ಚಾಮುಂಡೇಶ್ವರಿ ಉತ್ಸವ ಮೂರ್ತಿಯು ತಯಾರಾಗುವಂತೆ ಮಾಡಬೇಕಾಗಿತ್ತು.

6. ಮೆರವಣಿಗೆ ನೋಡುಗರಿಗೆ ದೇವಿ ಚಾಮುಂಡೇಶ್ವರಿಯ ಸುಂದರವಾದ ದಿವ್ಯ ದರ್ಶನವಾಗುವಂತೆ ಮಾಡಿ ಚಾಮುಂಡೇಶ್ವರಿ ಹಾಗೂ ಮಹಿಷಾಸುರನ ಮರ್ಧನದ ಅಂತಿಮಗಳಿಗೆಯನ್ನು ವ್ಯಕ್ತಪಡಿಸಿ ಚಾಮುಂಡೇಶ್ವರಿಯ ಎಂಟು ಕೈಗಳಲ್ಲಿ ಏಳು ರೀತಿಯ ಶಸ್ತ್ರಗಳನ್ನು, ಚಾಮುಂಡೇಶ್ವರಿಯ ವಾಹನದ ಜೊತೆ ನಿರ್ಮಿಸುವಂತೆ ನಿರ್ಧರಿಸಿದರು.

ಮೊದಲಿಗೆ ರೇಖಾಚಿತ್ರವನ್ನು ಬರೆದು ನಂತರ ಮೇಣದ ಆಕೃತಿಯನ್ನು ತಯಾರಿಸಿ ಸೂಕ್ತವಾದ ಮುಹೂರ್ತವನ್ನು ಗುರುತಿಸಿದರು. ಸರಿಯಾದ ಸಮಯದಲ್ಲಿ ಪಂಚಲೋಹಗಳನ್ನು ಕರಗಿಸಿ ಎರಕವನ್ನು ಹೊಯ್ದು ನಂತರ ವಿಗ್ರಹಕ್ಕೆ ಮತ್ತಷ್ಟು ಹೊಳಪನ್ನು ನೀಡಿದರು. ಆಭರಣಗಳ ವಿನ್ಯಾಸವನ್ನು ಕುಸುರಿ ಕೆಲಸದಿಂದ ಸುಂದರವಾಗಿ ಕಾಣುವಂತೆ ಮಾಡಿ ಸಿಂಹ ಮತ್ತು ಮಹಿಷನ ಜೊತೆಯಲ್ಲಿ ದೇವಿ ಚಾಮುಂಡೇಶ್ವರಿಯ ಉತ್ಸವಮೂರ್ತಿಯನ್ನು ತಯಾರಿಸಿದರು. ಈ ಲೋಹಶಿಲ್ಪವು ಶ್ರೀನಿವಾಸಾಚಾರ್ಯರ ಜೀವನದಲ್ಲಿ ರಚಿಸಿದ ಕೊನೆಯ ಲೋಹ ಶಿಲ್ಪವಾಯಿತು. ಚಾಮುಂಡೇಶ್ವರಿಯ ಶಿಲ್ಪರಚನೆಯ ಅವಧಿಯಲ್ಲಿ ಮಗ ಜನಾರ್ಧನ ಮೂರ್ತಿಯವರಿಗೆ ತಂದೆ ಶ್ರೀನಿವಾಸಾಚಾರ್ಯರು ಜೀವನದ ಹಾದಿಯಲ್ಲಿ ಎದುರಾದ ಸವಾಲುಗಳನ್ನು ತಿಳಿಸುತ್ತಾ ಜೀವನದಲ್ಲಿ ಗಳಿಸಿದ ಎಲ್ಲಾ ಶಿಲ್ಪಜ್ಞಾನವನ್ನು ಮಗನಿಗೆ ಧಾರೆ ಎರೆದರು..

ಒಂದೆರಡು ವರ್ಷಗಳಲ್ಲಿ ತಂದೆ ಹಾಗೂ ಮಗ ಜೊತೆಯಾಗಿ ತಯಾರಿಸಿದ ಚಾಮುಂಡೇಶ್ವರಿಯ ಉತ್ಸವ ಮೂರ್ತಿಯು 1988ರಲ್ಲಿ ಸಾವಿರಾರು ದೀಪಗಳಿಂದ ವಿಜೃಂಭಿಸುವ ಮೈಸೂರು ಅರಮನೆಯ ಒಂದು ಮುಖ್ಯವಾದ ಅಂಗವಾಗಿ ಸೇರ್ಪಡೆಯಾಯಿತು. ಅಂದಿನಿಂದ ಪ್ರತಿವರ್ಷ ದೇವಿ ಚಾಮುಂಡೇಶ್ವರಿಯ ವೈಭವವು ಪ್ರಪಂಚದಾದ್ಯಂತ ಪ್ರಖ್ಯಾತಿ ಗಳಿಸಿತು. ಚಕ್ರ, ಶಂಕು, ಖಡ್ಗ, ಬಿಲ್ಲು, ಬಾಣ, ಗುರಾಣಿಯನ್ನು ಹಿಡಿದು ಬಲಗೈಯಲ್ಲಿ

ಖಡ್ಗವನ್ನು ಹಿಡಿದು ಮಹಿಷಾಸುರನ ಎದೆಯ ಮೇಲೆ ತ್ರಿಶೂಲವನ್ನು ಗುರಿಯಿಟ್ಟು ಮುಗುಳ್ನಗೆಯನ್ನು ಸೂಸುತ್ತಾ, ಸಿಂಹದ ಮುಂದೆ ಮಹಿಷದ ತಲೆಯನ್ನು ವಿಚ್ಛೇದಿಸಿ ನಿಂತಿದ್ದು, ಪೀಠದಲ್ಲಿ ಹಾಗೂ ಪ್ರಭಾವಳಿಯಲ್ಲಿನ ಬೇಲಿನ ವಿನ್ಯಾಸದೊಂದಿಗಿನ ಅದ್ಭುತ ಕೀರ್ತಿ ಮುಖವುಳ್ಳ ಚಾಮುಂಡೇಶ್ವರಿಯ ಉತ್ಸವಮೂರ್ತಿಯನ್ನು ನೋಡಿದವರಿಗೆ ಭಕ್ತಿ ಭಾವವು ತಾನಾಗಿಯೇ ಉಕ್ಕಿ ಬರುತ್ತದೆ. ಈ ರಚನೆಯು ನಾಡಿನ ಹಲವು ಶಿಲ್ಪಿಗಳಿಂದ ಸಹೃದಯರಿಂದ ಹೆಗ್ಗಳಿಕೆಗೆ ಪಾತ್ರವಾಯಿತು.

ವಯಸ್ಸಿಗನುಗುಣವಾಗಿ ಕ್ರಮೇಣ ಶ್ರೀನಿವಾಸಾಚಾರ್ಯರ ದೇಹ ಶಕ್ತಿ ಕಡಿಮೆಯಾಗಿತ್ತು. ಸಮಯ ಸಿಕ್ಕಾಗಲೆಲ್ಲಾ ಪತ್ನಿ ಶಾರದಮ್ಮನವರೊಂದಿಗೆ ಮಾತನಾಡುತ್ತಾ ಜೀವನದ ಮಹತ್ತರವಾದ ಹಾಗೂ ಅದ್ಭುತವಾದ ಅನುಭವದಿಂದ ಕೂಡಿದ ದಿನಗಳನ್ನು ನೆನೆಯುತ್ತಾ ಮನಸ್ಸಿನ ಅಂತರಾಳಕ್ಕೆ ಇಳಿಯುತ್ತಿದ್ದರು. ಮಗನ ಜೊತೆಯಲ್ಲಿ ಮಾಡಿದ ಚಾಮುಂಡೇಶ್ವರಿಯ ಉತ್ಸವಮೂರ್ತಿಯ ನಂತರ ಬೆನ್ನೆಲುಬಲ್ಲಿ ಶಕ್ತಿ ಕಡಿಮೆಯಾದರೂ ಮನಸ್ಸು ಹಾಗೂ ಕೈಬೆರಳುಗಳ ಸಂಗಮ ಆಗ್ಗಾಗ್ಗೆ ಆಗುತ್ತಿತ್ತು. ಮೇಣದಿಂದ ಕೆಲವು ವಿಗ್ರಹಗಳನ್ನು ಮಾಡಿದರು. ಯಾವುದೇ ಬಿಳಿಯ ಹಾಳೆ ಅಥವಾ ಮದುವೆಯ ಪತ್ರಿಕೆಗಳು ಸಿಕ್ಕಲ್ಲಿ ಖಾಲಿಯಾಗಿದ್ದ ಜಾಗದಲ್ಲಿ ತಮ್ಮಲ್ಲಿದ್ದ ಚಿತ್ರಗಾರನನ್ನು ಜಾಗೃತಗೊಳಿಸಿ ಹಲವು ರೇಖಾಚಿತ್ರಗಳನ್ನು ರಚಿಸಿದರು.

ಹಾಳೆಗಳ ಮೇಲೆ ಕೀರ್ತಿಮುಖದ ವಿನ್ಯಾಸ, ಕಿರೀಟಗಳ ವಿನ್ಯಾಸ, ಭಂಗಿಗಳು, ಪೂಜಾ ಸಾಮಗ್ರಿಗಳನ್ನು ರೇಖಾಚಿತ್ರಗಳ ಮೂಲಕ ಸೆರೆಹಿಡಿಯುತ್ತಿದ್ದರು. ಶಾರದಮ್ಮನವರು ವೃದ್ಧಾಪ್ಯದಲ್ಲಿಯೂ ಸಹ ಶ್ರೀನಿವಾಸಾಚಾರ್ಯರ ಜೀವನದ ಸಂಗತಿಗಳನ್ನು, ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಲೇಖನಗಳನ್ನು, ದೂರದರ್ಶನದಲ್ಲಿ ಬರುತ್ತಿದ್ದ ಸಂದರ್ಶನಗಳನ್ನು, ಸನ್ಮಾನದಲ್ಲಿ ದೊರೆತ ಅಭಿನಂದನಾ ಪತ್ರಗಳನ್ನು, ಪ್ರಶಂಸೆಯ ಪತ್ರಗಳನ್ನು, ರೇಖಾಚಿತ್ರಗಳನ್ನು, ಛಾಯಾಚಿತ್ರಗಳನ್ನು ಸಂಗ್ರಹಿಸುತ್ತಿದ್ದರು. 1989ರ ನಂತರ ಶ್ರೀನಿವಾಸಾಚಾರ್ಯರ ಆರೋಗ್ಯವು ಕುಂಠಿತಗೊಂಡಿತು. ಅವರ ಹನ್ನೆರಡು ಮಕ್ಕಳೂ ತಂದೆ ತಾಯಿಗಳಿಗೆ ಕೊಡಬೇಕಿದ್ದ ಗೌರವವನ್ನು ಸದಾ ನೀಡುತ್ತಾ ಸಂತೋಷದಿಂದಿಡುತ್ತಿದ್ದರು. ಎಲ್ಲಾ ಮಕ್ಕಳ ಮದುವೆಯನ್ನು ಮಾಡುತ್ತಾ ಐದು ಹೆಣ್ಣುಮಕ್ಕಳಿಗೆ ಧಾರೆ ಎರೆದು ಜೀವನದ ಪವಿತ್ರ ಕಾರ್ಯವನ್ನು ಜೊತೆಯಾಗಿ ನಿಭಾಯಿಸಿದರು. 1992ರಲ್ಲಿ ಅತೀವ ನಿಶ್ಶಕ್ತಿ ಹಾಗೂ ಅನಾರೋಗ್ಯದ ಕಾರಣ ಆಸ್ಪತ್ರೆಯನ್ನು ಸೇರಿದರು. ಅಲ್ಲಿಗೆ ಬಹುದಿನಗಳ ಸ್ನೇಹಿತರಾದ ಮರಿಶಾಮಚಾರ್ಯರು ಶ್ರೀನಿವಾಸಾಚಾರ್ಯರ ಆರೋಗ್ಯವನ್ನು ವಿಚಾರಿಸಲು ಬಂದಿದ್ದರು. ಆಗ ಶಾರದಮ್ಮನವರು ಅವರ

ಆಸೆಯನ್ನು ವ್ಯಕ್ತಪಡಿಸುತ್ತಾ 'ಈಗಾಗಲೇ ಘೋಷಣೆ ಮಾಡಿರುವ ಲಲಿತಕಲಾ ಅಕಾಡೆಮಿಯ ರಾಜ್ಯ ಗೌರವ ಪ್ರಶಸ್ತಿಯನ್ನು ಇವರೇ (ಶ್ರೀನಿವಾಸಾಚಾರ್ಯರೇ) ಸ್ವೀಕರಿಸಿದರೆ ಅವರಿಗೆ ಬಹಳ ಸಂತೋಷವಾಗುವುದು' ಎಂದು ದುಃಖದಿಂದ ನುಡಿದರು. ಇದಕ್ಕೆ ಪ್ರತಿಕ್ರಿಯೆಯಾಗಿ 27-10-1992ರಂದು ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿದ್ದ ವಿ.ಆರ್. ತಿಪ್ಪೇಸ್ವಾಮಿಯವರು ಹಾಗೂ ರಿಜಿಸ್ಟ್ರಾರ್ ಆಗಿದ್ದ ಮುರಳಿಯವರು, ಮುಳಹಳ್ಳಿ ಸೂರಿಯವರು ಮತ್ತು ಮರಿಶಾಮಚಾರ್ಯರು ಕೃಷ್ಣ ನರ್ಸಿಂಗ್ ಹೋಂಗೆ ಬಂದು ನಿಶ್ಯಕ್ತರಾಗಿ ಹಾಸಿಗೆಯಲ್ಲಿ ಮಲಗಿದ್ದ ಶ್ರೀನಿವಾಸಾಚಾರ್ಯರಿಗೆ ಗಂಧದ ಹಾರವನ್ನು ತೊಡಿಸಿ, ಪತ್ನಿ ಹಾಗೂ ಕುಟಂಬದ ಸಮ್ಮುಖದಲ್ಲಿ ಗೌರವ ಪ್ರಶಸ್ತಿಯನ್ನು ನೀಡಿದರು. ಶ್ರೀನಿವಾಸಾಚಾರ್ಯರೂ ಸಹ ಬಹಳ ನಮ್ರತೆಯಿಂದ ಸಂತೋಷದಿಂದ ಪ್ರಶಸ್ತಿಯನ್ನು ಸ್ವೀಕರಿಸಿದರು. ಶಾರದಮ್ಮನವರ ಮನಸ್ಸಿನಲ್ಲಿ ಈ ಅನುಭವವು ಮನೆ ಮಾಡಿತು. 2-11-1992ರಂದು ಮಧ್ಯಾಹ್ನ 2.20 ನಿಮಿಷಕ್ಕೆ ವರಶಿಲ್ಪಿಯು ಕೊನೆಯುಸಿರೆಳೆದು ದೇವರ ಸನ್ನಿಧಿಯ ಕಡೆ ಪ್ರಯಾಣ ಬೆಳೆಸಿದರು.

ಬಾಲ್ಯದಲ್ಲಿ ಶಿಲಾವಿಗ್ರಹ ವಿಶ್ವಕರ್ಮ ಶಿಲ್ಪರಚನೆಯಿಂದ ಶುರುವಾಗಿ ಹಲವು ಹಂತಗಳನ್ನು ತಲುಪಿ, ಕೊನೆಯದಾಗಿ ಸೌಮ್ಯ ರೂಪದ ಚಾಮುಂಡೇಶ್ವರಿಯ ಉತ್ಸವಮೂರ್ತಿಯೊಂದಿಗೆ ಶಿಲ್ಪ ಪ್ರಪಂಚಕ್ಕೆ ನೀಡಿದ ಕೊಡುಗೆಗಳು ಸಾವಿರಾರು. ಅವರ ರಚನೆಯಲ್ಲಿ ಮೈತುಂಬಿದ ಕಲಾಕೃತಿಗಳು ಸಾವಿರಾರು ಶಿಲ್ಪಿಗಳಿಗೆ, ತತ್ವಜ್ಞಾನಿಗಳಿಗೆ ಹಾಗೂ ನೋಡುಗರಿಗೆ ಸಂತೋಷವನ್ನು ಕೊಡುವಂತಾಯಿತು. ಲೋಹಶಿಲ್ಪದ ಅಧ್ಯಾಯಕ್ಕೆ ಹೊಯ್ಸಳ ಶೈಲಿ ಹಾಗೂ ದ್ವಿಲೋಹ ಶಿಲ್ಪದ ಹೊಸ ಅಧ್ಯಾಯ ಪ್ರಾರಂಭವಾಯಿತು.

೧೨. ದ್ವಿಲೋಹಶಿಲ್ಪ ರಚನಾ ಆದ್ಯಪ್ರವರ್ತಕರ ಮರುಜನ್ಮ

ಜೀವನದ ಹಾದಿಯಲ್ಲಿ ಒಂದು ಹೆಣ್ಣುಮಗಳ ಪಾತ್ರವಹಿಸಿ, 8ನೇ ತರಗತಿಯವರೆಗೆ ಶಾಲೆಗೆ ಹೋಗಿ, ಹನ್ನೆರಡನೇ ವಯಸ್ಸಿಗೆ ಶ್ರೀನಿವಾಸಾಚಾರ್ಯರಿಂದ ಮಾಂಗಲ್ಯವನ್ನು ಧರಿಸಿ ಮುತ್ತೈದೆಯಾಗಿ ಹನ್ನೆರಡು ಮಕ್ಕಳಿಗೆ ಜನ್ಮ ನೀಡಿ, ಹಿರಿಯರಿಂದ ಆಶೀರ್ವಾದ ಪಡೆದು, ಹಿರಿಯರಿಂದ ಸೂಕ್ತ ಸಲಹೆಗಳನ್ನು ತೆಗೆದುಕೊಂಡು, ಎಲ್ಲರಿಗೂ ಮದುವೆ ಮಾಡಿ ಮೊಮ್ಮಕ್ಕಳಿಗೆ ನಾಮಕರಣ ಮಾಡಿ, ಕಿರಿಯರಿಗೆ ಮಾರ್ಗದರ್ಶನ ನೀಡಿ, ತನ್ನ ಜೀವನದ ಸಾರಥಿ ಶ್ರೀನಿವಾಸಾಚಾರ್ಯರಲ್ಲಿ ಪ್ರೀತಿ, ಗೌರವವನ್ನು ತನ್ನದೆಯ ಮೂಲೆಯಲ್ಲಿ ಬಚ್ಚಿಟ್ಟಿದ್ದ ಶಾರದಮ್ಮನವರ ಪ್ರಬಲವಾದ ಭಾವನೆಗಳು ಹೊರಹೊಮ್ಮಲು ಶುರುವಾಗಿದ್ದು ಶ್ರೀನಿವಾಸಾಚಾರ್ಯರ ನಿಧನದ ನಂತರ.

ಕುಟುಂಬದ ಏಳಿಗೆಗೆ ಸತತವಾಗಿ ದುಡಿಯುತ್ತಿದ್ದ ಶಾರದಮ್ಮನವರು 1992ರ ನಂತರ ಶ್ರೀನಿವಾಸಾಚಾರ್ಯರ ಮಾತುಗಳನ್ನು ನೆನಪಿಸಿಕೊಳ್ಳಲಾರಂಭಿಸಿದರು. ಹಾಗಾಗಿ ಶಾರದಮ್ಮನವರು ಎಲ್ಲಾ ಮಕ್ಕಳ ಮನೆಯಲ್ಲಿ ಕೆಲವು ತಿಂಗಳುಗಳಿದ್ದು ಎಲ್ಲರ ಸುಖ ದುಃಖಗಳಲ್ಲಿ ಸ್ಪಂದಿಸಿ 1996ರಲ್ಲಿ ಶ್ರೀನಿವಾಸಾಚಾರ್ಯರ ಜೀವನದ ಪ್ರಯಾಣವನ್ನು ನೆನಪಿಸಿಕೊಂಡು ಶ್ರೀನಿವಾಸಾಚಾರ್ಯರ ಜೀವನ ಚರಿತ್ರೆಯನ್ನು ಬರೆದರು. ಸ್ವಂತ ಅಣ್ಣನವರಾದ ನಾ.ಬಾ. ಚಂದ್ರಶೇಖರಚಾರ್ಯರಿಗೆ ಈ ಜೀವನ ಚರಿತ್ರೆಯನ್ನು ಓದಲು ತಲುಪಿಸಿದರು. ಇದನ್ನು ಓದಿದ ಅಣ್ಣನಿಗೆ ತಂಗಿ ಶಾರದಮ್ಮನವರಲ್ಲಿದ್ದ ಸಾಹಿತ್ಯದ ಜ್ಞಾನವನ್ನು ತಿಳಿದು ಸ್ಫೂರ್ತಿಯಿಂದ

ಶಿಲ್ಪಿಯ ಜೀವನವನ್ನು ಆಧರಿಸಿದ ಅರ್ಥಪೂರ್ಣವಾದ ಕೃತಿಯೊಂದನ್ನು ರಚಿಸಿದರು. ಶಾರದಮ್ಮನವರು ಮತ್ತೊಂದು ಬಾರಿ ಶ್ರೀನಿವಾಸಾಚಾರ್ಯರ ಜೀವನ ಚರಿತ್ರೆಯನ್ನು 1997ರಲ್ಲಿ ಸುಮಾರು ಹದಿನೈದು ಪುಟಗಳಲ್ಲಿ ಸಣ್ಣ ಕನ್ನಡ ಅಕ್ಷರಗಳಲ್ಲಿ ಬರೆದರು. 1997ರ ಕೃತಿಯಲ್ಲಿ ತಮ್ಮ ಭಾವನೆಯನ್ನು ವ್ಯಕ್ತಪಡಿಸುತ್ತಾ ಶ್ರೀನಿವಾಸಾಚಾರ್ಯರ ಜೀವನದ ಹಂತಗಳನ್ನು ಸೇರಿಸಿ ಬರೆಯುವುದರ ಮೂಲಕ ದ್ವಿಲೋಹಶಿಲ್ಪ ರಚನಾ ಆದ್ಯಪ್ರವರ್ತಕರಿಗೆ ಮರುಜನ್ಮವನ್ನು ನೀಡಿದರು.

ಶಾರದಮ್ಮನವರಿಗೆ ಬಳಗ ದೊಡ್ಡದಾದ್ದರಿಂದ ಸಂಬಂಧಿಕರ ಕಾರ್ಯಕ್ರಮಕ್ಕೆ ಹೋಗಿ ಹಿರಿಯರನ್ನು ನೋಡಿ ಅವರ ಆರೋಗ್ಯವನ್ನು ವಿಚಾರಿಸಿ ಎಲ್ಲರಲ್ಲಿಯೂ ಮಾತನಾಡುತ್ತಿದ್ದರು. ಶ್ರೀನಿವಾಸಾಚಾರ್ಯರ ಜೀವನ ಚರಿತ್ರೆಯನ್ನು ಕೆಲವರಿಗೆ ತೋರಿಸಿ ಅದನ್ನು ಪುಸ್ತಕ ರೂಪದಲ್ಲಿ ಪ್ರಕಟ ಮಾಡುವ ಬಗ್ಗೆ ತಿಳಿದುಕೊಳ್ಳುತ್ತಿದ್ದರು. ಹಲವು ವರುಷಗಳು ಕಳೆದು ಹೋದರೂ ಯಾರೂ ಶಾರದಮ್ಮನವರ ಆಸೆಯನ್ನು ಪೂರೈಸುವುದಕ್ಕೆ ಮುಂದಾಗಲಿಲ್ಲ. ಕೊನೆಗೆ ಮೊಮ್ಮಗ ನಾಗಾರ್ಜುನ್‌ನಿಂದ ಮುಖ್ಯಮಂತ್ರಿಗಳಿಗೆ ಪತ್ರ ಬರೆಸಿ ಶಿಲ್ಪಿ ಶ್ರೀನಿವಾಸಾಚಾರ್ಯರ ಜೀವನ ಚರಿತ್ರೆಯನ್ನು ಪುಸ್ತಕ ರೂಪದಲ್ಲಿ ಬಿಡುಗಡೆ ಮಾಡಿಸುವುದಕ್ಕಾಗಿ ವಿನಂತಿಸಿಕೊಂಡಿದ್ದರು.

ತಮ್ಮ ಪತಿ ಶ್ರೀನಿವಾಸಾಚಾರ್ಯರ ಜೀವನಶೈಲಿಯ ಮೇಲೆ ಇದ್ದ ಗೌರವದಿಂದ ಅವರು ಗಳಿಸಿದ ಜ್ಞಾನವನ್ನು ಮುಂದಿನ ಪೀಳಿಗೆಯ ಯುವಶಿಲ್ಪಿಗಳು ಉಪಯೋಗಿಸಿ ಭಾರತದ ಸಾಂಪ್ರದಾಯಿಕ ಶಿಲ್ಪವನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುವ ಅವರ ಶ್ರಮಕ್ಕೆ ಶೀಘ್ರದಲ್ಲಿ ಪ್ರತಿಫಲ ಸಿಗಲಿಲ್ಲ.

ಶಾರದಮ್ಮನವರ ಪರವಾಗಿ ಮುಖ್ಯಮಂತ್ರಿಗಳಿಗೆ ನಾಗಾರ್ಜುನ್ ಬರೆದಿದ್ದ ಪತ್ರಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಶ್ರೀ ಎಸ್.ಎಂ. ಕೃಷ್ಣರವರು ಸ್ಪಂದಿಸಿದ ಪತ್ರ ಮನೆ ತಲುಪುವುದರೊಳಗಾಗಿ ಶಾರದಮ್ಮನವರು 2002ರಲ್ಲಿ ದೈವಾಧೀನರಾಗಿದ್ದರು.

ಸರ್ಕಾರವು ಶ್ರೀನಿವಾಸಾಚಾರ್ಯರ ಜೀವನ ಚರಿತ್ರೆಯನ್ನು ಪುಸ್ತಕ ರೂಪದಲ್ಲಿ ಬಿಡುಗಡೆ ಮಾಡಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸೂಚಿಸಿದ್ದ ಕಾರಣ ಶಿಲ್ಪಕಲಾ ಅಕಾಡೆಮಿಯಲ್ಲಿ ರಿಜಿಸ್ಟ್ರಾರ್ ಆಗಿದ್ದ ಮರಿಶಾಮಾಚಾರ್ಯರು ಶ್ರೀನಿವಾಸಾಚಾರ್ಯರ ಕುಟುಂಬವನ್ನು ಸಂಪರ್ಕಿಸಿ ರೇಖಾಚಿತ್ರ, ಛಾಯಾಚಿತ್ರ ಲೇಖನಗಳನ್ನು ಸಂಗ್ರಹಿಸಿ, ಜೊತೆ ಮಾಡಿ ಒಂದು ಅದ್ಭುತ ಪುಸ್ತಿಕೆಯನ್ನು 2003ನೇ ಇಸವಿಯಲ್ಲಿ ಪ್ರಕಟಿಸಿ ಶಿಲ್ಪಕಲಾ ಪ್ರಪಂಚಕ್ಕೆ ಅಮರ ಶಿಲ್ಪಿ ಶ್ರೀನಿವಾಸಾಚಾರ್ಯರ ಜೀವನವನ್ನು ಪರಿಚಯಿಸಿದರು.

ಮುದ್ರಿತವಾದ ಶ್ರೀನಿವಾಸಾಚಾರ್ಯರ ಪುಸ್ತಕವು ಯುವ ಪೀಳಿಗೆಯನ್ನು ತಲುಪಿ ಸಾಂಪ್ರದಾಯಿಕ ಯುವ ಶಿಲ್ಪಿಗಳಿಗೆ ಪ್ರೋತ್ಸಾಹ ನೀಡಲಾರಂಭಿಸಿತು. ಒಂದು ಸಾವಿರ ಪುಸ್ತಕಗಳು ಶಿಲ್ಪಕಲಾ ಅಕಾಡೆಮಿಯ ಪುಸ್ತಕ ಮಳಿಗೆಯಲ್ಲಿ ಖಾಲಿಯಾಗುವುದಕ್ಕೂ ಶ್ರೀನಿವಾಸಾಚಾರ್ಯರ ಕುಟುಂಬದವರು ತಂದೆಯ 'ಜನ್ಮ ಶತಮಾನೋತ್ಸವ'ವನ್ನು ಆಚರಿಸಲು ನಿಶ್ಚಯಿಸಿದ ಸಮಯವು ಒಂದೇ ಆಗಿತ್ತು. ಹಾಗಾಗಿ ಕುಟುಂಬದವರೆಲ್ಲಾ ಶಿಲ್ಪಕಲಾ ಅಕಾಡೆಮಿಯಲ್ಲಿ ಅಧ್ಯಕ್ಷರಾಗಿದ್ದ ಡಾ. ಜಿ. ಜ್ಞಾನಾನಂದ ಅವರಲ್ಲಿ ಮತ್ತೊಂದು ವಿಸ್ತಾರವಾದ ಶ್ರೀನಿವಾಸಾಚಾರ್ಯರ ಜೀವನ ಚರಿತ್ರೆಯನ್ನು ಪುಸ್ತಕ ಹಾಗೂ ಸಾಕ್ಷ್ಯಾಚಿತ್ರದ ಮೂಲಕ ರೂಪಿಸಬೇಕೆಂದು ವಿನಂತಿಸಿಕೊಂಡಾಗ ಉತ್ಸಾಹದಿಂದ ಜ್ಞಾನಾನಂದರವರು ಒಪ್ಪಿದರು. ಇದರ ಪರಿಣಾಮವೇ ಶ್ರೀನಿವಾಸಾಚಾರ್ಯರ ಜೀವನ ಚರಿತ್ರೆಯನ್ನು ಶಾರದಮ್ಮನವರ ಹಸ್ತಪ್ರತಿಯನ್ನು ಅವಲಂಬಿಸಿದ ಪುಸ್ತಕ ಹಾಗೂ ಸಾಕ್ಷ್ಯಚಿತ್ರಗಳು ಬಿಡುಗಡೆಯಾಗಿವೆ.

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಈಗಿನ ಅಧ್ಯಕ್ಷರು ಹಾಗೂ ರಿಜಿಸ್ಟ್ರಾರ್ ಅವರ ಪ್ರೋತ್ಸಾಹದಿಂದ ಮಾತ್ರವೇ ಈ ಪುಸ್ತಕ ಹಾಗೂ ಸಾಕ್ಷ್ಯಚಿತ್ರಗಳು ತಯಾರಾಗಿವೆ. ಶಿಲ್ಪಿಗಳಿಗೆ ಹಾಗೂ ಮುಂದಿನ ಪೀಳಿಗೆಗೆ ಅನುಕೂಲವಾಗುವ ಈ ವರಶಿಲ್ಪಿಯ ಜೀವನ ಚರಿತ್ರೆಯನ್ನು ಶಿಲ್ಪಕಲಾ ಅಕಾಡೆಮಿಯು ಉಡುಗೊರೆಯ ರೂಪದಲ್ಲಿ ಅರ್ಪಿಸಿದ್ದಾರೆ.

ತಾತ ಶ್ರೀನಿವಾಸಾಚಾರ್ಯರ ಬಾಲ್ಯದಿಂದ ಅವರು ಬದುಕಿದ್ದ ದಿನದವರೆಗೂ ನಡೆದಿದ್ದ ಕೆಲವು ವಿಷಯಗಳನ್ನು ಸಂಗ್ರಹಿಸಿ ನನ್ನ ಅಜ್ಜಿ ಶಾರದಮ್ಮನವರ ಕನಸುಗಳನ್ನು ಪದಗಳಲ್ಲಿ ಅಡಗಿಸಿದ್ದೇನೆ. ಆದ್ಯ ಪ್ರವರ್ತಕರ ಕೃತಿಯನ್ನು ರಚಿಸಲು ಪ್ರೋತ್ಸಾಹಿಸಿದ ನನ್ನ ಅಜ್ಜಿಗೆ, ನನ್ನ ತಾಯಿಗೆ ಮತ್ತು ನನ್ನಲ್ಲಿ ಕಲಾತ್ಮಕ ಯೋಚನೆ ಹಾಗೂ ಕಲಾತ್ಮಕತೆಯುನ್ನು ಧಾರೆ ಎರೆದಿರುವ ನನ್ನ ತಾತ ಎನ್.ಪಿ. ಶ್ರೀನಿವಾಸಾಚಾರ್ಯರಿಗೆ ಅವರ ಮೊಮ್ಮಗಳಾದ ನಾನು ಈ ಮೂಲಕ ನಮನಗಳನ್ನು ಅರ್ಪಿಸುತ್ತಿದ್ದೇನೆ.

*

ಶಿಲ್ಪಿ ಎನ್.ಪಿ. ಶ್ರೀನಿವಾಸಾಚಾರ್ಯರ ಬಗೆಗಿನ ಬರಹಗಳು

ದ್ವಿ ರಾಷ್ಟ್ರಪ್ರಶಸ್ತಿ ವಿಜೇತ ಶಿಲ್ಪ ತಪೋನಿಧಿ ಎನ್.ಪಿ. ಶ್ರೀನಿವಾಸಾಚಾರ್ಯರು

– ಎಚ್.ಎಂ. ವರದಾಚಾರ್ಯ

ಎನ್.ಪಿ. ಶ್ರೀನಿವಾಸಾಚಾರ್ಯರು ಜನಿಸಿದ ಸ್ಥಳ ನಾಗಮಂಗಲ ತಾಲೂಕು, ಕ್ಷೇತ್ರ ಮಂಡ್ಯ ಜಿಲ್ಲೆಗೆ ಸೇರಿದೆ. ವಿಜಯನಗರ ಸಾರ್ವಭೌಮ ಹಾಳಾದ ಮೇಲೆ, ಅಲ್ಲಿ ನೆಲೆಸಿದ್ದ ಕುಶಲಕರ್ಮಿಗಳು, ದೇಶದ ಹಲವೆಡೆಗೆ ವಲಸೆ ಹೋಗಿ ನೆಲೆಸಿದ್ದರು ಎಂಬ ಮಾತನ್ನು ಹಿರಿಯರಿಂದ ತಿಳಿದಿದ್ದೇನೆ. ಅದೇ ರೀತಿ ಒಂದು ವರ್ಗದವರು ಮೈಸೂರು ಪ್ರಾಂತ್ಯಕ್ಕೆ ಬಂದು ನೆಲೆಸಿದರೆಂದು ತಿಳಿದಿದ್ದೇನೆ. ಆ ಪೈಕಿ, ಕುಶಲ ಕರ್ಮಿಗಳಾದ ಕೆಲವರು ನಾಗಮಂಗಲ ಮತ್ತು ಸುತ್ತ ಮುತ್ತಲಿನ ಗ್ರಾಮಗಳಲ್ಲಿ ಈಗಲೂ ನೆಲೆಸಿದ್ದಾರೆ. ದಿ. ಶಿಲ್ಪಿ ಶ್ರೀನಿವಾಸಾಚಾರ್ಯರು ಶಿಲ್ಪಿಗಳ ಮನೆತನಕ್ಕೆ ಸೇರಿದವರು.

ವಿವಿಧ ಲೋಹಗಳನ್ನು ಬೆರೆಸಿ, ಕರಗಿಸಿ ಪೂಜಾ ಮೂರ್ತಿಯನ್ನು ತಯಾರಿಸುವುದ್ದಕ್ಕೆ ವಿಧಿ ವಿಧಾನಗಳನ್ನು ಕರಗತ ಮಾಡಿಕೊಂಡಿದ್ದರು ಹಾಗೂ ಅಲಂಕಾರಿಕ ಆಭರಣಗಳನ್ನು ತಯಾರಿಸುವ ಅತ್ಯುನ್ನತ ವಿಧಾನಗಳನ್ನು ತಮ್ಮದಾಗಿ ಮಾಡಿಕೊಂಡಿದ್ದರು. ಈ ಕೆಲಸಕ್ಕೆ ಮಾರ್ಗದರ್ಶನ ಇವರ ತಂದೆಯವರ ಶಿಲ್ಪ ವೃತ್ತಿ ಕಾರಣವಾಗಿತ್ತು.

ಮೇಲಾಗಿ ಶಿಲ್ಪಕಲೆ ರಚನೆಗೆ ಶಾಸ್ತ್ರ, ಸಮ್ಮತವಾದ ಮಾರ್ಗದರ್ಶನಗಳನ್ನು ಹೆಸರಾಂತ ಶಿಲ್ಪಿ ಶ್ರೀಕಂಠಾಚಾರ್ಯರಿಂದ ಪಡೆದುಕೊಂಡರು. ಶಿಲ್ಪಿ ಶ್ರೀನಿವಾಸಾಚಾರ್ಯರಿಗೆ ಸಂಬಂಧದಲ್ಲಿ ಇವರು ಮಾವನರು. ಇವರೂ ಸಹ ನಾಗಮಂಗಲದ ವಾಸಿಗಳು ಆಗಿದ್ದರು. ಶಿಲ್ಪಿಗಳ ತವರೂರು ನಾಗಮಂಗಲವೆಂದು ಹೇಳಿದರೆ ತಪ್ಪಾಗಲಾರದು.

ಶಿಲ್ಪಿ ಎನ್.ಪಿ. ಶ್ರೀನಿವಾಸಾಚಾರ್ಯರ ವಿವಾಹ ಶ್ರೀಮತಿ ಶಾರದಮ್ಮನವರೊಡನೆ ನಾಗಮಂಗಲದಲ್ಲಿ ನೆರವೇರಿತು. ಶ್ರೀಮತಿಯವರ ಅಣ್ಣನವರಾದ ನಾ.ಬಾ. ಚಂದ್ರಶೇಖರಾಚಾರ್ಯರು ನ್ಯಾಯಾಂಗ ಇಲಾಖೆಯಲ್ಲಿ ಮುಖ್ಯ ಹುದ್ದೆಯನ್ನು ಅಲಂಕರಿಸಿ ಸೇವೆ ಸಲ್ಲಿಸಿದವರು. ಮೇಲಾಗಿ ಇವರು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡರು, ಸಮಾಜದ ಉನ್ನತಿಗೆ ಮಾರ್ಗದರ್ಶಕರಾಗಿದ್ದರು. ಮೇಲಾಗಿ ಉನ್ನತ ವೈದಿಕ, ಶಿಲ್ಪಶಾಸ್ತ್ರಗಳ ಅಧ್ಯಯನ ಪಾಂಡಿತ್ಯದಲ್ಲಿ ಉನ್ನತ ಸ್ಥಾನವನ್ನು ಗಳಿಸಿಕೊಂಡರು. ಇವರ ಸಂಪರ್ಕದಿಂದ ಶ್ರೀನಿವಾಸಾಚಾರ್ಯರಿಗೆ ಶಾಸ್ತ್ರಗಳ ಅಂತರಾಳದ ಅನುಭವ ಆಗುತ್ತಿತ್ತು.

ದಿ. ಶಿಲ್ಪಿ ಎಸ್.ಪಿ. ಶ್ರೀನಿವಾಸಾಚಾರ್ಯರು ನನ್ನ ದೊಡ್ಡಮ್ಮನವರ ಜೇಷ್ಠ ಪುತ್ರರು. ನನ್ನ ತಾಯಿ, ಅವರ ತಾಯಿ ಅಕ್ಕ ತಂಗಿಯರು. ನನ್ನ ಜನ್ಮಸ್ಥಳ ಹೊನ್ನಾವರ ಗ್ರಾಮ. ಈ ಗ್ರಾಮ ನಾಗಮಂಗಲಕ್ಕೆ 15 ಕಿಲೋಮೀಟರ್ ದೂರದಲ್ಲಿದೆ. ನಾನು ನನ್ನ ತಾಯಿ ಜೊತೆ, ಆಗಾಗ್ಗೆ ದೊಡ್ಡಮ್ಮನವರ ಮನೆಗೆ ಹೋಗಿ ಬರುತ್ತಿದ್ದೆ. ಪ್ರೈಮರಿ ಸ್ಕೂಲ್‌ನ ವಿದ್ಯಾರ್ಥಿಯಾಗಿದ್ದೆ. ಅಣ್ಣನವರು ನನ್ನನ್ನು ಪ್ರೀತಿಸುತ್ತಿದ್ದರು. ನಾನು ಅವರು ಮಾಡುತ್ತಿದ್ದ ವಿವಿಧ ರೂಪದ ಶಿಲ್ಪ ಕೆಲಸಗಳನ್ನು ವೀಕ್ಷಿಸುತ್ತಿದ್ದೆ. ಅವರು ಮಾಡುತ್ತಿದ್ದ ಕೆಲಸಗಳೆಲ್ಲಿ ಅನೇಕವು ದೇವಸ್ಥಾನಗಳ ಅಲಂಕಾರಿಕ, ಪೂಜಾದಿ ಕೈಂಕರ್ಯಕ್ಕೆ ಸಂಬಂಧಪಟ್ಟವುಗಳಾಗಿದ್ದವು. ಅಣ್ಣನವರು ಶಾಂತಿಪ್ರಿಯರು. ತಾಯಿಯ ಆದೇಶ ಚಾಚೂತಪ್ಪದೆ ಪಾಲಿಸುತ್ತಿದ್ದರು.

ಇವರು ತಮ್ಮ ಧಾರ್ಮಿಕ ನಿತ್ಯಕರ್ಮಗಳನ್ನು ಮುಗಿಸಿ, ತಮ್ಮ ವೃತ್ತಿಯಲ್ಲಿ ತೊಡಗುತ್ತಿದ್ದರು. ಏಕಾಗ್ರತೆಯಿಂದ ಕಾರ್ಯಪ್ರವೃತ್ತರಾಗುತ್ತಿದ್ದರು. ಆಗ ನನ್ನ ಊರಿನಲ್ಲಿ ಮಿಡಲ್ ಸ್ಕೂಲ್ ಇರಲಿಲ್ಲ. ಬೇರೆ ಊರಿಗೆ ಹೋಗಬೇಕಾಗಿತ್ತು. ಮೈಸೂರಿನಲ್ಲಿ ವಾಸವಾಗಿದ್ದ ನನ್ನ ದೊಡ್ಡಮ್ಮನವರ ಮಗ ಶಿಲ್ಪಿ ಶ್ರೀನಿವಾಸಾಚಾರ್ಯರ ಉದಾರ ಸಹಾಯ ದೊರೆತು ನನ್ನ ವಿದ್ಯಾಭ್ಯಾಸ ಮುಂದುವರಿಸಲು ಅನುಕೂಲವಾಗಿ ಸೇಂಟ್ ಫಿಲೋಮಿನಾ ಹೈಸ್ಕೂಲಿಗೆ ಸೇರಿ ಮುಂದುವರಿದೆ ನಾನು ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಅಣ್ಣ ಶಿಲ್ಪಿ ಶ್ರೀನಿವಾಸಾಚಾರ್ಯರು ಮೈಸೂರು ಅರಮನೆ ಅಂಬಾವಿಲಾಸದಲ್ಲಿ ತಮ್ಮ ವೃತ್ತಿಯಲ್ಲಿ ನಿರತರಾಗಿದ್ದರು. ನಾನು ರಜಾ ದಿನಗಳಲ್ಲಿ ಅಲ್ಲಿಗೆ ಹೋಗಿ

ಬರುತ್ತಿದ್ದೆ. ಅನೇಕ ಶಿಲ್ಪಿಗಳು ಅಲ್ಲಿ ಕೆಲಸ ಮಾಡುತ್ತಿದ್ದರು.

ಅಣ್ಣನವರು ಮತ್ತು ಅತ್ತಿಗೆ ಶಾರದಮ್ಮನವರು ನನ್ನನ್ನು ಪ್ರೀತಿಯಿಂದ ತಮ್ಮ ಮಗನಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದರು. ಅವರ ಉದಾರ ಆಶ್ರಯ, ನನ್ನ ಮುಂದಿನ ಜೀವನಕ್ಕೆ ದಾರಿದೀಪವಾಯ್ತು. ಅವರ ಆದರ್ಶದ ಹೆಜ್ಜೆ, ನನ್ನ ಬಾಳು ಬೆಳಗಿತೆಂದು ಹೇಳಲೇಬೇಕು. ಈಗಲೂ ಅವರಿಗೆ ಮೊದಲ ಆಶ್ರಯ ಕೊಟ್ಟ ಮೈಸೂರಿನಲ್ಲೇ ನಿಂತು ಜೀಪಿಸುತ್ತಿದ್ದೇನೆ. ಅವರನ್ನು ಯಾವಾಗಲು ಸ್ಮರಿಸುತ್ತಿದ್ದೇನೆ.

ಅಣ್ಣ ಶಿಲ್ಪಿ ಶ್ರೀನಿವಾಸಾಚಾರ್ಯರ ಗಂಡು ಮಕ್ಕಳಲ್ಲಿ ಮಗ ಜನಾರ್ಧನ ಮೂರ್ತಿಯವರು ತಂದೆಯವರ ಮಾರ್ಗದರ್ಶನದಲ್ಲಿ ಶಿಲ್ಪಕಲೆಯನ್ನು ಅಭ್ಯಾಸದಿಂದ ಮೈಗೂಡಿಸಿಕೊಂಡು ಈ ವೃತ್ತಿಯನ್ನು ಮುಂದುವರಿಸಿಕೊಂಡು ಬರುತ್ತಿದ್ದು, ವಿಜಯದಶಮಿ ಜಂಬೂಸವಾರಿ, ಮೆರವಣಿಗೆಯಲ್ಲಿನ ದೇವಿ ಚಾಮುಂಡೇಶ್ವರಿ ವಿಗ್ರಹವನ್ನು ಶ್ರೀನಿವಾಸಾಚಾರ್ಯರು ನಿರ್ಮಾಣ ಮಾಡುವ ದಿವಸಗಳಲ್ಲಿ ಮಗ ಜನಾರ್ಧನ ಮೂರ್ತಿಯವರು ಇವರಿಗೆ ಸಹಾಯಕರಾಗಿದ್ದರು. ಇವರೂ ನುರಿತ ಶಿಲ್ಪಿಗಳಲ್ಲಿ ಒಬ್ಬರಾಗಿ, ಹೆಸರು ಗಳಿಸಿದ್ದಾರೆ. ತಂದೆಯವರ ಪ್ರತಿಭೆ ಕೀರ್ತಿ ಇವರಿಗೂ ಲಭಿಸಲೆಂದು ಆಶಿಸುತ್ತೇನೆ.


*



ವಿಶ್ವಕರ್ಮ – ಮೈಸೂರು




ಶ್ರೀಮತಿ ಶಾರದಮ್ಮ, ಮಗಳು ನಿರ್ಮಲಾವತಿ



ಶಿಲ್ಪಗುರು ಯಜಮಾನ್
ಶ್ರೀ ಶ್ರೀಕಂಠಾಚಾರ್ಯರು



ಎನ್.ವಿ. ಸೂರ್ಯನಾರಾಯಣಾಚಾರ್ಯರು



ವೀರಭದ್ರಾಚಾರ್ಯರು



ನಾಗಮಂಗಲದ ಕಲ್ಯಾಣಿ



ಕಾಳಿಕಾಂಬ ಕಮಟೇಶ್ವರಸ್ವಾಮಿಯ ದೇವಾಲಯ, ನಾಗಮಂಗಲ




ಗುರು ಶ್ರೀನಿವಾಸಾಚಾರ್ಯರು ಹಾಗೂ ಶಿಷ್ಯೆ ಮೀರಾ ಮುಖರ್ಜಿ.
ದೆಹಲಿಯಲ್ಲಿ ಇಬ್ಬರೂ ಒಟ್ಟಿಗೇ ರಾಷ್ಟ್ರ ಪ್ರಶಸ್ತಿ ಪಡೆದ ಅವಿಸ್ಮರಣೀಯ ದಿನ,
ಜನವರಿ 24, 1968



ರಾಷ್ಟ್ರ ಪ್ರಶಸ್ತಿ 1968




ಮೆರಿಟ್ ಅವಾರ್ಡ್ 1973





ಶಿಲ್ಪ ಸಿದ್ಧಾಂತಿ ಶ್ರೀ ಸಿದ್ದಲಿಂಗ ಸ್ವಾಮಿ (ಮೈಸೂರು ಅರಮನೆಯ ರಾಜಗುರುಗಳು) ಮತ್ತು ಅವರು ಧರಿಸಿರುವ ಪಾದುಕೆಗಳು




ಎನ್.ಪಿ. ಶ್ರೀನಿವಾಸಾಚಾರ್ಯರು, ಅಳಿಯ ಕೃಷ್ಣಾಚಾರ್ಯರು ಹಾಗೂ ಜನಾರ್ಧನ ಮೂರ್ತಿ






ಎನ್.ಪಿ. ಶ್ರೀನಿವಾಸಾಚಾರ್ಯರು ಹಾಗೂ ವೀರಭದ್ರಾಚಾರ್ಯರು











ಶ್ರೀನಿವಾಸಾಚಾರ್ಯರ
ರೇಖಾ ಚಿತ್ರಗಳು



ನಾಗಮಂಗಲ ಶಿಲ್ಪಿಗೆ ಆಸ್ಪತ್ರೆಯಲ್ಲಿ ಸನ್ಮಾನ

[illegible]



ಅನುಬಂಧ

2003ರಲ್ಲಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು ಪ್ರಕಟಿಸಿದ್ದ ಕಿರುಹೊತ್ತಿಗೆ

ಲೋಹಶಿಲ್ಪಿ ಎನ್.ಪಿ. ಶ್ರೀನಿವಾಸಾಚಾರ್ಯ

ಮೊದಲ ಮಾತು

ನಮ್ಮ ರಾಜ್ಯ ಶಿಲ್ಪಕಲೆಗೆ ವಿಶ್ವದಲ್ಲೇ ಹೆಸರು ಪಡೆದದ್ದು. 'ಶಿಲ್ಪಕಲೆಯ ತವರೂರು' ಎಂದು ಕರೆಯಲ್ಪಟ್ಟಿದೆ. ಈ ನಾಡಿನಲ್ಲಿ ಅನೇಕ ಶಿಲ್ಪ ಶೈಲಿಗಳು ಹುಟ್ಟಿ, ಅವು ತಮ್ಮದೇ ಆದ ವಿಶಿಷ್ಟ ಸ್ಥಾನವನ್ನು ಪಡೆದಿವೆ. ನಮ್ಮ ರಾಜ್ಯದಲ್ಲಿ ಶಿಲ್ಪಕಲೆಗಾಗಿ ದುಡಿದವರು ಹಲವಾರು ಶಿಲ್ಪಿಗಳು. ಕೆಲವು ಶಿಲ್ಪಿಗಳು 'ಶಿಲ್ಪ ರಚಿಸುವುದೇ ತಮ್ಮ ಕಾಯಕ'ವೆಂದು ತಿಳಿದು ಶಿಲ್ಪದ ಮೇಲೆ ತಮ್ಮ ಹೆಸರುಗಳನ್ನು ನಮೂದಿಸಿರುವುದಿಲ್ಲ. ಸಾಂಪ್ರದಾಯಿಕವಾಗಿ ಶಿಲ್ಪಿಕಲೆ ಬೆಳೆದು ಬಂದಿದ್ದು ಇಂದಿಗೂ ಈ ಕಲೆಗಳನ್ನು ಉಳಿಸಿ, ಬೆಳೆಸಿಕೊಂಡು, ಬಂದಿರುವವರು ನಮ್ಮಲ್ಲಿದ್ದಾರೆ. ಶಿಲ್ಪಕಲಾ ಅಕಾಡೆಮಿ ಇಂತಹ ಹಿರಿಯ ಶಿಲ್ಪಕಲಾವಿದರು ಮತ್ತು ಅವರ ಕೃತಿಗಳ ಬಗ್ಗೆ ಪುಸ್ತಕಗಳನ್ನು ಪ್ರಕಟಿಸುವ ಯೋಜನೆಯನ್ನು ಪ್ರಾರಂಭಿಸಿದೆ. ಈ ಪುಸ್ತಕಗಳು ಈ ಶಿಲ್ಪಿಗಳ ಮತ್ತು ಕೃತಿಗಳ ಪರಿಚಯ ಮಾಡಿಸುವುದರ ಜೊತೆಗೆ ರಾಜ್ಯದಲ್ಲಿ ಶಿಲ್ಪಕಲೆ ಬೆಳೆದು ಬಂದ ದಾರಿ ಮತ್ತು ಅದರ ಚರಿತ್ರೆಯನ್ನು ತಿಳಿಯಲು ಸಹಾಯಕವಾಗುವುದು.

ಈ ಯೋಜನೆಯಲ್ಲಿ ನಮ್ಮ ನಾಡಿನ ಹೆಸರಾಂತ ಶಿಲ್ಪಿಗಳಾದ ಶ್ರೀ ಎನ್.ಪಿ. ಶ್ರೀನಿವಾಸಾಚಾರ್ಯ ಅವರ ಬಗ್ಗೆ ಹಿರಿಯ ವಿಮರ್ಶಕರಾದ ಶ್ರೀ ಬಿ.ವಿ.ಕೆ. ಶಾಸ್ತ್ರಿ ಮತ್ತು ಶ್ರೀ ಮುಳಹಳ್ಳಿ ಸೂರಿ ಅವರು ಬರೆದಿರುವ ಲೇಖನಗಳನ್ನು ಬಳಸಲಾಗಿದೆ. ಇಬ್ಬರು ಲೇಖಕರಿಗೆ ಅಕಾಡೆಮಿ ಪರವಾಗಿ ವಂದನೆಗಳನ್ನು ಸಲ್ಲಿಸುವೆ.

ಶ್ರೀ ಎನ್.ಪಿ. ಶ್ರೀನಿವಾಸಾಚಾರ್ಯರನ್ನು ನಾನು ತುಂಬಾ ಹತ್ತಿರದಿಂದ ಬಲ್ಲೆ. ಅವರು ಲೋಹಕಲೆಯಲ್ಲಿ ನಿಷ್ಣಾತರು. ಈ ಮಾಧ್ಯಮದಲ್ಲಿ ಅವರಿಗಿದ್ದ ಪ್ರೌಢಿಮೆ ಮೆಚ್ಚುವಂತಹದು ಮತ್ತು ಅವರು ಈ ಮಾಧ್ಯಮದಲ್ಲಿ ನಡೆಸಿದ ಪ್ರಯೋಗಗಳು ಶಿಲ್ಪಕಲಾ ಕ್ಷೇತ್ರದಲ್ಲಿ ಒಂದು ಸಾಧನೆ. ಇಂತಹ ಹಿರಿಯ ಶಿಲ್ಪಿಯ ಬಗ್ಗೆ ನಮ್ಮ ಅಕಾಡೆಮಿ ಈ ಕಿರು ಪುಸ್ತಕವನ್ನು ಪ್ರಕಟಿಸುತ್ತಿದೆ. ಈ ಪುಸ್ತಕ ಪ್ರಕಟಿಸಲು, ಸಾಕಷ್ಟು ಮಾಹಿತಿ ನೀಡಿದ ಅವರ ಕುಟುಂಬದವರಿಗೆ ಅಕಾಡೆಮಿ ಪರವಾಗಿ ವಂದನೆಗಳನ್ನು ಸಲ್ಲಿಸುವೆ.

ಬೆಂಗಳೂರು

ಎನ್.ಜಿ. ನೀಲಕಂಠಾಚಾರ್
ಅಧ್ಯಕ್ಷರು
ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ರಾಷ್ಟ್ರ ಪುರಸ್ಕೃತ ಶಿಲ್ಪಿ ಶ್ರೀನಿವಾಸಾಚಾರ್ಯ

– ಬಿ.ವಿ.ಕೆ. ಶಾಸ್ತ್ರಿ

ಕೆಲವು ತಿಂಗಳ ಹಿಂದೆ ಶ್ರೀ ಸೇನ್‌ಗುಪ್ತ ಅವರು ತಮ್ಮ ನಿರ್ದೇಶನದಲ್ಲಿ ನಡೆಯುತ್ತಿರುವ ಅಖಿಲ ಭಾರತ ಕರಕುಶಲ ಕಲಾಮಂಡಳಿಯ ಅಭಿವೃದ್ಧಿ ಕೇಂದ್ರಕ್ಕೆ ಆಹ್ವಾನಿಸಿದರು. ಈ ಕೇಂದ್ರವು ಬೆಂಗಳೂರಿನಲ್ಲಿದೆ. 'ಬಂದರೆ ಒಂದು ಸ್ವಾರಸ್ಯಕರವಾದ ವಸ್ತುವನ್ನು ನೋಡಬಹುದು' ಎಂದು ಹೇಳಿ ಕುತೂಹಲ ಕೆರಳಿಸಿದರು. ಅವರ ಕೇಂದ್ರಕ್ಕೆ ಹೋದಾಗ ಅಲ್ಲಿ ಮಾಡುತ್ತಿರುವ ಹೊಸ ಪ್ರಯೋಗಗಳನ್ನು ವಿವರಿಸಿ ಕೆಲವು ಲೋಹ ವಿಗ್ರಹಗಳನ್ನು ತೋರಿಸಿದರು. ಅವುಗಳಲ್ಲಿದ್ದ ವಿಶೇಷವೆಂದರೆ ವಿಗ್ರಹಗಳ ದೇಹ ಮತ್ತು ಆಭರಣಗಳ ಬಣ್ಣವೇ ಬೇರೆ.

ಅನಂತರ ಇನ್ನೊಂದು ವಿಗ್ರಹವನ್ನು ತೋರಿಸಿದರು. ಅದೂ ಎರಡು ಬಣ್ಣದ ಶಿಲ್ಪವೇ. ಆದರೆ ಇನ್ನೊಂದು ಬಗೆ. ದೇಹದ ಒಂದರ್ಧ ಭಾಗ ಕೆಂಪು, ಅಂದರೆ ತಾಮ್ರ. ಇನ್ನೊಂದು ಅರ್ಧ– ತಿಳಿಹಳದಿ ಅಂದರೆ ಕಂಚು. ಅರ್ಧನಾರೀಶ್ವರ ಮೂರ್ತಿ ರಚನೆ ಕಲ್ಪನೆ ಒಂದು ವಿಶೇಷವೇ. ಕೆ. ವೆಂಕಟಪ್ಪನವರ ಪ್ರಸಿದ್ಧ ಅರ್ಧನಾರೀಶ್ವರ ರೇಖಾಚಿತ್ರದ ಸ್ಮೃತಿಬರುತ್ತಿದ್ದಿತು. ಅಲ್ಲಿ ಹೆಣ್ಣು ಗಂಡು ಭಾಗಗಳ ವ್ಯತ್ಯಾಸವನ್ನು ಗಂಡು ಭಾಗದ ಮಾಂಸಖಂಡ ಪ್ರಧಾನವಾಗಿ ಕಾಣುವಂತೆ ಚಿತ್ರಿಸಿದ್ದಾರೆ ಸೂಕ್ಷ್ಮರೇಖೆಗಳಲ್ಲಿ. ಈ ಶಿಲ್ಪದಲ್ಲಿ ಬಣ್ಣಗಳ ಮೂಲಕ ವ್ಯತ್ಯಾಸವನ್ನು ತೋರಿಸಲಾಗಿದೆ. ವೆಂಕಟಪ್ಪನವರು ಅನುಸರಿಸಿದ ಬೆಳಕು ಛಾಯೆಗಳ ವಿನ್ಯಾಸ ಶಿಲ್ಪಕ್ಕೆ ಬಹು ಉಚಿತವಾದುದು. ಈ ಶಿಲ್ಪದಲ್ಲಿ ಅನುಸರಿಸಿದ ವಿಧಾನ ಚಿತ್ರಕ್ಕೆ ಉಚಿತವಾದುದು.

ಸಾಹಸ

ವಿಗ್ರಹವನ್ನು ನೋಡಿದಾಗ ಸೇನ್‌ಗುಪ್ತರು ಉಪಯೋಗಿಸಿದ 'ಸ್ವಾರಸ್ಯ' ಎಂಬ ಪದ ಈ ಸಂದರ್ಭಕ್ಕೆ ಸಾಲದು ಎನ್ನಿಸಿತು. ವಿಗ್ರಹದ ಅಂದವಾದ ರೂಪವಂತಿರಲಿ ಅದನ್ನು ನಿರ್ಮಿಸುವುದರಲ್ಲಿಯೂ ಸೌಂದರ್ಯದಷ್ಟೇ, ಸಾಹಸವೂ ಮುಖ್ಯವಾದ ಅಂಶವೆನ್ನಿಸಿತು.

ಈ ಎರಡೂ ಲೋಹಗಳ ಗುಣಗಳೇ ಬೇರೆ. ಆದರೆ ಅವುಗಳ ಗುಣಗಳಿಗೂ ಒಟ್ಟಂದಕ್ಕೂ ಚ್ಯುತಿ ಬರದಂತೆ ಈ ಎರಡೂ ಲೋಹಗಳನ್ನು ಕರಗಿಸಿ ಎರಕ ಹೊಯ್ದು ಅಖಂಡ ಮೂರ್ತಿ ರಚಿಸುವುದು ಅಸಾಧ್ಯವಲ್ಲದಿದ್ದರೂ ಆ ರೀತಿಯ ರಚನೆಗೆ ತಾಂತ್ರಿಕವಾಗಿ ಅನೇಕ ತೊಂದರೆಗಳಿವೆ. ಅವುಗಳನ್ನು ನಿವಾರಿಸಿಕೊಂಡು ವಿಗ್ರಹದ ಒಟ್ಟಂದ ಎರಡೂ ಭಾಗಗಳ ನಿರ್ಣಯಕ್ಕೆ ಚ್ಯುತಿ ಬಾರದಂತೆ ಶಿಲ್ಪವನ್ನು ರಚಿಸಿದುದು ಸಾಹಸದ ಕೌಶಲವೇ ಸರಿ. ಈ ಬಗೆಯ ಅಪೂರ್ವ ಶಿಲ್ಪವನ್ನು ರಚಿಸಬೇಕಾದರೆ ಪರಂಪರೆ ಮತ್ತು ಪಕ್ವವಾದ ಅನುಭವಗಳಿಗೆ ಮಿಗಿಲಾಗಿ ಸಂಸ್ಕಾರ ಬಲವಿಲ್ಲದಿದ್ದಲ್ಲಿ ಸಾಧ್ಯವೇ? ಆಗಲೇ ಶ್ರೀನಿವಾಸಾಚಾರ್ಯರ ಪರಿಚಯವಾದುದು.

ನಿರಾಡಂಬರ

ಸೇನ್ ಗುಪ್ತರು ಆಚಾರ್ಯರ ಪರಿಚಯ ಮಾಡಿಸಿದಾಗ ಸ್ವಲ್ಪ ಅನುಮಾನವೇ ಆಯಿತು. ಶಿಲ್ಪಿ ಸ್ಥಪತಿಗಳಿಗೆ ಉಚಿತವಾದ ಆಡಂಬರವೇನೂ ಇರಲಿಲ್ಲ ನಿಜ. ಅದಕ್ಕಿಂತ ಹೆಚ್ಚಾಗಿ ಈ ಅರ್ಧನಾರೀಶ್ವರ ಶಿಲ್ಪವನ್ನು ಎತ್ತಿ ನಿಲ್ಲಿಸಲೂ ಶಕ್ತಿಯಿದ್ದಂತೆ ಕಾಣಬರಲಿಲ್ಲ. ಅಂತಹ ವ್ಯಕ್ತಿ ಈ ಶಿಲ್ಪವನ್ನು ನಿಜವಾಗಿಯೂ ರಚಿಸಲು ಸಾಧ್ಯವಾಯಿತೇ ಎಂಬ ಸಂದೇಹವೂ ಉಂಟಾಯಿತು. ಶ್ರೀನಿವಾಸಾಚಾರ್ಯರು ನಿಜವಾಗಿಯೂ ನಿರಾಂಡಂಬರ ವ್ಯಕ್ತಿ. ರಾಷ್ಟ್ರ ಪ್ರಶಸ್ತಿ ಪಡೆದವರೆಂದು ಊಹಿಸಲು ಸಾಧ್ಯವಿಲ್ಲ. ಕರ್ನಾಟಕದ ಶಿಲ್ಪಕಲೆಯೆಂದೊಡನೆ ಚಾಳುಕ್ಯ, ಹೊಯ್ಸಳ ಮತ್ತು ವಿಜಯನಗರ ಕಾಲಕ ದೇವಸ್ಥಾನಗಳೂ, ಅವುಗಳಲ್ಲಿ ಕೆತ್ತಿರುವ ಮೂರ್ತಿ ಶಿಲ್ಪಗಳ ಚಿತ್ರಗಳೂ ನಮ್ಮ ಮನಸ್ಸಿನಲ್ಲಿ ಮೂಡಿ ಬರುತ್ತವೆ. ದೇವಸ್ಥಾನಗಳಿಗಾಗಿ ಪಂಚಲೋಹದಿಂದ ಹತ್ತು ಹನ್ನೊಂದನೆಯ ಶತಮಾನದಲ್ಲಿಯೇ ವಿಗ್ರಹಗಳನ್ನು ತಯಾರಿಸುತ್ತಿದ್ದ ಬಗೆಗೆ ದಾಖಲೆಗಳಿವೆ. ಆ ಲೋಹ ಶಿಲ್ಪಗಳೇನಾದುವು? ಮುಂದೆ ಈ ಕಲೆಯು ಹೇಗೆ ಬೆಳೆದುಬಂದಿತು ಮುಂತಾದ ವಿಷಯಗಳ ಬಗೆಗೂ ಈ ಲೋಹ ಶಿಲ್ಪಿಗಳ ಬಗೆಗೂ ಸಾಕಾದಷ್ಟು ವಿವರಗಳು ದೊರೆಯುತ್ತಿಲ್ಲ. ಸೆನ್ಸಸ್ ಇಲಾಖೆಯಿಂದ ಹತ್ತು ವರುಷಗಳಿಗೊಮ್ಮೆ ಜನಗಣತಿ ಮಾಡುವಾವ ಕುಶಲ ಕಲೆಗಳ ಬಗೆಗೂ ಒಂದು ಕೈಪಿಡಿ ಪ್ರಕಟವಾಗುತ್ತದೆ. ಅದರಲ್ಲಿಯೂ ಈ ಲೋಹಶಿಲ್ಪದ ವಿಷಯವೇ ಇಲ್ಲ. ಇಷ್ಟಾದರೂ ಪುರಾತನ ದೇವಾಲಯಗಳಲ್ಲಿ ಪಂಚಲೋಹದಿಂದ ಮಾಡಿದ ದೇವತಾಮೂರ್ತಿಗಳೂ, ಹಿತ್ತಾಳೆಯ ವಾಹನಾದಿಳೂ, ಇತರ ಪೂಜಾ ಉಪಕರಣಗಳೂ ಹೇರಳವಾಗಿವೆ. ಇವೆಲ್ಲಾ ಹೇಗೆ ಬಂದವು? ಕರ್ನಾಟಕದಲ್ಲಿ ಶಿಲ್ಪಕಲೆಯ ಬೆಳವಣಿಗೆಯ ಬಗೆಗೆ ಸಾಕಾದಷ್ಟು ಅಧ್ಯಯನವಾಗಿಲ್ಲ.

ಪರಂಪರೆ

ಈ ಲೋಹಕರ್ಮ ಅಥವಾ ಲೋಹಶಿಲ್ಪವನ್ನು ಆರ್ಷೇಯವಾಗಿ ಬೆಳೆಸಿಕೊಂಡು ಬಂದ ಊರುಗಳಲ್ಲಿ ಒಂದು ನಾಗಮಂಗಲ. ಅಲ್ಲಿನ ಒಂದು ವಿಶ್ವಕರ್ಮ ಕುಟುಂಬಕ್ಕೆ ಸೇರಿದವರು ಶ್ರೀನಿವಾಸಾಚಾರ್ಯರು. ಅವರ ವಂಶವೃಕ್ಷವನ್ನು ಹರಡಿದರೆ ನೂರಾರು ವರ್ಷಗಳ ಹಿಂದಕ್ಕೆ ಹೋಗಿ ಕಾಲದ ಮಬ್ಬಿನಲ್ಲಿ ಮರೆಯಾಗುತ್ತದೆ. ಅವರ ತಂದೆ ಪುಟ್ಟಾಚಾರ್ಯರು, ದೊಡ್ಡಪ್ಪ ವೆಂಕಟಾಚಾರ್ಯರು, ಚಿಕ್ಕಪ್ಪ ಚಿಕ್ಕಾಚಾರ್ಯರು, ತಾತನವರಾದ ನೀಲಾಚಾರ್ಯರು, ಅವರ ತಂದೆ ವೆಂಕಟಾಚಾರ್ಯರು... ಹೀಗೆ ಹೋಗುತ್ತದೆ ಅವರ ಪರಂಪರೆ. ಎಲ್ಲರೂ ಶಿಲ್ಪಿಗಳೇ. ಚಿನ್ನ, ಬೆಳ್ಳಿ, ಪಂಚಲೋಹ, ಕಲ್ಲು ಇವುಗಳಲ್ಲಿ ರಚಿಸುತ್ತಿದ್ದವರು. ಮೈಸೂರು ರಾಜ್ಯದ ದಕ್ಷಿಣಭಾಗದ ದೇವಸ್ಥಾನ ಮತ್ತು ಮಠದಲ್ಲಿರುವ ಎಷ್ಟೋ ವಿಗ್ರಹಗಳೂ, ಪೂಜಾ ಸಾಮಗ್ರಿಗಳು ಅಲ್ಲದೆ ದೇವಾಲಯಗಳ ಬಾಗಿಲುವಾಡಗಳೂ ಧ್ವಜಸ್ಥಂಭ ಇವುಗಳ ಹಿತ್ತಾಳೆ ಕವಚಗಳೂ ಈ ನಾಗಮಂಗಳದ ಶಿಲ್ಪಿಗಳಿಂದ ನಿರ್ಮಿತವಾದುವೇ. ಆದರೆ ಯಾರು ಯಾವ ವಸ್ತುವನ್ನು ಯಾವಾಗ ರಚಿಸಿದರು ಎನ್ನುವ ದಾಖಲೆಗಳು ಎರಡೂ ಕಡೆಯಲ್ಲಿಯೂ ದೊರೆಯುವುದಿಲ್ಲ. ಶ್ರೀನಿವಾಸಾಚಾರ್ಯರೀಗೇ ತಮ್ಮ ತಾರುಣ್ಯದಲ್ಲಿ ರಚಿಸಿಚ ವಸ್ತುಗಳ ತಪಸೀಲು, ಅದನ್ನು ಮಾಡಿಸಿದವರ ಹೆಸರು ಮುಂತಾದುವು ನೆನಪಿಲ್ಲ. ಡೈರಿ ಮುಂತಾದವನ್ನು ಬರೆದಿಡುವ ಪದ್ಧತಿಯೇ ಇಲ್ಲ. ಬಂದ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿಕೊಂಡು ಹೋಗುವುದು. 'ಕರ್ಮಣ್ಯೇ ವಾಧಿಕಾರಸ್ತೇ.'

ಬಾಲ್ಯದ ಶಿಕ್ಷಣ

ಸುತ್ತಿಗೆ ಉಳಿಗಳ ನಾದ, ಕುಲಿಮೆಗಳ ಹೊಗೆ, ಕಾದ ಲೋಹಗಳ ಕಂಪು ಇವುಗಳ ಮಧ್ಯೆ ಬೆಳೆದ ಶ್ರೀನಿವಾಸಾಚಾರ್ಯರಿಗೆ ಬಾಲ್ಯದಿಂದಲೂ ಶಿಲ್ಪದ ಕಡೆಗೆ ಆಕರ್ಷಣೆ. ಹಾಗೂ ಹೀಗೂ ಶಾಲೆಗೂ ಸೇರಿ ನಾಲ್ಕು ಅಕ್ಷರಗಳನ್ನು ಓದಿ ಬರೆಯುವುದನ್ನೂ ಕಲಿತರು. 'ದೊಡ್ಡವರು ಮೇಣದಲ್ಲಿ ಮಾಡುತ್ತಿದ್ದ ವಿಗ್ರಹಗಳನ್ನು ನೋಡಿ ನಾನೂ ಹಾಗೆಯೇ ಜೇಡಿಮಣ್ಣಿನಲ್ಲಿ ಮಾಡುವುದು. ಅದನ್ನು ಅವರಿಗೆ ತೋರಿಸುವುದು. ತಿದ್ದಿಸಿಕೊಳ್ಳುವುದು. ಇದೇ ನನ್ನ ಆಟವಾಗಿತ್ತು." ಎನ್ನುತ್ತಾರೆ ಶ್ರೀನಿವಾಸಾಚಾರ್ಯರು ತಮ್ಮ ಬಾಲ್ಯಕಾಲವನ್ನು ನೆನೆಯುತ್ತಾ. ಇದರ ಜೊತೆಗೆ ಅವರ ತಂದೆ ಅಥವಾ ದೊಡ್ಡಪ್ಪನವರು ಬೆಳಗ್ಗೆ-ಸಾಯಂಕಾಲ ಕೊಳಕ್ಕೆ ಸಂಧ್ಯಾವಂನೆಗೆ ಜೊತೆಯಲ್ಲಿ ಕರೆದುಕೊಂಡು

ಹೋಗುತ್ತಿದ್ದರು. ದಾರಿಯಲ್ಲಿ ಮೂರ್ತಿ ಲಕ್ಷಣಗಳಿಗೆ ಸಂಬಂಧಿಸಿದ ಶ್ಲೋಕಗಳನ್ನು ಹೇಳುವುದು, ವಿವರಿಸುವುದು, ಸಾಯಂಕಾಲ ದೇವಸ್ಥಾನಗಳಿಗೆ ಹೋಗುವುದು. ಅಲ್ಲಿರುವ ವಿಗ್ರಹ, ವಾಹನಾದಿಗಳ ವಿಶೇಷಗಳನ್ನು ತೋರಿಸಿ ವಿವರಿಸುವುದು. ಬೇರೆ ಊರುಗಳಲ್ಲಿ ವಿಗ್ರಹಗಳ ಪ್ರತಿಷ್ಠೆ ಮಾಡುವಾಗ ಜೊತೆಯಲ್ಲಿ ಕರೆದುಕೊಂಡು ಹೋಗಿ ಅಷ್ಟ ದಿಗ್ಬಂಧನ ನೇತ್ರೋನ್ಮೀಲನ ಮುಂತಾದ ವಿಧಿಗಳಲ್ಲಿ ಲಘುವಾದ ಕೆಲಸಗಳನ್ನು ಮಾಡಿಸುವುದು – ಇದು ಶ್ರೀನಿವಾಸಾಚಾರ್ಯರಿಗೆ ನೆನಪಿನಲ್ಲಿರುವ ಬಾಲ್ಯಕಾಲದ ಚಿತ್ರ.

ಶಾಸ್ತ್ರ – ಸೌಂದರ್ಯ

'ನನಗೆ ಅಮರ ಪಾಠವಾಗಿದ್ದುದರಿಂದ ಹಿರಿಯರು ಹೇಳುತ್ತಿದ್ದ ಶಿಲ್ಪಶಾಸ್ತ್ರಗಳ ಶ್ಲೋಕಗಳು ಅರ್ಥವಾದರೂ ಆ ಶ್ಲೋಕಗಳನ್ನು ಕೆಲಸದಲ್ಲಿ ಹೇಗೆ ಅನ್ವಯ ಮಾಡುತ್ತಿದ್ದರೆಂಬುದರ ಬಗೆಗೇ ನನಗೆ ಕಣ್ಣು. ಶಾಸ್ತ್ರಾಧಾರದ ಮೇಲೆ ಹೇಗೆ ಸೌಂದರ್ಯವನ್ನು ನಿರ್ಮಿಸುತ್ತಿದ್ದಾರೆ ಎಂಬುದರ ಕಡೆಗೇ ನನ್ನ ದೃಷ್ಟಿ ಹೋಗುತ್ತಾ ಶ್ಲೋಕಗಳಿಗಿಂತ ನನ್ನ ಹಿರಿಯರು ಅನುಸರಿಸುತ್ತಿದ್ದ ಮಾರ್ಗ ವಿಧಾನಗಳೇ ನನ್ನ ಮನಸ್ಸಿನಲ್ಲಿ ನಿಂತವು. ಅದರಲ್ಲೂ ಊರಿನ ಹಿರಿಯರಾದ ಶ್ರೀಕಂಠಾಚಾರ್ಯರ ಮಾರ್ಗದರ್ಶನ ಬಹುಮುಖ್ಯವಾದುದು' ಎನ್ನುತ್ತಾರೆ.

ವಿಗ್ರಹಗಳನ್ನು ಕಡೆದು ಅಗಮೋಕ್ತವಾಗಿ ಅವುಗಳ ಪ್ರತಿಷ್ಠೆಯನ್ನು ತಾವೇ ಮೊದಲಬಾರಿ ಸ್ವತಂತ್ರವಾಗಿ ನಿರ್ವಹಿಸಿದಾಗ ಶ್ರೀನಿವಾಚಾರ್ಯರಿಗೆ ವಯಸ್ಸು 22–23 ಇರಬಹುದು. ಬಿಂಡಿಗನವಿಲೆಯ ಬಳಿಯ ಗುಂಡೇನಹಳ್ಳಿಯಲ್ಲಿ ಯಾರೋ ಶನಿದೇವರ ಪ್ರತಿಷ್ಠೆ ಮಾಡಬೇಕೆಂದು ಕೇಳಿದಾಗ, 'ಸದಾ ಎಣ್ಣೆಯಲ್ಲಿರಬೇಕಾದ ಶನಿದೇವರ ವಿಗ್ರಹಕ್ಕೆ ಅದೆಂತಹ ಪೂಜೆ ಮತ್ತು ಅಲಂಕಾರ ಮಾಡಲು ಸಾಧ್ಯ? ನವಗ್ರಹಗಳನ್ನು ಪ್ರತಿಷ್ಠೆ ಮಾಡಿದರೆ ಒಳ್ಳೆಯದು' ಎಂದು ಸಲಹೆ ಮಾಡಿದರು. ಅಲ್ಲದೆ ತಾವೇ ಶಿಲೆಯಲ್ಲಿ ನವಗ್ರಹಗಳನ್ನು ಮಾಡಿ ಆಗಮೋಕ್ತವಾಗಿ ಅಷ್ಟದಿಗ್ಬಂದನ ಮಾಡಿ ಪ್ರತಿಷ್ಠೆ ಮಾಡಿದರು. ಜೊತೆಗೆ ಲೋಹದಲ್ಲಿ ಏಳುಕುದುರೆ ಮತ್ತು ಮಂಡಲ ಸಹಿತವಾದ ಸೂರ್ಯ ನಾರಾಯಣನ ಉತ್ಸವಮೂರ್ತಿಯನ್ನೂ ರಚಿಸಿಕೊಟ್ಟರು.

ಸಿಂಹಾಸನಕ್ಕೆ ಸಿಂಗಾರ

ಅಲ್ಲಿಂದ ಮುಂದೆ ಅನೇಕ ಊರುಗಳಿಗೆ ಗ್ರಾಮದೇವತೆಗಳ ವಿಗ್ರಹ, ದೇವಸ್ಥಾನದ ಉತ್ಸವ ಮತ್ತು ವಾಹನಮೂರ್ತಿಗಳು, ಚಿನ್ನ ಬೆಳ್ಳಿಯ ವಿಗ್ರಹಗಳು,

ಪ್ರಭಾವಳಿಗಳು, ನಂದಿ ಕಂಬಗಳೇ ಮುಂತಾದುವನ್ನು ರಚಿಸಿಕೊಟ್ಟರು. ಕಾರ್ಯನಿಮಿತ್ತ ಮೈಸೂರಿಗೆ ಬಂದಿದ್ದಾಗ ಚಾಮರಾಜೇಂದ್ರ ಕುಶಲಕಲಾ ವಿದ್ಯಾಲಯದಲ್ಲಿ ಒಂದು ಲೋಹವಿಗ್ರಹವನ್ನು ಮಾಡಿಕೊಟ್ಟರು. ಆಗಲೇ ಮೈಸೂರಿನ ಖ್ಯಾತ ಶಿಲ್ಪಿ ಸಿದ್ಧಾಂತಿ ಸಿದ್ದಲಿಂಗಸ್ವಾಮಿಗಳ ದೃಷ್ಟಿಗೆ ಬಿದ್ದುದು. ಅವರ ಆದೇಶದಂತೆ ಕೆಲವು ವಿಗ್ರಹಗಳನ್ನು ರಚಿಸಿಕೊಟ್ಟುದೇ ಅಲ್ಲದೇ ಭರತಪುರ ಮಹಾರಾಜರಿಗಾಗಿ ಚಿನ್ನದ ಅಂಬೇಗಾಲು ಕೃಷ್ಣ ವಿಗ್ರಹವನ್ನೂ ರಚಿಸಿಕೊಟ್ಟರು. ಮೈಸೂರ ಕೋಟೆಯೊಳಗಿನ ಭುವನೇಶ್ವರಿ ದೇವಸ್ಥಾನದ ಉತ್ಸವಮೂರ್ತಿ ಶ್ರೀನಿವಾಸಾಚಾರ್ಯರಿಂದ ನಿರ್ಮಿತವಾದುದೇ. ಹಾಗೆಯೇ ಪರಕಾಲಸ್ವಾಮಿಗಳ ಮಠದಲ್ಲಿರುವ ಬೆಳ್ಳಿಯ ಹಯಗ್ರೀವಮೂರ್ತಿಯೂ ಆಚಾರ್ಯದಿಂದಲೇ ನಿರ್ಮಿತವಾದುದು. ಇದೇ ಕಾಲದಲ್ಲಿ ಶ್ರೀನಿವಾಸಾಚಾರ್ಯರಿಂದ ನಿರ್ಮಿತವಾದ ಗಮನಾರ್ಹವಾದ ಇನ್ನೊಂದು ಶಿಲ್ಪ – ಚಾಮರದ ಬೇಟೆಗಳು.

ಅರಮನೆಯ ಸಿಂಹಾಸನದ ಮೆಟ್ಟಿಲು ಏರುವ ಹಂತಗಳ ಪ್ರಾರಂಭದಲ್ಲಿಯೇ ಎಡಬಲದಲ್ಲಿ ಚಾಮರಗಳನ್ನು ಬೀಸುತ್ತಾ ನಿಂತಿರುವ ಬೆಳ್ಳಿಯ ಸುಂದರವಾದ ಎರಡು ಬೇಟೆಗಳು ಆಚಾರ್ಯರ ಕೈಯಿಂದ ನಿರ್ಮಿತವಾದುವು. ಹೀಗೆಯೇ ಇನ್ನೂ ಎಷ್ಟೋ. ಅವುಗಳ ಒಟ್ಟಂದದಂತೆಯೇ, ಅವುಗಳಲ್ಲಿ ಅನುಭವವಾಗುವ ಸಂಪ್ರದಾಯ ಶುದ್ಧತೆ, ಅಂದವಾದ ಪ್ರಮಾಣ ಮತ್ತು ನಿರ್ಣಯಗಳಿಂದ ಶ್ರೀನಿವಾಸಾಚಾರ್ಯರ ಮೂರ್ತಿ ಶಿಲ್ಪಗಳು ಬಹು ಮೆಚ್ಚಲ್ಪಟ್ಟಿವೆ, ಮಾನ್ಯ ಮಾಡಲ್ಪಟ್ಟವೆ. ಈ ನಲವತ್ತು ವರುಷಗಳಲ್ಲಿ ಅವರೆಷ್ಟು ರಚಿಸಿದರು, ಆ ಶಿಲ್ಪಗಳು ಎಲ್ಲೆಲ್ಲಿವೆ ಎಂಬುದೇ ಅವರಿಗೆ ನೆನಪಿಲ್ಲ.

ಚೆನ್ನಕೇಶವನ ಕೃಪೆ

ಹದಿನಾರು ವರುಷಗಳ ಹಿಂದೆ ಬೆಂಗಳೂರಿನ 'ಡಿಸೈನ್ ಸೆಂಟರ್'ನಲ್ಲಿ ನೇಮಿತರಾಗಿ ನೆಲೆಸಿದ ಮೇಲೆ ಆಚಾರ್ಯರ ಜೀವನದಲ್ಲಿ ಒಂದು ಹೊಸ ಅಧ್ಯಾಯ ಪ್ರಾರಂಭವಾದಂತಾಯಿತು. ಹಿರಿಯರು ಹಾಕಿಕೊಟ್ಟ ಮೇಲ್ಪಂಕ್ತಿಯನ್ನೇ ಸುಮ್ಮನೆ ಅನುಸರಿಸಿಕೊಂಡು ಹೋಗುತ್ತಿದ್ದ ಅಚಾರ್ಯರು ಹೊಸ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಅವುಗಳನ್ನು ಪರಿಹರಿಸಿಕೊಂಡು ಅವರ ಕಲೆಗೆ ಒಂದು ಹೊಸ ಕಳೆ ಬಂದು ಅವುಗಳ ವ್ಯಾಪ್ತಿಯೂ ಹೆಚ್ಚುವಂತಾಯಿತು. ಅಂತಹ ಕೃತಿಗಳಲ್ಲಿ ಒಂದು ಆಚಾರ್ಯರಿಗೆ ರಾಷ್ಟ್ರೀಯ ಪ್ರಶಸ್ತಿ ಎಂದ ಚೆನ್ನಕೇಶವ. ಅದರ ಹಿನ್ನೆಲೆಯೂ ಸ್ವಾರಸ್ಯವಾಗಿದೆ.

ಲೋಹದ ಮೂರ್ತಿ ಶಿಲ್ಪದಲ್ಲಿ ಪಲ್ಲವ, ಚೋಳ ಸಂಪ್ರದಾಯಗಳಿರುವುದು ಎಲ್ಲರಿಗೂ ಗೊತ್ತಿರುವ ವಿಷಯವೇ. ಶಾಸ್ತ್ರ ಮತ್ತು ಸೌಂದರ್ಯಗಳ ಒಳ್ಳೆಯ

ಸಮನ್ವಯದಿಂದ ಚೋಳ ಶಿಲ್ಪಗಳು ಜಗತ್ಪ್ರಸಿದ್ಧವಾಗಿವೆ. ಒಮ್ಮೆ ದೊಡ್ಡ ಅಧಿಕಾರಿಯೊಬ್ಬರು ಮಾತನಾಡುತ್ತಾ 'ಹೊಯ್ಸಳ ಮೂರ್ತಿ ಶಿಲ್ಪವೆಲ್ಲಾ ಅಶಾಸ್ತ್ರೀಯ. ಅದಕ್ಕೇ ಆ ಮಾದರಿಯ ಲೋಹ ವಿಗ್ರಹಗಳಿಲ್ಲ' ಎಂದರಂತೆ. ಸ್ವಾಭಾವಿಕವಾಗಿ ವಿಚಲಿತರಾದ ಶ್ರೀನಿವಾಸಾಚಾರ್ಯರಿಗೂ ಚುಚ್ಚಿದಂತೆ ಆಯಿತು. 'ಹೊಯ್ಸಳ ಶೈಲಿಯ ಲೋಹಶಿಲ್ಪ ಮಾಡುವುದಕ್ಕೆ ಸ್ವಲ್ಪ ಕಷ್ಟವೆಂದು ಬಿಟ್ಟಿದ್ದಾರೆಯೇ ವಿನಾ ಅದು ಅಶಾಸ್ತ್ರೀಯವೇನಲ್ಲ ಎಂಬುದನ್ನು ದೃಢಪಡಿಸಬಲ್ಲೆ' ಎಂದರು ಆಚಾರ್ಯರು. ಈ ವಿಷಯನ್ನು ಪ್ರಸ್ತಾಪಿಸುತ್ತಾ 'ಒಂದೊಂದು ಶಿಲ್ಪ ಶೈಲಿಯೂ ಆಯಾ ವಸ್ತು ಗುಣ, ಧರ್ಮಗಳನ್ನವಲಂಬಿಸಿ ರೂಪಿತವಾಗುತ್ತದೆ. ಹೊಯ್ಸಳ ಶಿಲ್ಪವೆಲ್ಲಾ ಮೆತುವಾದ ಬಳಪದ ಕಲ್ಲಿನದು. ಕುಸುರಿ ಕೆಲಸಕ್ಕೆ ಸುಖವಾಗಿ ಒದಗಿ ಬಂದುದರಿಂದ ಶಿಲ್ಪಿಗಳು ಅದರಲ್ಲಿ ತಮ್ಮ ಕಲ್ಪನಾ ಪ್ರತಿಭೆಯನ್ನು ಅಪಾರವಾಗಿ ತೋರಿದ್ದಾರೆ. ಅವರು ಬಳಸಿರುವ ಕೆಲವು ಹಸ್ತ ಅಂಗ ವಿನ್ಯಾಸ, ಅಭರಣಾದಿಗಳ ವೈಖರಿ ಲೋಹದಲ್ಲಿ ಎರಕ ಹುಯ್ದು ಅಷ್ಟೇ ನಿರ್ಣಯದಿಂದ ರೂಪಿಸುವುದು ಸ್ವಲ್ಪ ಕಷ್ಟ. ಹೊಯ್ಸಳ ಶಿಲ್ಪವೆಲ್ಲಾ ಶಿಲ್ಪಶಾಸ್ತ್ರ ಬದ್ಧವಾಗಿಯೇ ಇದೆ. ಬೇಲೂರಿನ ಚೆನ್ನಕೇಶವಮೂರ್ತಿಯಂತೂ ಅಪರೂಪದ ದಶತಾಳ ಮಾನವನ್ನನುಸರಿಸಿದೆ ಎನ್ನಿಸುತ್ತದೆ. ಲೋಹ ಶಿಲ್ಪವಿಲ್ಲದಿದ್ದ ಮಾತ್ರಕ್ಕೆ ಅದು ಅಸಂಪ್ರದಾಯವಲ್ಲ. ಅಲ್ಲದೆ ಚೋಳಶೈಲಿಯ ವಿಗ್ರಹಗಳಿಗೆ ಹೆಚ್ಚು ಗಿರಾಕಿ ಇದ್ದುದರಿಂದ ಹೊಯ್ಸಳ ಶೈಲಿಗೆ ಕಷ್ಟಪಡಲು ಯಾರೂ ಕೈ ಹಾಕಲಿಲ್ಲವೆನ್ನಬಹುದು' ಎಂದರು.

ಆದರೆ ಕಷ್ಟವಾದರೂ ಈ ಕೆಲಸ ಅಸಾದಯವಲ್ಲವೆಂಬುದನ್ನು ರುಜುವಾತು ಮಾಡಲು ಮೊದಲು ಚಿಕ್ಕ ಚಿಕ್ಕ ವಿಗ್ರಹಗಳನ್ನು ಎರಕ ಹುಯ್ದು ಪರಿಷ್ಕರಿಸಿ ಅನಂತರ ದೊಡ್ಡದಕ್ಕೆ ಕೈಹಾಕಿದರು. ಹಾಗೆ ರಚಿಸಿದವುಗಳಲ್ಲಿ ಒಂದಾದ ನಾಟ್ಯ ಸರಸ್ವತಿ ಕುಶಲಕಲಾ ಕೇಂದ್ರದಲ್ಲಿದೆ. ಅನಂತರ ಇದಕ್ಕಿಂತ ಸ್ವಲ್ಪ ದೊಡ್ಡ ಮೂರ್ತಿಗಳು. ಹೀಗೆ ನಿರ್ಮಿಸಿದ ಹೊಯ್ಸಳ ಶೈಲಿಯ ಚೆನ್ನಕೇಶವ ಮೂರ್ತಿ 1968ರಲ್ಲಿ ಶ್ರೀನಿವಾಸಾಚಾರ್ಯರಿಗೆ ರಾಷ್ಟ್ರೀಯ ಪ್ರಶಸ್ತಿ ತಂದಿತ್ತು. ಇದು ಈಗ ದೆಹಲಿಯ ರಾಷ್ಟ್ರೀಯ ವಸ್ತು ಪ್ರದರ್ಶನಾಲಯದಲ್ಲಿದೆ.

ಇದೇ ರೀತಿಯಲ್ಲಿ ಇನ್ನೊಂದು ಸಮಸ್ಯೆ ಪ್ರಾರಂಭದಲ್ಲಿ ಹೇಳಿದ ಅರ್ಧನಾರೀಶ್ವರ ಮೂರ್ತಿ. ಅದಕ್ಕೂ ಅಂತಹುದೇ ಒಂದು ಪ್ರಚೋದನೆ. ಶಿವ-ಶಕ್ತಿಗಳ ಸಂಕೇತವಾದ ಈ ವಿಗ್ರಹದಲ್ಲಿ ಆಭರಣ ಮತ್ತು ಅಂಗಗಳ ಮೂಲಕ ಪರಸ್ಪರ ಭೇದವನ್ನು ಸೂಚಿಸುವಂತೆಯೇ ಲೋಹದ ಬಣ್ಣದಿಂದ ಇದನ್ನು ಇನ್ನು ಸ್ಪಷ್ಟಪಡಿಸಲು ಸಾಧ್ಯವಿಲ್ಲವೇ? ಇದನ್ನು ಸೂಚಿಸಿದವರು ಸೇನ್ ಗುಪ್ತರು. ಶಿವಸ್ವರೂಪವಾದ ಅರ್ಧ ಭಾಗಕ್ಕೆ ಕೆಂಪು ಅಂದರೆ ತಾಮ್ರ; ಶಕ್ತಿಯ ಭಾಗಕ್ಕೆ ಬಿಳಿಪು ಅಥವಾ ಕಂಚು ಇರುವಂತೆ ಎರಕ ಹುಯ್ದು ಶಿಲ್ಪವನ್ನು ತಯಾರಿಸಲು ಪ್ರಚೋದಿಸಿದರು. ಮೊದಮೊದಲ ಪ್ರಯೋಗಗಳೆಲ್ಲಾ ವಿಫಲವಾದವು. ಏಕೆಂದರ

ಎರಡೂ ಲೋಹಗಳ ಗುಣವೇ ಬೇರೆ. ಕಂಚು ಬೇಗ ಕರಗುತ್ತದೆ, ತಾಮ್ರ ನಿಧಾನ. ಇವುಗಳನ್ನು ಎರಕ ಹುಯ್ದಾದ ಕೆಲವು ವೇಳೆ ಒಂದರೊಳಗೆ ಒಂದು ಹರಡಿಕೊಂಡವು. 'ಈ ಸಮಸ್ಯೆ ಹೇಗೆ ಬಗೆಹರಿಸುವುದೆಂಬ ಯೋಚನೆಯಿಂದ ಅನೇಕ ರಾತ್ರಿ ನನಗೆ ನಿದ್ದೆಯೇ ಬರುತ್ತಿರಲಿಲ್ಲ' ಎನ್ನುತ್ತಾರೆ ಆಚಾರ್ಯರು. ಕೊನೆಗೆ ಅವರ ಮನಸ್ಸಿಗೆ ತೃಪ್ತಿಯಾಗುವಂತೆ ಸಿದ್ಧವೂ ಆಯಿತು.

ಈ ಅಪೂರ್ವ ಅರ್ಧನಾರೀಶ್ವರ ಶಿಲ್ಪವು ಅಚಾರ್ಯರಿಗೆ ಭಾರತದ ಪ್ರಧಾನಿಯವರ ರಾಷ್ಟ್ರೀಯ ಪ್ರಶಸ್ತಿ ತಂದಿತು. ಸ್ವಾತಂತ್ರ್ಯ ರಜತೋತ್ಸವದ ಅಂಗವಾಗಿ ಏರ್ಪಡಿಸಲಾದ ಈ ಪ್ರಶಸ್ತಿಯನ್ನು ಮಾರ್ಚಿ 21ರಂದು ಶ್ರೀನಿವಾಸಾಚಾರ್ಯರು ದೆಹಲಿಯಲ್ಲಿ ಸ್ವೀಕರಿಸಿದರು. ಇಲ್ಲಿ ಒಂದು ವಿಶೇಷ ಸನ್ನಿವೇಶವು ನೆನಪಿಗೆ ಬರುತ್ತದೆ. ಈ ಪ್ರಶಸ್ತಿಗೆ ಕೃತಿಗಳನ್ನು ಆರಿಸಲು ಏರ್ಪಟ್ಟ ಸ್ಥಳೀಯ ಸಮಿತಿಯು ಆಚಾರ್ಯರ ಈ ಅಪೂರ್ವ ಶಿಲ್ಪವನ್ನು ತಿರಸ್ಕರಿಸಿತು. ಕೆಲವು ಹಿತೈಷಿಗಳ ಒತ್ತಾಯದ ಮೇಲೆ ಆಚಾರ್ಯರು ಶಿಲ್ಪವನ್ನು ನೇರವಾಗಿ ಕೇಂದ್ರ ಸಮಿತಿಯ ಪರಿಶೀಲನೆಗೆ ದೆಹಲಿಗೆ ಕಳುಹಿಸಿದರು. ಅಲ್ಲಿ ಕೃತಿಗೆ ಪ್ರಧಾನಿಯವರ ಪ್ರಶಸ್ತಿ ದೊರಕಿತು!

ಶ್ರೀನಿವಾಸಾಚಾರ್ಯರಿಗೆ ಈಚೆಗೆ 60 ವರ್ಷದ ಶಾಂತಿಯಾಯಿತು. 40 ವರ್ಷಗಳಿಗೂ ಮೀರಿ ಶಿಲ್ಪಕಲೆಗೆ ಶ್ರದ್ಧೆ ಮತ್ತು ನಿಷ್ಠೆಯಿಂದ ಕೂಡಿದ ಸೇವೆ. ಪೂರ್ವಿಕರು ಬೆಳೆಸಿಕೊಂಡು ಬಂದ ಕಲೆಯನ್ನು ಸಂಪ್ರದಾಯಕ್ಕೆ ಚ್ಯುತಿ ಬರದಂತೆ ನಿಷ್ಠೆಯಿಂದ ಕಾಪಾಡಿಕೊಂಡು ಬಂದಿದ್ದಾರೆ. ಅದರ ಬಗೆಗೆ ಅಧಿಕಾರವಾಣಿಯಿಂದ ಮಾತನಾಡಬಲ್ಲವರು. ಆದರೆ ಸಂಕೋಚ ಪ್ರವೃತ್ತಿ. ಮಾತೂ ಮಿತ. ಆಡಿದ ಮಾತುಗಳೂ ಪಾಂಡಿತ್ಯ ಪ್ರದರ್ಶನಕ್ಕಿಂತ ಕೆಲಸ ಮಾಡಿ ಪಕ್ವವಾದ ಅನುಭವದಿಂದ ಕೂಡಿದವು. ಮಾತುಗಳ ಮಧ್ಯೆ ಈ ಲೋಹಶಿಲ್ಪದ ಬಗೆಗೆ, ಅದನ್ನು ನಿರ್ಮಿಸುವ ವಿಧಾನ, ಅದರ ನಿಯಮಾವಳಿ ಮತ್ತು ವಿಧಿಗಳು ಮೂಲತಾಃ ಮೇಣದಿಂದ ರಚಿಸಲ್ಪಟ್ಟು ಕೊನೆಗೆ ಪೀಠದ ಮೇಲೆ ಜಡಾಬಂಧನದ ಮೂಲಕ ಪ್ರತಿಷ್ಠೆಯಾಗುವವರೆಗೆ ಬರುವ ನಾನಾ ಘಟ್ಟಗಳೂ ಅವುಗಳ ತತ್ವಗಳೇ ಮೊದಲಾದ ಅಂಶಗಳ ಬಗೆಗೆ ಸ್ವಾರಸ್ಯ ಮತ್ತು ಬೋಧಪ್ರದ ವಿಷಯಗಳಿಂದ ಕೂಡಿರುತ್ತವೆ.

ಅವರ ಬಾಲ್ಯದಲ್ಲಿದ್ದ ಸ್ಥಿತಿಗೂ, ಇಂದಿಗೂ ಈ ಶಿಲ್ಪ ಕ್ಷೇತ್ರದಲ್ಲಿ ಏನಾದರೂ ಬದಲಾವಣೆ ಕಂಡುಬರುತ್ತದೆಯೇ? ಎಂಬ ಪ್ರಶ್ನೆಗೆ 'ನಮ್ಮ ಕಾಲಕ್ಕೆ ಹೋಲಿಸಿ ನೋಡಿದರೆ ಈ ಲೋಹಕರ್ಮವನ್ನು ಬೆಳೆಸಿಕೊಂಡು ಬಂದವರಲ್ಲಿ, ಹತ್ತರಲ್ಲಿ ಒಂಬತ್ತು ಕುಟುಂಬಗಳು ಅದನ್ನು ಬಿಟ್ಟು ಬೇರೆ ಕೆಲಸ ಹುಡುಕಿಕೊಂಡು ಹೋಗಿದ್ದಾರೆ. ಕಾರಣ ಇದನ್ನೇ ಹಿಡಿದಿದ್ದವರಲ್ಲಿ ಬಹುಮಂದಿ ಹೀನಸ್ಥಿತಿಗೆ

ಬಂದಿದ್ದರು. ಸುಖವೂ ಇಲ್ಲ, ಸಮಾಜದಲ್ಲಿ ಆದರವೂ, ಗೌರವವೂ ಇಲ್ಲ. ಈಗ ಸ್ಥಿತಿ ಸ್ವಲ್ಪ ಉತ್ತಮಗೊಂಡಿದೆ' ಎನ್ನುತ್ತಾರೆ ಆಚಾರ್ಯರು.

ಜನರ ಅಭಿರುಚಿ

ಉತ್ತಮಗೊಂಡ ಇಂದಿನ ಸ್ಥಿತಿಯಲ್ಲಿ ಈ ಶಿಲ್ಪಕಲೆ ಚೆನ್ನಾಗಿ ಅಭಿವೃದ್ಧಿಯಾಗುವ ಸೂಚನೆಗಳಿಲ್ಲವೇ? ಈ ಪ್ರಶ್ನೆಗೆ ಅವರೆನ್ನುತ್ತಾರೆ...

'ಇದಕ್ಕೆ ನೇರವಾಗಿ ಉತ್ತರ ಹೇಳುವುದು ಕಷ್ಟ. ಇಂದು ಜನಗಳ ದೃಷ್ಟಿ ಮತ್ತು ಅಭಿರುಚಿ ಎರಡೂ ಬದಲಾಯಿಸಿವೆ. ಹಿಂದೆ ನಮ್ಮ ಭಕ್ತಿ ಮತ್ತು ಪೂಜೆಯ ಸಾಧನೆಗಳಾಗಿದ್ದ ಶಿಲ್ಪಗಳನ್ನು ಇಂದು ಅಲಂಕಾರ ಸಾಮಗ್ರಿಯಾಗಿ ನೋಡಲಾಗುತ್ತಿದೆ. ಶಿಲ್ಪದಲ್ಲಿ ಏನಾದರೂ ಲೋಪವಿದ್ದರೆ ಮಾಡಿದವರಿಗೆ ಮತ್ತು ಮಾಡಿಸಿದವರಿಗೆ ಇಬ್ಬರಿಗೂ ಹಾನಿ ಎಂಬ ನಂಬಿಕೆ ಇದ್ದ ಕಾಲವರು. ಆದುದರಿಂದ ಕೃತಿಗಳು ಶಾಸ್ತ್ರ ಮತ್ತು ಸಂಪ್ರದಾಯಬದ್ಧವಾಗಿ ಲೋಪವಿಲ್ಲದಂತೆ ನಿರ್ಮಿಸಲ್ಪಡುತ್ತಿದ್ದವು. ಈಗ ಮಾಡಿಸುವವರಿಗೆ ಈ ಭಾಗದಲ್ಲಿ ಅಷ್ಟಾಗಿ ನಂಬಿಕೆ ಇಲ್ಲದುದರಿಂದ ಎಷ್ಟೋ ವಿರೋಧಾಭಾಸಗಳಾಗುತ್ತಿವೆ. ವಿಗ್ರಹಗಳ ಆಕಾರ ಮತ್ತು ಅಲಂಕಾರಗಳನ್ನು ಇಂದಿಗೆ ಹೊಂದುವಂತೆ ಬದಲಾಯಿಸುತ್ತಲೂ ಇದ್ದಾರೆ – ಕೆಲವರು. ದೇವತಾ ವಿಗ್ರಹಗಳ ತಾಳ ಮಾನಗಳೆಲ್ಲಾ ಮನುಷ್ಯ ದೇಹದ ಮಾದರಿಯಲ್ಲಿಯೇ ರಚಿತವಾಗಿವೆ ನಿಜ. ಆದರೆ ಅವುಗಳ ವಿನ್ಯಾಸ, ಭಾವ, ಭಂಗಿ, ಮುದ್ರೆ, ಅಲಂಕಾರ ಮುಂತಾದುವುಗಳ ಮೂಲಕ ಈ ಶಿಲ್ಪಗಳು ಮನುಷ್ಯರ ಬದಲು ಬೇರೆಯ ಲೋಕವಾಸಿಗಳೆಂಬ ಭಾವನೆ ಬರುತ್ತದೆ. ಅವುಗಳ ಬಗೆಗೆ ನಮಗೂ ಭಕ್ತಿಯುಂಟಾಗುತ್ತದೆ. ಆದರೆ ಆ ಶಿಲ್ಪಗಳ ಆಕಾರ ಅಲಂಕಾರಗಳನ್ನು ನಮ್ಮ ಸುತ್ತಲೂ ಕಾಣುವ ಜನಗಳಂತೆ ಬದಲಾಯಿಸಿದರೆ ಅದು ಅಸಮಂಜಸವಾಗಿರುತ್ತದೆ. ಹಿಂದಿನ ವಿಗ್ರಹಗಳನ್ನು ನೋಡಿದರೆ ಉಂಟಾಗುವ ಉದಾತ್ತ ಭಾವನೆ ಬರುವುದಿಲ್ಲ. ಆದರೂ ಕೆಲವು ಮಂದಿ ಅದಕ್ಕೆ ತಿರುಗಿದ್ದಾರೆ. ಮಾಡಿಸುವವರೂ ಇದ್ದಾರೆ' ಎಂದರು. ಶ್ರೀನಿವಾಸಾಚಾರ್ಯರ ಮಾತಿನಲ್ಲಿ ಸಂಪ್ರದಾಯನಿಷ್ಠೆ ಸ್ಪಷ್ಟವಾಗಿ ಅನುಭವವಾಗುತ್ತದೆ. ಹಾಗೆಯೇ ಸತ್ಯಾಂಶವೂ ಇದೆ ಎನ್ನಬಹುದು.

*

ಕೃಪೆ: ಸುಧಾ ವಾರಪತ್ರಿಕೆ 1973

ಪ್ರಯೋಗಶೀಲ ಲೋಹ ಶಿಲ್ಪಿ

– ಮುಳಹಳ್ಳಿ ಸೂರಿ

ಅತ್ಯಂತ ಕ್ಲಿಷ್ಟವಾದ ಹೊಯ್ಸಳ ಶಿಲ್ಪಕಲಾ ಶೈಲಿಯನ್ನು ಲೋಹ ಮಾಧ್ಯಮದಲ್ಲಿ ರಚಿಸಿ ಹೊಸ ಸಂಪ್ರದಾಯವನ್ನೇ ಸೃಷ್ಟಿಸಿದವರು ಶ್ರೀನಿವಾಸಾಚಾರ್ಯ. ಸೂಕ್ಷ್ಮ ಕುಸುರಿ ಕೆಲಸವೇ ಪ್ರಧಾನವಾಗಿರುವ ಹೊಯ್ಸಳ ಶೈಲಿಯ ಲೋಹಕೃತಿಗಳ ರಚನೆ ಅಪರೂಪವಾಗಿದ್ದ ಕಾಲದಲ್ಲಿ ಆಗಮ ಹಾಗೂ ಶಿಲ್ಪಶಾಸ್ತ್ರಗಳಿಗೆ ಅನುಗುಣವಾಗಿ ಸುಂದರ ಹಾಗೂ ಭವ್ಯ ಕೃತಿಗಳನ್ನು ರಚಿಸಿ ಭಾರತೀಯ ಶಿಲ್ಪಕಲಾ ಲೋಕಕ್ಕೆ ವಿನೂತನ ಆಯಾಮ ನೀಡಿದವರು ಅವರು.

ಜನನ 1913. ಮಂಡ್ಯ ಜಿಲ್ಲೆ ನಾಗಮಂಗದಲ್ಲಿ. ತಂದೆ ಪುಟ್ಟಾಚಾರ್ಯ. ದೊಡ್ಡಪ್ಪ ವೆಂಕಟಾಚಾರ್ಯ. ಚಿಕ್ಕಪ್ಪ ಚಿಕ್ಕಾಚಾರ್ಯ ಹಾಗೂ ಗುರುಗಳಾದ ಶ್ರೀಕಂಠಾಚಾರ್ಯ ಅವರ ಗರಡಿಯಲ್ಲಿ ಲೋಹಶಿಲ್ಪದ ಮೊದಲ ಪಾಠಗಳನ್ನು ಕರಗತ ಮಾಡಿದಂಡ ಅವರು ತಮ್ಮ 22ನೇ ಪ್ರಾಯದಲ್ಲೇ ಮೈಸೂರ ಒಡೆಯರ ಪ್ರೀತಿಗೆ ಪಾತ್ರರಾದರು. ಮೈಸೂರು ಅರಮನೆ ಆವರಣದಲ್ಲಿರುವ ಭುವನೇಶ್ವರಿ ದೇವಾಲಯದ ಉತ್ಸವಮೂರ್ತಿ, ಪರಕಾಲ ಮಠದ ಬೆಳ್ಳಿಯ ಹಯಗ್ರೀವ ಮೂರ್ತಿ ಹಾಗೂ ಅರಮನೆಯಲ್ಲಿನ ವಿಶ್ವವಿಖ್ಯಾತ ಸಿಂಹಾಸನದ ಮೆಟ್ಟಿಲುಗಳ ಇಕ್ಕೆಡೆಗಳಲ್ಲಿನ ಎರಡು ಬೆಳ್ಳಿಯ ಚಾಮರಧಾರಿಣಿಯರು (ಚಾಮರ ಬೊಂಬೆಗಳು), ಧರ್ಮಸ್ಥಳದ ಸರಸ್ವತಿ ಮೂರ್ತಿ, ಬದರಿ ದೇವಾಲಯದ ದ್ವಾರಪಾಲಕರು ಹಾಗೂ ಭರತಪುರದ ಮಹಾರಾಜರಿಗೆಂದೇ 300 ತೊಲ ಚಿನ್ನದಲ್ಲಿ ಅಂಬೆಗಾಲು ಕೃಷ್ಣನನ್ನು ರಚಿಸಿಕೊಟ್ಟ ಕೀರ್ತಿ ಶ್ರೀನಿವಾಸಾಚಾರ್ಯರಿಗೆ ಸಂದಿದೆ.

ಬೆಳ್ಳಿ ಹಾಗೂ ಹಿತ್ತಾಳೆಯಲ್ಲಿ ಇವರು ಸಂಪ್ರದಾಯಬದ್ಧವಾಗಿದ್ದರೂ ಹೊಸತನವನ್ನೇ ಮೇಳೈಸುವ ದೇವಾಲಯಗಳ ಬಾಗಿಲುವಾಡ, ಧ್ವಜಸ್ತಂಭಗಳು, ನಂದಿಕಂಬ, ಅಲಂಕಾರಿಕ ಪ್ರಭಾವಳಿಗಳು ಪೂಜಾದಿ ಉತ್ಸವಗಳಲ್ಲಿ ಬಳಸುವ ವಿಶೇಷ ವಸ್ತುಗಳನ್ನು ಶ್ರೀನಿವಾಸಾಚಾರ್ಯರು ಬಹಳ ಪರಿಶ್ರಮದಿಂದ ವಿಶಿಷ್ಟ ಶೈಲಿಯಲ್ಲಿ ರಚಿಸಿದರು.

ಮರ, ಚಿನ್ನ, ಬೆಳ್ಳಿ ಅಥವಾ ಪಂಚಲೋಹ ಶಿಲ್ಪವೆಂದರೆ ಶ್ರೀನಿವಾಸಾಚಾರ್ಯರಿಗೆ ಮೀನು ನೀರಿಗಿಳಿಯುವಷ್ಟೇ ಸುಲಲಿತ. ಲೋಹ ಶಿಲ್ಪ ಕ್ಷೇತ್ರದ ಅಧ್ವರ್ಯು ಎಂಬ ಖ್ಯಾತಿಗೆ ಪಾತ್ರರಾದ ಆಚಾರ್ಯರದು ಬಹಳ ಮೃದು ಸ್ವಭಾವವಾಗಿತ್ತು. ಯಾರಿಗೂ ನೋವಾಗುವಂತೆ ಅವರು ಮಾತನಾಡುತ್ತಿರಲಿಲ್ಲ. ಆದರೆ ಶಾಸ್ತ್ರಕ್ಕೆ ಚ್ಯುತಿ ಬಂದರೆ ಅವರು ಒಂದು ಕ್ಷಣವೂ ಸುಮ್ಮನೆ ಕುಳಿತಿರುತ್ತಿರಲಿಲ್ಲ. ಆಗಮ ಹಾಗೂ ಶಿಲ್ಪ ಶಾಸ್ತ್ರ ಸೂತ್ರಗಳನ್ನು ಅರೆದು ಕುಡಿದಿದ್ದ ಆಚಾರ್ಯರು ಪ್ರಯೋಗಶೀಲತೆಗೆ ಇನ್ನೊಂದು ಹೆಸರಾಗಿದ್ದರು ಎಂಬುದು ಗಮನಾರ್ಹ.

ಶಾಸ್ತ್ರದ ಚೌಕಟ್ಟಿನಲ್ಲೇ ಪ್ರಯೋಗಗಳನ್ನು ನಡೆಸಲು ಸಾಧ್ಯವೆಂದು ಸಾಧಿಸಿ ತೋರಿಸುತ್ತಿದ್ದರು. ಶಿಲ್ಪಕಲೆಗೆ ಸಂಬಂಧಪಟ್ಟ ಯಾವುದೇ ಸವಾಲನ್ನು ಸ್ವೀಕರಿಸಲು ಅವರು ಸಿದ್ಧರಿದ್ದರು. ಹೀಗಾಗಿಯೇ ಅವರು 1957ರಲ್ಲಿ ಬೆಂಗಳೂರಿನ ಪ್ರಾದೇಶಿಕ ವಿನ್ಯಾಸ ಮತ್ತು ತಾಂತ್ರಿಕ ಕೇಂದ್ರದಲ್ಲಿ ಶಿಲ್ಪ ಕಲಾ ನಿಪುಣರಾಗಿ ಕಾರ್ಯನಿರ್ವಹಿಸಲು ನೇಮಕಗೊಂಡಾಗ ಅಲ್ಲಿನ ಅಧಿಕಾರಿಯ 'ಹೊಯ್ಸಳ ಶೈಲಿಯಲ್ಲಿ ಹೇಳಿಕೊಳ್ಳುವಂಥ ಲೋಹಕೃತಿಗಳಿಲ್ಲ' ಎಂಬ ಮಾತನ್ನು ಸವಾಲಾಗಿ ಸ್ವೀಕರಿಸಿ ಹಲವಾರು ಕೃತಿಗಳನ್ನು ವಿವಿಧ ಲೋಹ ಮಾಧ್ಯಮಗಳಲ್ಲಿ ಹೊಯ್ಸಳ ಶೈಲಿಯಲ್ಲೇ ರಚಿಸಿ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿದರು.

'ಕುಸುರಿ ಕೆಲಸ ಹೆಚ್ಚಾಗಿರುವ ಹೊಯ್ಸಳ ಶಿಲ್ಪವು ರಚನೆಗೆ ಕ್ಲಿಷ್ಟವೆಂದು ಲೋಹ ಮಾಧ್ಯಮದಲ್ಲಿ ಕೃತಿ ರಚನೆ ಮಾಡುವಲ್ಲಿ ಶಿಲ್ಪಿಗಳು ಹಿಂದೆ ಸರಿದಿದ್ದಾರೆಯೇ ವಿನಹಾ ಚೋಳ ಶೈಲಿ ಮಾತ್ರ ಶ್ರೇಷ್ಠವಾದುದು ಎಂಬ ಪರಿಕಲ್ಪನೆಯೇ ತಪ್ಪು' ಎಂದು ಆಚಾರ್ಯರು ನವಪೀಳಿಗೆಯ ಕಲಾವಿದರಿಗೆ ಸಾರಿ ಹೇಳುತ್ತಿದ್ದರು.

ದ್ವಿಲೋಹ ಕೃತಿ ರಚನೆ

ಪುರಾತನ ಕಾಲದಲ್ಲಿ ಅಸ್ತಿತ್ವದಲ್ಲಿತ್ತು ಎನ್ನಲಾದ ದ್ವಿಲೋಹ ಕೃತಿ ರಚನೆಯಲ್ಲಿ ಆಚಾರ್ಯರು ಸಿದ್ಧಹಸ್ತರಾಗಿದ್ದರು. ಇಂಥ ಒಂದು ಪ್ರಯೋಜನವನ್ನು ಅವರು 'ಅರ್ಧನಾರೀಶ್ವರ' ಕೃತಿಯಲ್ಲಿ ಸಾಧಿಸಿ ರಾಷ್ಟ್ರದೆಲ್ಲೆಡೆ ಕೀರ್ತಿವಂತರಾದರು. ಪ್ರಕೃತಿ ಮತ್ತು ಪುರುಷನನ್ನು ಎರಡು ಪ್ರತ್ಯೇಕ ಲೋಹಗಳನ್ನು ಬಳಸಿ ಆದರೆ ಒಂದೇ ಕೃತಿಯಲ್ಲಿ ಬಿಂಬಿಸುವುದರಲ್ಲಿ ಯಶಸ್ವಿಯಾಗಿ 'ದ್ವಿಲೋಹ ಶಿಲ್ಪಕೃತಿ' ರಚನೆಯಲ್ಲಿ ಕ್ರಾಂತಿಕಾರಕ ಪ್ರಯೋಗ ಪ್ರವೀಣರೆನಿಸಿಕೊಂಡರು.

ಬೇರೆ ಬೇರೆ ಉಷ್ಣಾಂಶದಲ್ಲಿ ಹದಗೊಳ್ಳುವ ಎರಡು ವಿಭಿನ್ನ ಲೋಹಗಳನ್ನು

(ಉದಾಹರಣೆಗೆ: ತಾಮ್ರ ಮತ್ತು ಕಂಚು) ಬಳಸಿ ಅರ್ಧನಾರೀಶ್ವರ ಕೃತಿ ರಚಿಸುವುದು ಸುಲಭದ ಕಾರ್ಯವಲ್ಲ. ವಿಭಿನ್ನ ಲೋಹಗಳನ್ನು ಬೆಸುಗೆ ಅಥಾವ ತಳಕು ಹಾಕಿದ ಮೇಲೆ ಎದ್ದುಕಾಣುವ ಒರಟು ಕೂಡುಗೆರೆಯ ದೋಷವನ್ನು ನಿವಾರಿಸಿ, ಸೂಕ್ಷ್ಮಾತಿಸೂಕ್ಷ್ಮ ಕಲಾ ನೈಪುಣ್ಯತೆಯಿಂದ ಅಪರೂಪದ ಕೃತಿಯನ್ನು ಶ್ರೀನಿವಾಸಾಚಾರ್ಯರು ರಚಿಸಿಕೊಟ್ಟಿರುವುದು ಕರ್ನಾಟಕಕ್ಕಷ್ಟೇ ಅಲ್ಲ ಇಡೀ ಭಾರತಕ್ಕೆ ಒಂದು ದೊಡ್ಡ ಕೊಡುಗೆ.

ಪುರುಷ ಭಾಗವನ್ನು ಬಲಿಷ್ಠ ಸ್ನಾಯುಗಳೊಂದಿಗೆ, ಗಂಭೀರವಾಗಿ ವಿಜೃಂಭಿಸುವ ಕಂಚಿನಲ್ಲಿ ಹಾಗೂ ಪ್ರಕೃತಿ ಭಾಗವನ್ನು ಥಳಥಳಿಸುವ ತಾಮ್ರದಲ್ಲಿ ಮೋಹಕ ರೀತಿಯಲ್ಲಿ ಅಭಿವ್ಯಕ್ತಿಗೊಳಿಸಿರುವ ಶ್ರೀನಿವಾಸಾಚಾರ್ಯದ ಕಲಾ ಪ್ರೌಢಿಮೆಗೆ 1973ರಲ್ಲಿ ಅಖಿಲ ಭಾರತ ಪ್ರಶಸ್ತಿ ಲಭಿಸಿತು. ಈ ಅರ್ಧ ನಾರೀಶ್ವರ ಕೃತಿ ಚೋಳಶೈಲಿಯಲ್ಲಿದ್ದು ದೆಹಲಿಯ ಕರಕುಶಲ ವಸ್ತುಸಂಗ್ರಹಾಲಯದಲ್ಲಿ ಶಾಶ್ವತ ಪ್ರದರ್ಶನದಲ್ಲಿ ದೇಶವಿದೇಶಗಳ ಕಲಾರಸಿಕರನ್ನು ಆಕರ್ಷಿಸುತ್ತಿದೆ.

ವೀಣಾಪಾಣಿ

ಶ್ರೀನಿವಾಸಾಚಾರ್ಯರು ತಮ್ಮ ಲೋಹಶಿಲ್ಪ ಪ್ರಯೋಗಶೀಲತೆಯಲ್ಲಿ ಎಂದೂ ಹಿಂದೆ ಸರಿಯಲಿಲ್ಲ. ಅರ್ಧನಾರೀಶ್ವರ ಕೃತಿಯ ನಂತರ ಇನ್ನೊಂದು ದ್ವಿಲೋಹ ಕೃತಿ ವೀಣಾಪಾಣಿಯನ್ನು ರಚಿಸಿದರು. ಹೊಯ್ಸಳ ಶೈಲಿಯ ಈ ಕೃತಿಯಲ್ಲಿ ಮೂರ್ತಿಯ ದೇಹವೆಲ್ಲಾ ತಾಮ್ರದ್ದು ಆದರೆ ಕಂಠಹಾರ, ಡಾಬು, ಬಳೆಗಳು, ಉಂಗುರಗಳು ಹಾಗೂ ಕಿವಿ ಆಭರಣಗಳು ಮತ್ತು ವಸ್ತ್ರ ವಿನ್ಯಾಸವನ್ನು ಬಂಗಾರದ ಹೊಳಪು ಸೂಸುವ ಹಿತ್ತಾಳೆಯಲ್ಲಿ ಎರಕ ಹೊಯ್ದು ರೂಪಿಸಲಾಗಿದೆ. ಕಂಚಿನಲ್ಲಿ ನಿರ್ಮಿಸಿದ ಚನ್ನಕೇಶವ, ಚೋಳ ರಾಣಿ, ನಾಟ್ಯ ಸರಸ್ವತಿ, ಹರಿಹರ, ಮದನಿಕೆ – ಕಪಟ ಭೈರವಿ ಅಪರೂಪದ ತ್ವಷ್ಟ ಬ್ರಹ್ಮ ಕೃತಿಗಳು ಆಚಾರ್ಯರು ಶಿಲ್ಪಕಲಾ ಲೋಕಕ್ಕೆ ನೀಡಿರುವ ಅಮೂಲ್ಯ ಕೊಡುಗೆ ಎಂದೇ ಕಲಾ ವಿಮರ್ಶಕರು ಅಭಿಪ್ರಾಯ ಪಡುತ್ತಾರೆ.

ಆದರ್ಶಪ್ರಾಯ ಕಲಾವಿದ

ಶಾಸ್ತ್ರಬದ್ಧ ಹಾಗೂ ಶ್ರೇಷ್ಠ ರೀತಿಯಲ್ಲಿ ಸರ್ವಾಂಗ ಸುಂದರ ಕೃತಿಗಳನ್ನೇ ರಚಿಸುವುದು ತಮ್ಮ ಬದುಕಿನ ಪರಮಧ್ಯೇಯ ಎಂದು ಹೇಳುತ್ತಿದ್ದ ಶ್ರೀನಿವಾಸಾಚಾರ್ಯರು ಅಗ್ಗದ ಪ್ರಚಾರ ಹಾಗೂ ರೊಕ್ಕದ ಆಸೆಗೆ ಬಲಿಯಾಗದೆ

ನೋವು ನಲಿವಿಗೆ ಕುಗ್ಗದೆ-ಹಿಗ್ಗದೆ, ವಕ್ರಮಾರ್ಗಗಳನ್ನು ಖಂಡಿಸುತ್ತಾ, ಯಾವುದಕ್ಕೂ ರಾಜಿಯಾಗದೆ ಉತ್ತುಂಗಕ್ಕೆ ಏರಿದರು. ಅವರ ಕಲಾನಿಷ್ಠೆ ಪರಿಶ್ರಮ ಹೊಸ ಜನಾಂಗದ ಕಲಾವಿದರಿಗೆ ಆದರ್ಶಪ್ರಾಯ. ಆಚಾರ್ಯರು 1989ರ ಸೆಪ್ಟೆಂಬರ್‌ನಲ್ಲಿ ಬೆಂಗಳೂರಿನ ವೆಂಕಟಪ್ಪ ಚಿತ್ರಶಾಲೆಯಲ್ಲಿ ನಡೆದ ವೆಂಕಟಪ್ಪ ಚಿತ್ರಶಾಲೆಯಲ್ಲಿ ನಡೆದ ಶಿಲ್ಪೋತ್ಸವದ ಸಮ್ಮೇಳನಾಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಆ ಸಂದರ್ಭದಲ್ಲಿ ಅವರು ಮಾಡಿದ ಅಧ್ಯಕ್ಷ ಭಾಷಣ ನಮ್ಮ ಪರಂಪರಾನುಗತವಾದ ಶಿಲ್ಪಕಲೆಯ ಆಗುಹೋಗುಗಳನ್ನು ಯುವ ಪೀಳಿಗೆಯ ಶಿಲ್ಪಿಗಳು ಅನುಸರಿಸಬೇಕಾದ ಮಾರ್ಗಗಳನ್ನು ಸೂಚಿಸಿದ. ಅವರು ಶಿಲ್ಪಕಲೆಯ ಬಗ್ಗೆ ತಳೆದಿದ್ದ ಕಳಕಳಿ ಹಾಗೂ ಶ್ರದ್ಧೆಗೆ ಅವರಾಡಿದ ತೂಕದ ಮಾತುಗಳೇ ಸಾಕ್ಷಿ.

'ಶಿಲ್ಪವು ಕೇವಲ ಪ್ರತಿಮಾ ರಚನೆಗೆ ಸೀಮಿತವಾದುದಲ್ಲ. ರಥಶಿಲ್ಪ, ಆಲಯ ಶಿಲ್ಪ, ಆಯುಧ ಶಿಲ್ಪ, ಚಿತ್ರ ಶಿಲ್ಪ ಹಾಗೂ ಇಂದು ಎಂಜಿನಿಯರ್ ಎನಿಸಿಕೊಳ್ಳುವ, ತಂತ್ರಶಾಸ್ತ್ರವೂ ಸಹ ಶಿಲ್ಪಶಾಸ್ತ್ರದ ಭಾಗವೇ ಆಗಿದೆ. ಇಡೀ ಭಾರತವೇ ಒಂದು ಅವರ್ಣನೀಯ ಶಿಲ್ಪ ಸಾಮ್ರಾಜ್ಯದ ಭಂಡಾರದಂತಿದೆ' ಎಂಬುದು ಆಚಾರ್ಯರು ಭಾರತೀಯ ಶಿಲ್ಪಕಲೆಯನ್ನು ಅಸಡ್ಡೆಯಿಂದ ನೋಡುವವರಿಗೆ ನೀಡುತ್ತಿದ್ದ ಉತ್ತರ.

ವಿಧವಿಧವಾದ ಲಕ್ಷಣಗಳುಳ್ಳ ಚಾಲುಕ್ಯ, ಕದಂಬ, ಹೊಯ್ಸಳ, ಚೋಳ, ಪಲ್ಲವ, ವಿಜಯನಗರ ಎಂಬ ಪ್ರತ್ಯೇಕ ಶೈಲಿಗಳ ಶಿಲ್ಪ ವೈಭವವನ್ನು ಪಾಶ್ಚಾತ್ಯ ವಿದ್ವಜ್ಜನರೂ ಅಗಾಧ ಅಪರಿಮಿತ, ಅಗಣಿತ ಕಲಾಸಂಪತ್ತೆಂದು ಶ್ಲಾಘಿಸಿ, ಪ್ರೌಢಗ್ರಂಥಗಳನ್ನು ರಚಿಸಿರುವುದನ್ನು ಉಲ್ಲೇಖಿಸುತ್ತಿದ್ದ ಆಚಾರ್ಯರು 'ಆದರೆ ಇಂದಿನ ಪರಿಸ್ಥಿತಿ ತೀರಾ ಬದಲಾಗಿದೆ. ಇಂದಿನ ಲೋಕಧರ್ಮದ ವ್ಯವಹಾರಗಳ ಒತ್ತಡಗಳಿಂದ ಬೇರೆ ದಾರಿ ಹಿಡಿದಿರುವ ನಮ್ಮ ಜನರಲ್ಲಿ ಭಾರತೀಯ ಶಿಲ್ಪದ ಅಲೌಕಿಕ ಸೌಂದರ್ಯದ ಪರಿಚಯ ಕ್ಷೀಣವಾದಂತಿದೆ. ಭಾರತೀಯ ಶಿಲ್ಪ ಸೊಬಗು ಅನಿರ್ವಚನೀಯ ಆನಂದ ನೀಡುವುದೆಂಬ ಪರಿಕಲ್ಪನೆಯೂ ನಮ್ಮವರಲ್ಲಿ ಈಗ ಇಲ್ಲವಾಗಿರುವುದು ದುರ್ದೆಸೆ ಎಂದು ಆಚಾರ್ಯರು ಮರುಗಿದ್ದುಂಟು.

'ವಿಷ್ಣುವಿಗೆ ಗಿರಿಜಾ ಮೀಸೆ ಇಡಿ. ನಾರಾಯಣನಿಗೆ ಪುಷ್ಟವಾದ ಹೊಟ್ಟೆಯನ್ನು ತೋರಿಸಿ. ದೇವತೆಯರ ಆಭರಣ ವಸ್ತ್ರವಿನ್ಯಾಸವೆಲ್ಲಾ ಇಂದಿನ ಸಿನಿಮಾ ತಾರೆಯರು ಬಳಸುವಂತಿರಲಿ' ಎಂದು ಸಲಹೆ ಮಾಡುವ ಬಹುಮಂದಿ ತಮ್ಮ ಬಳಿಗೆ ಬಂದು ಶಾಪ ಹಾಕಿಸಿಕೊಂಡು ಹೋದ ಬಗ್ಗೆಯೂ ಆಚಾರ್ಯರು ನೋವಿನಿಂದ ನುಡಿದಿದ್ದರು. ನಮ್ಮ ಮಠಗಳಲ್ಲೂ, ದೇವಾಲಯಗಳಲ್ಲೂ,

ಯಜಮಾನ್ಯ ಗುರುಹಿರಿಯರಲ್ಲೂ ಸಹ ಶಿಲ್ಪಶಾಸ್ತ್ರದ ಬಗ್ಗೆ ಪ್ರಖರವಾದ ಜ್ಞಾನ ಕಂಡುಬರುತ್ತಿಲ್ಲ' ಎಂದೂ ಆಚಾರ್ಯರು ವ್ಯಥೆ ಪಡುತ್ತಿದ್ದರು. ಆಚಾರ್ಯರ ಇಂಥ ಮುಲಾಜಿಲ್ಲದ ನೇರ ಮಾತಿಗೆ ಕೆಲವಲರು ತಿರುಗಿ ಬಿದ್ದರೂ, ಸವಾಲು ಹಾಕಲು ಅವರಲ್ಲಿ ಸಾಮರ್ಥ್ಯವಿರುತ್ತಿರಲಿಲ್ಲ. ಹೀಗಾಗಿ ಅವರೆಲ್ಲಾ ತೆಪ್ಪಗಾಗಬೇಕಾಯಿತು!

'ಕಲಾ ತಪಸ್ವಿಗಳ ಸಾಧನಾ ಸಂಪತ್ತಿನ ಹಿರಿಮೆಯನ್ನು ಅರ್ಥ ಮಾಡಿಕೊಳ್ಳದೆ ಉದಾಸೀನದಿಂದ ವರ್ತಿಸುವುದು ದುಃಖದ ಸಂಗತಿ. ಇದೆಲ್ಲಾ ಇಂದಿನ ಪ್ಲಾಸ್ಟಿಕ್ ಯುಗದ ಜಲ್ಲಿಕಾಗದದ ಸಂಸ್ಕೃತಿಯ ಪ್ರಭಾವ. ಇದರಿಂದ ನಾವು ಎದೆಗುಂದಬಾರದು. ಭಾರತದ ಉಜ್ವಲ ಕಲಾಪರಂಪರೆ ಹಾಗೂ ಅಮೋಘ ಸಾಧನೆಗಳನ್ನು ಸಾಧ್ಯವಾದಷ್ಟೂ ಪರಿಚಯ ಮಾಡಿಕೊಟ್ಟು ಅವರನ್ನು ಆವರಿಸಿರುವ ಅಂಧಕಾರದಿಂದ ಪಾರುಮಾಡುವ ಕೆಲಸವೂ ನಮ್ಮದಾಗಿದೆ. ಕಲಾ ರಸಿಕರ ಸಮೂಹಕ್ಕೆ ಜ್ಞಾನೋದಯ ಮಾಡಿಸುವ ಸನ್ನಾಹ ಜರುಗದೆ ಜನತೆಯಲ್ಲಿ ನಮ್ಮ ಶಿಲ್ಪಕಲೆಯ ಬಗ್ಗೆ ಆಕರ್ಷಣೆ ಮತ್ತು ಅಭಿಮಾನಗಳು ಹೆಚ್ಚುವ ಸಾಧ್ಯತೆಗಳಿಲ್ಲ' ಎಂದು ಹೇಳುತ್ತಿದ್ದ ಶ್ರೀನಿವಾಸಾಚಾರ್ಯರು ಜನಸಾಮಾನ್ಯರಲ್ಲಿ ಶಿಲ್ಪಕಲೆಯ ಬಗ್ಗೆ ಅಭಿಮಾನ ಮೂಡಿಸುವತ್ತಲೂ ನಿರಂತರ ಶ್ರಮಿಸಿದರು.

1968 ಮತ್ತು 1973ರಲ್ಲಿ ಕೇಂದ್ರ ಸರ್ಕಾರದ ಅಖಿಲ ಭಾರತ ಪ್ರಶಸ್ತಿ, 1982ರಲ್ಲಿ ಯುವ ಬರಹಗಾರರು ಮತ್ತು ಕಲಾವಿದರ ಗಿಲ್ಡ್‌ನಿಂದ ಸನ್ಮಾನ. 1989ರಲ್ಲಿ ಶಿಲ್ಪಕಲಾ ಪ್ರತಿಷ್ಠಾನ, 1991ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಅವರಿಗೆ ದೊರೆತಿತ್ತು.

ಕರ್ನಾಟಕದವರಾಗಿದ್ದರಿಂದಲೋ ಏನೋ ಇತರ ರಾಜ್ಯಗಳ ಕಲಾಕಾರರಂತೆ ಶ್ರೀನಿವಾಸಾಚಾರ್ಯರು ವಿಶ್ವವಿಖ್ಯಾತರಾಗಲಿಲ್ಲ. ಕನ್ನಡಿಗರ ಆಭಿಮಾನ್ಯ ಶೂನ್ಯವೂ ಇದಕ್ಕೆ ಕಾರಣವಿರಬಹುದು. ಆಚಾರ್ಯರು ತಮ್ಮ ಪರಂಪರಾನುಗತವಾದ ಲೋಹಶಿಲ್ಪ ಕಲೆಯನ್ನು ಮಕ್ಕಳಿಗೆ, ಹಲವಾರು ಮಂದಿ ಶಿಷ್ಯರಿಗೆ ಧಾರೆ ಎರೆದಿದ್ದಾರೆ.

ಕೃಪೆ: ಪ್ರಜಾವಾಣಿ



ಶ್ರೀಮತಿ ಶಾರದಮ್ಮ ಮತ್ತು ಎನ್.ಪಿ. ಶ್ರೀನಿವಾಸಾಚಾರ್ಯರು



ಮೈಸೂರಿನ ಭುವನೇಶ್ವರಿಯ ಉತ್ಸವಮೂರ್ತಿ



ತ್ವಷ್ಟೃ ಬ್ರಹ್ಮ



ನಾಟ್ಯ ಸರಸ್ವತಿ



ಕೊಳಲು ಕೃಷ್ಣ



ಧರ್ಮಸ್ಥಳದಲ್ಲಿರುವ ಸರಸ್ವತಿ



ಚನ್ನಕೇಶವ



ಹರಿಹರ



ವೀಣಾಪಾಣಿ



ಅಪೂರ್ಣ ಶಿಲ್ಪ



ಮೇಣದ ವಿಗ್ರಹಗಳು



ಶಿಲೆಯ ನವಗ್ರಹ, ಗೊಂಡೇನಹಳ್ಳಿ



ಗೊಂಡೇನಹಳ್ಳಿಯ ಸೂರ್ಯನಾರಾಯಣಸ್ವಾಮಿಯ ಸಾರಥಿ ಅರುಣ ಹಾಗೂ ಅಶ್ವಗಳು



ಪರಕಾಲಮಠದ ಹಯಗ್ರೀವ



ಪಂಚಲೋಹದ ದಸರಾ ಚಾಮುಂಡೇಶ್ವರಿ



ಧರ್ಮಸ್ಥಳದಲ್ಲಿಯ ಬೆಳ್ಳಿರಥದ ಪ್ರಭಾವಳಿ







ಚೋಳರಾಣಿ




ವಿಶ್ವಕರ್ಮ ಕಾಳಿಕಾಂಬ ಕಮಠೇಶ್ವರಿ ದೇವಸ್ಥಾನ, ಮೈಸೂರು



ಲಲಿತಕಲಾ ಅಕಾಡೆಮಿಯ ಗೌರವ ಪ್ರಶಸ್ತಿ



ದಿನಾಂಕ 21.3.1973ರಂದು ನವದೆಹಲಿಯ ನ್ಯಾಷನಲ್ ಮ್ಯೂಸಿಯಂನಲ್ಲಿ
ಶ್ರೀಮತಿ ಇಂದಿರಾ ಗಾಂಧಿಯವರು 'ಅರ್ಧನಾರೀಶ್ವರ' ವಿಗ್ರಹವನ್ನು ನೋಡುತ್ತಿರುವುದು







ಚಾಮರದ ಬೊಂಬೆಗಳು – ರೇಖಾಚಿತ್ರ ಮತ್ತು ಶಿಲ್ಪಗಳು



ಎನ್.ಎಸ್. ಜನಾರ್ಧನಮೂರ್ತಿ ಹಾಗೂ ಶ್ರೀನಿವಾಸಾಚಾರ್ಯರು ಅಂಬಾರಿಯ ಚಾಮುಂಡೇಶ್ವರಿ ಉತ್ಸವಮೂರ್ತಿಯೊಂದಿಗೆ



ಶಿಲ್ಪೋತ್ಸವ 1989, ಬೆಂಗಳೂರು



ಶ್ರೀನಿವಾಸಾಚಾರ್ಯರ ಹಸ್ತಾಕ್ಷರ

ಸಂಪಂಗಿರಾಮನಗರದ ಮನೆ ಹಾಗೂ ವರ್ಕ್‌ಶಾಪ್







ಕವಿತ ಡಿ.ಕೆ.



ಶಿಲ್ಪಿ ಎನ್.ಪಿ. ಶ್ರೀನಿವಾಸಾಚಾರ್ಯ ಅವರ ಮೊಮ್ಮಗಳಾದ ಕು. ಕವಿತ ಡಿ.ಕೆ. ಅವರು ದೃಶ್ಯ ಕಲೆಯಲ್ಲಿ ಎಂ.ವಿ.ಎ. ಪದವಿ ಮತ್ತು ಎಂ.ಫಿಲ್. ಪಡೆದಿದ್ದಾರೆ. ಸ್ವತಹಾ ಚಿತ್ರಕಲಾವಿದರೂ ಆಗಿರುವ ಇವರು ಬೆಂಗಳೂರು ವಿಶ್ವವಿದ್ಯಾಲಯದ ಚಿತ್ರಕಲಾ ವಿಭಾಗದ ಸ್ನಾತಕೋತ್ತರ ವಿಭಾಗದಲ್ಲಿ ಮತ್ತು ವಿವಿಧ ಕಾಲೇಜುಗಳಲ್ಲಿ ಕಲಾ ಉಪನ್ಯಾಸಕರಾಗಿ ಕೆಲಸ ಮಾಡಿದ್ದಾರೆ. ಅನೇಕ ಸಂಶೋಧನಾತ್ಮಕ ಪ್ರಬಂಧಗಳನ್ನು ಬರೆದಿದ್ದಾರೆ. ಹವ್ಯಾಸ ಛಾಯಾಗ್ರಾಹಕರಾಗಿ ಹೆಸರು ಮಾಡಿದ್ದು ಅವುಗಳ ಪ್ರದರ್ಶನವೂ ನಡೆದಿದೆ. ಚಿತ್ರಕಲಾ ಪರಿಷತ್, ವೆಂಕಟಪ್ಪ ಆರ್ಟ್ ಗ್ಯಾಲರಿ ಮುಂತಾದೆಡೆಗಳಲ್ಲಿ ಇವರ ಚಿತ್ರಕಲೆ ಮತ್ತು ಇನ್‌ಸ್ಟಲೇಷನ್ ಪ್ರದರ್ಶನಗಳು ನಡೆದು ಜನರ ಮತ್ತು ವಿಮರ್ಶಕರ ಮೆಚ್ಚುಗೆ ಗಳಿಸಿವೆ. ಅನೇಕ ಸರ್ಕಾರಿ ಮತ್ತು ಪ್ರತಿಷ್ಠಿತ ಖಾಸಗೀ ಸಂಸ್ಥೆಗಳಿಗೆ ಇವರು ಲೋಗೋ ನಿರ್ಮಿಸಿ ಕೊಟ್ಟಿದ್ದಾರೆ. ಗ್ರಾಫಿಕ್ ಡಿಸೈನರ್ ಹಾಗೂ ಅನಿಮೇಟರ್ ಆಗಿಯೂ ಕೆಲಸ ಮಾಡಿದ್ದಾರೆ. ಸಾಕ್ಷ್ಯಚಿತ್ರಗಳಿಗೆ ಸಹನಿರ್ದೇಶಕರಾಗಿ ಕೆಲಸ ಮಾಡಿದ ಅನುಭವವಿದೆ. ಮಕ್ಕಳ ಹಾಗೂ ಭಾರತೀಯ ಆಟಗಳ ಬಗ್ಗೆ ಪಿಎಚ್.ಡಿ. ಅಧ್ಯಯನವನ್ನು ಕೈಗೊಂಡಿದ್ದಾರೆ. ಕಲೆಯ ಜೊತೆಯಲ್ಲಿ ಅನೇಕ ಸಾಮಾಜಿಕ ಕಾರ್ಯಕ್ರಮಗಳು ಮತ್ತು ವ್ಯವಸಾಯ ಚಟುವಟಿಕೆಗಳಲ್ಲಿ ಉತ್ಸಾಹದಿಂದ ತೊಡಗಿಸಿ ಕೊಂಡಿರುವ ಇವರು ತಮ್ಮ ತಾತನವರ ಬಗೆಗೆ ಅಮೂಲ್ಯ ಮಾಹಿತಿಗಳನ್ನು ಸಂಗ್ರಹಿಸಿ ನೀಡಿರುವ ಈ ಕೃತಿಯು ಕನ್ನಡ ಕಲಾಚರಿತ್ರೆಗೆ ಭರವಸೆಯ ಸೇರ್ಪಡೆ.

ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಕನ್ನಡ ಭವನ, ಮೇಲ್ಮನೆ, ಚಾಲುಕ್ಯ ವಿಭಾಗ,
ಜೆ.ಸಿ. ರಸ್ತೆ, ಬೆಂಗಳೂರು – 560 002
Email: shilpakala.academy@gmail.com,
Web: www.karnatakashilpakalaacademy.org
080- 22278725